# ಅಖಿಲ ಭಾರತ ಪತ್ರಿಕೆ

## ಮೇ – 2013



## ಸ್ವಾಮಿ ವಿವೇಕಾನಂದರ ನೂರೈವತ್ತನೆಯ
## ಜನ್ಮ ದಿನದ ನಿಮಿತ್ತ ವಿಶೇಷ ಸಂಚಿಕೆ



*"Let my heart-beats measure the footsteps of God ..."*

- Sri Aurobindo

# ಅಖಿಲ ಭಾರತ ಪತ್ರಿಕೆ


**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org

**ಬೆಲೆ : 15/–**


## ಪರಿವಿಡಿ

ಶ್ರೀ ಅರವಿಂದರ ಬರಹಗಳಲ್ಲಿ

**ಸ್ವಾಮಿ ವಿವೇಕಾನಂದರು ಮತ್ತು ಶ್ರೀ ರಾಮಕೃಷ್ಣರು***

ಸ್ವಾಮಿ ವಿವೇಕಾನಂದರ ನೂರೈವತ್ತನೆಯ ಜನ್ಮ ದಿನದ ನಿಮಿತ್ತ ವಿಶೇಷ ಸಂಚಿಕೆ

ಅಮೆರಿಕೆಯ ಚಿಕಾಗೋ ನಗರದಲ್ಲಿ ಸೆಪ್ಟೆಂಬರ್ 11, 1893 ರಂದು ಜರುಗಿದ ಧರ್ಮಗಳ ಜಾಗತಿಕ ಸಭೆಯಲ್ಲಿ ಸ್ವಾಮಿ ವಿವೇಕಾನಂದರು ನೀಡಿದ ಉಪನ್ಯಾಸ.

**ಸ್ವಾಮಿ ವಿವೇಕಾನಂದರ ಮಾರ್ಗದರ್ಶನ :**
ಮುತ್ತನ್ನು ಸೃಷ್ಟಿಸುವ ಮುತ್ತಿನ ಚಿಪ್ಪಿನ ಹಾಗೆ ಆಗಿರಿ
– ಅದು ಯಶಸ್ಸಿನ ಮಾರ್ಗ

**ಅನು : ಶ್ರೀ ಎಸ್. ಆರ್. ಮಳಗಿ**


1. ಸ್ವಾಮಿ ವಿವೇಕಾನಂದರು 4
2. ಅವರ ಮಣಿಹ 4
3. ಧೀರೋದಾತ್ತ ಆತ್ಮ 4
4. ಶ್ರೀ ರಾಮಕೃಷ್ಣ ಪರಮಹಂಸರು 5
5. ಸ್ವಾಮಿ ವಿವೇಕಾನಂದರ ಧ್ವನಿ ಸೆರೆಮನೆಯಲ್ಲಿ ಕೇಳಿ ಬಂದಿತು 5
6. ಜೀವನದ ಮೊದಲ ದಿನಗಳಲ್ಲಿ ನನ್ನ ಮೇಲಾದ ಬೌದ್ಧಿಕ ಪ್ರಭಾವ 6
7. ಶ್ರೀ ರಾಮಕೃಷ್ಣರಿಂದ ದೊರೆತ ಮೂರು ಸಂದೇಶಗಳು 7
8. ಸ್ವಾಮಿ ವಿವೇಕಾನಂದರ ಕೊಡುಗೆ 8
9. ಹಳೆಯದನ್ನು ಉಳಿಸಿಕೊಳ್ಳುವುದು ಮತ್ತು ಅದನ್ನು ಪುನಃ ಸೃಷ್ಟಿಸುವುದು 8
10. ಹಿಂದೂ ಧರ್ಮದ ಅನಂತ ವೈವಿಧ್ಯ 9
11. ಪ್ರತಿಯೊಬ್ಬ ಮನುಷ್ಯ ತನ್ನದೇ ಧರ್ಮ ಹೊಂದಿರಬೇಕು 10
12. ಭಾರತದಿಂದ ಹೊರಸೂಸಿ ಹರಡುತ್ತಿರುವ ಪ್ರಕಾಶಮಯ ಸಂದೇಶ 11
13. ಭಾರತ ಮಾತೆ ಪುನರ್ಜನ್ಮ ತಳೆಯಲೇಬೇಕು, ಏಕೆಂದರೆ ಜಗತ್ತಿನ ಭವಿಷ್ಯ ಆಕೆಯ ಪುನರ್ಜನ್ಮವನ್ನು ಬೇಡುತ್ತದೆ 11
14. ಜಗತ್ತಿನ ಮೇಲೆ ಆಧ್ಯಾತ್ಮಿಕ ಪ್ರಭುತ್ವವನ್ನು ವಿಸ್ತರಿಸುವುದು 12
15. ಶ್ರೀ ರಾಮಕೃಷ್ಣರ ಜೀವನ : ಹಿಂದುತ್ವದ ಸಂದೇಶ 13
16. ಮಾನವನಲ್ಲಿ ದೈವೀ ವೈಭವ 15
17. ಅಂತರಂಗದ ಬೆಳಕು – ಭವಿಷ್ಯದ ಸತ್ಯ 17
18. ನೇರ ಮಾರ್ಗದಿಂದ ಜ್ಞಾನ ದೊರಕಿಸುವ ಧೀಶಕ್ತಿ ಬೆಳೆಸಿಕೊಳ್ಳುವುದು 17
19. ಸ್ವಾಮಿ ವಿವೇಕಾನಂದರು ಮೇಲಿಂದ ಮೇಲೆ ಸಂದರ್ಭೋಚಿತವಾಗಿ ಹೇಳುತ್ತಿದ್ದ ಉಪನಿಷತ್ತಿನಲ್ಲಿಯ ಎರಡು ಪಕ್ಷಿಗಳ ದೃಷ್ಟಾಂತದ ಕತೆ 19
20. ಸ್ವಾಮಿ ವಿವೇಕಾನಂದರ ಮಾರ್ಗ 21
21. ಹೆಚ್ಚು ಪರಿಪೂರ್ಣ ಸಮನ್ವಯದೆಡೆಗೆ 22
22. ಮನೋಧರ್ಮದ ಪಡಿಯಚ್ಚನ್ನು ಮುರಿದು ಹಾಕಿರಿ, ಅದರಿಂದಾಗಿ ಆತ್ಮ ಬದುಕುವಂತಾಗುವುದು 24
23. ಎರಡು ಸೂಕ್ತಿಗಳು 26
24. ಸುಳಿವು, ಸೂಚನೆಗಳು – ಸಂಕೋಲೆಗಳಲ್ಲ 27
25. ಸನ್ಯಾಸ ಮತ್ತು ವೈರಾಗ್ಯ 28
26. ಆಧ್ಯಾತ್ಮಿಕ ಏಕತೆ 30
27. ನಿಜವಾದ ಮುಕ್ತಿ 31
28. ಅವತಾರದ ಪರಿಕಲ್ಪನೆ 34
29. ಶ್ರೇಷ್ಠಗತ ಕಾಲ, ಶ್ರೇಷ್ಠತರ ಭವಿಷ್ಯತ್ಕಾಲ 36
30. ಶ್ರೀ ರಾಮಕೃಷ್ಣರ ಶ್ರೇಷ್ಠ ಕೊಡುಗೆ 39
31. ಸೂರ್ಯ ಪ್ರಕಾಶಿತ ಪಥ – ಅತಿ ಶೀಘ್ರವಾದ ಮಾರ್ಗ 42
32. ಶ್ರೀ ರಾಮಕೃಷ್ಣರು ಹೇಳಿದ ವಕಾಲಂ ಎಂದರೆ ಅಧಿಕಾರ ವಹಿಸಿ ಕೊಡುವುದು 44
33. ಬೆಕ್ಕಿನ ಮರಿಯ ವಿಧಾನ 45

| | |
|---|---|
| 34. ಅದು ಅಹಂಕಾರವಲ್ಲ | 46 |
| 35. ಯೋಗ ಮತ್ತು ಉತ್ಕ್ರಾಂತಿ | 48 |
| **ಅನುಬಂಧ :** ಒಂದು ನೂರಾಇಪ್ಪತ್ತು ವರ್ಷಗಳ ಹಿಂದೆ | 49 |
| **ವಾರ್ತಾಪತ್ರ** | **52** |


* 1993 ರಲ್ಲಿ ಇದೇ ಶೀರ್ಷಿಕೆಯಡಿಯಲ್ಲಿ 35 ಅವತರಣಿಕೆಗಳು ಪ್ರಕಟವಾಗಿದ್ದವು. ಅವುಗಳನ್ನು ಕನ್ನಡಕ್ಕೆ ಇಂಗ್ಲೀಷಿನಿಂದ ಭಾಷಾಂತರಿಸಿದವರು ಅಖಿಲ ಭಾರತ ಪತ್ರಿಕೆಯ ಆಗಿನ ಸಂಪಾದಕರಾಗಿದ್ದ ಶ್ರೀ ಎಸ್.ಆರ್. ಮಳಗಿ ಅವರು. ಅಲ್ಪ, ಸ್ವಲ್ಪ ಬದಲಾವಣೆಗಳೊಂದಿಗೆ ಆ ಲೇಖನಗಳನ್ನೇ ಮತ್ತೆ ಅಖಿಲ ಭಾರತ ಪತ್ರಿಕೆಯ ಸೆಪ್ಟೆಂಬರ್ 2003 ರ ಸಂಚಿಕೆಯಲ್ಲಿ ಪ್ರಕಟಿಸಲಾಗಿತ್ತು. ಈಗ ಮತ್ತೆ ಆ ಲೇಖನಗಳನ್ನೇ ಈ ಸಂಚಿಕೆಯಲ್ಲಿ ಪ್ರಕಟಿಸುತ್ತಿದ್ದೇವೆ. ಶ್ರೀ ಮಳಗಿ ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. (ಸಂ).

ಭಗವಾನ್ ಶ್ರೀ ರಾಮಕೃಷ್ಣ ಪರಮಹಂಸರ ವ್ಯಕ್ತಿ–ವಿಶಿಷ್ಟತೆಯಿಂದ ಹೊರಸೂಸಿ ಬಂದ ಸಂದೇಶವೇನಾಗಿತ್ತು? ಜಗತ್ತನ್ನು ಅಲುಗಾಡಿಸಲು ಸಿಂಹ ಸದೃಶ ಹೃದಯವುಳ್ಳ ಸ್ವಾಮಿ ವಿವೇಕಾನಂದರ ವಾಕ್ಪ್ರವಾಹದ ತಿರುಳು ಏನನ್ನು ಅರಸಿಕೊಂಡು ಹೋಗಿತ್ತು? ಆ ವಿಷಯವೆಂದರೆ ಇದು : ಸಿಂಹಾಸನದ ಮೇಲೆ ಕುಳಿತಿರುವ ರಾಜನಿಂದ ಹಿಡಿದು ಶ್ರಮಜೀವಿ ಕೂಲಿಕಾರನ ವರೆಗೆ, ಪೂಜೆ, ಸಂಧ್ಯಾ ಇತ್ಯಾದಿ ಕಾರ್ಯಗಳಲ್ಲಿ ತೊಡಗಿಕೊಂಡಿರುವ ಬ್ರಾಹ್ಮಣನಿಂದ ಹಿಡಿದು ಜನರಿಂದ ಜುಗುಪ್ಸೆಗೊಳಗಾಗಿ ಅಲೆದಾಡುತ್ತಿರುವ ಶೂದ್ರನ ವರೆಗೆ ಇರುವ ಈ ಮೂವತ್ತುಮೂರು ಕೋಟಿ ಜನರೆಲ್ಲರಲ್ಲಿ ಭಗವಂತ ಜೀವಿಸುತ್ತಾನೆ. ವಿಧಿ ಮತ್ತು ಮಾಯೆಗಳ ಪ್ರಾಬಲ್ಯಕ್ಕೊಳಗಾಗುವುದನ್ನು ಅಯ್ದುಕೊಳ್ಳದೆ ಇದ್ದರೆ ನಾವು ಸರ್ವಸಮರ್ಥ ಭಗವಂತನ ಮುಖ ಮತ್ತು ಪ್ರಕಟಣೆಗಳಾಗುತ್ತೇವೆ.

– ಶ್ರೀ ಅರವಿಂದರು



## [1]
## ಸ್ವಾಮಿ ವಿವೇಕಾನಂದರು

(17/332) ಅತ್ಯದ್ಭುತ ಶಕ್ತಿಯ ಆತ್ಮವುಳ್ಳ ವ್ಯಕ್ತಿ ಎಂದಾದರೂ ಕಂಡು ಬಂದಿದ್ದರೆ ಅವರು ಸ್ವಾಮಿ ವಿವೇಕಾನಂದರು, ಅವರು ಮಾನವರಲ್ಲಿ ಸಿಂಹ ಸದೃಶರಾಗಿದ್ದರು. ಅವರ ಪ್ರಭಾವ ಇಂದಿಗೂ ಬ್ರಹತ್ ಪ್ರಮಾಣದಲ್ಲಿ ಕಾರ್ಯ ಕೈಕೊಳ್ಳುತ್ತಿರುವುದರ ಗ್ರಹಿಕೆ ನಮಗಾಗುತ್ತದೆ. ಅದು ಹೇಗೆ, ಎಲ್ಲಿ ಎಂಬುದು ನಮಗೆ ತಿಳಿಯದು. ಇನ್ನೂ ರೂಪ ತಾಳದ ಯಾವುದರಲ್ಲೋ ಸಿಂಹ ಸದೃಶವಾದ, ಭವ್ಯವಾದ, ಅಂತರ್ಬೋಧೆಗೆ ಗೋಚರವಾಗುವ, ಮೇಲಕ್ಕೆತ್ತಿ ಒಯ್ಯುವ ಏನೋ ಒಂದು ಭಾರತದ ಆತ್ಮವನ್ನು ಪ್ರವೇಶಿಸಿದೆ, ಮತ್ತು ನಾವು “ಅದೋ ನೋಡಿರಿ ಸ್ವಾಮಿ ವಿವೇಕಾನಂದರು ತಮ್ಮ ಮಾತೃಭೂಮಿಯ ಆತ್ಮದಲ್ಲಿ, ಅವಳ ಮಕ್ಕಳ ಆತ್ಮಗಳಲ್ಲಿ ಇನ್ನೂ ಜೀವಿಸಿದ್ದಾರೆ” ಎಂದು ಹೇಳುತ್ತೇವೆ.

## [2]
## ಅವರ ಮಣಿಹ

(22/150) ಜಗತ್ತಿನ ಮನವನ್ನು ಆಧ್ಯಾತ್ಮದ ದಿಸೆಯಲ್ಲಿ ಹೊರಳಿಸಲು ಸ್ವಾಮಿ ವಿವೇಕಾನಂದರು ಬಹು ದೊಡ್ಡ ಸಾಮರ್ಥ್ಯ ಹೊಂದಿದವರಾಗುವರೆಂದು ಶ್ರೀ ರಾಮಕೃಷ್ಣರು ನಿರೀಕ್ಷಿಸಿದ್ದರೆಂದು ತೋರಿಬರುವುದು ಸತ್ಯವಾದ ಸಂಗತಿ. ಮತ್ತು ಆ ಮಣಿಹ ಗುರುವಿನಿಂದ ಶಿಷ್ಯನಿಗೆ ಬಂದಿತೆಂದು ಭಾವಿಸಬಹುದು.

## [3]
## ಧೀರೋದಾತ್ತ ಆತ್ಮ

(2/37) ಜಗತ್ತನ್ನು ಬದಲಿಸಲು ಅದನ್ನು ತಮ್ಮ ಎರಡೂ ಕೈಗಳಲ್ಲಿ ತೆಗೆದುಕೊಳ್ಳಲು ನಿಯತಿ ನಿರ್ದಿಷ್ಟರಾದ, ಧೀರೋದಾತ್ತ ಆತ್ಮವುಳ್ಳ ಸ್ವಾಮಿ ವಿವೇಕಾನಂದರ ಮುನ್ನಡೆಯ ಮಾರ್ಗವನ್ನು ಶ್ರೀ ರಾಮಕೃಷ್ಣರು ಗುರುತಿಸಿದ್ದರು. ಇದು ಭಾರತ ಬದುಕುವುದಷ್ಟಕ್ಕೇ ಅಲ್ಲ, ಗೆದ್ದುಕೊಳ್ಳುವುದಕ್ಕೂ ಎಚ್ಚತ್ತುಗೊಂಡಿದೆ ಎಂಬುದಕ್ಕೆ ಜಗತ್ತಿಗೆ ಕಾಣಿಸಿಕೊಂಡ ಮೊದಲ ಚಿಹ್ನೆಯಾಗಿತ್ತು.

## [4]

## ಶ್ರೀ ರಾಮಕೃಷ್ಣ ಪರಮಹಂಸರು

(20/36) ಶ್ರೀ ರಾಮಕೃಷ್ಣರ ಜೀವನದಲ್ಲಿ ಅತಿಮಾನುಷವೆನಿಸುವ ಆಧ್ಯಾತ್ಮಿಕ ಸಾಮರ್ಥ್ಯವನ್ನು ಕಾಣುತ್ತೇವೆ. ಮೊದಲು ಅವರ ಈ ಸಾಮರ್ಥ್ಯ ದೈವೀ ಸಾಕ್ಷಾತ್ಕಾರಕ್ಕಾಗಿ ನೇರವಾಗಿ ನುಗ್ಗಿತು, ಅದು ಸ್ವರ್ಗ ಸಾಮ್ರಾಜ್ಯವನ್ನು ಆವೇಶದಿಂದ ಗೆದ್ದುಕೊಂಡಂತಿತ್ತು. ಅನಂತರ ಅವರು ಒಂದರ ಮೇಲೊಂದರಂತೆ ಯೋಗ ವಿಧಾನಗಳ ಅನುಸಂಧಾನಗೈಯುತ್ತ ನಂಬಲಸಾಧ್ಯವಾದ ತೀವ್ರಗತಿಯಲ್ಲಿ ಪ್ರತಿಯೊಂದು ಯೋಗ ಪದ್ಧತಿಯ ಸಾರಸತ್ವವನ್ನು ಹೀರಿಕೊಂಡ ಪ್ರತಿಸಲ ಅವರು ಯೋಗ ಸಾಧನೆಯ ಹೃದಯವಾದ ದೈವೀ ಸಾಕ್ಷಾತ್ಕಾರ ಹಾಗೂ ದೈವೀ ಸಾನ್ನಿಧ್ಯವನ್ನು ತಮ್ಮದಾಗಿರಿಸಿಕೊಳ್ಳುವುದರತ್ತ ಹಿಂತಿರುಗುತ್ತಿದ್ದರು. ಇದನ್ನು ಅವರು ತಮ್ಮ ಭಕ್ತಿಯ ಸಾಮರ್ಥ್ಯದಿಂದ, ಅನೇಕ ಅನುಭವಗಳಿಂದ ಅಂತರ್ಯದಲ್ಲಿ ಉಂಟಾದ ಆಧ್ಯಾತ್ಮಿಕತೆಯಿಂದ ಮತ್ತು ಅಂತರ್ಬೋಧೆಯ ಜ್ಞಾನದ ಸ್ವಯಂಪ್ರೇರಣೆಯ ಲೀಲೆಯಿಂದ ಸಾಧಿಸುತ್ತಿದ್ದರು. ಈ ಸಾಧನೆಯ ಉದ್ದೇಶ ಇಂದು ಮಾನವತೆಗೆ ಅತಿ ಅವಶ್ಯವಾದ ಸತ್ಯವನ್ನು ವರಿಷ್ಠ ಆತ್ಮದ ಶ್ರೇಷ್ಠ ಹಾಗೂ ನಿರ್ಣಾಯಕ ಅನುಭವದಲ್ಲಿ ಉದಾಹರಣೆಯ ಮೂಲಕ ತೋರಿಸುವುದಾಗಿತ್ತು. ಈ ಸತ್ಯದೆಡೆಗೆ ಸಾಗಲೆಂದೇ ಜಗತ್ತು ಬಹಳ ಕಾಲದಿಂದ, ಕಲಹ ಮಾಡುವ ಬೇರೆ ಬೇರೆ ಮತ–ಪಂಥಗಳಲ್ಲಿ ವಿಭಜನೆ ಹೊಂದಿ, ಬಹಳ ತೊಂದರೆಗೊಳಗಾಗಿ ಶ್ರಮಿಸುತ್ತ ಬಂದಿದೆ. ಎಲ್ಲ ಮತ–ಪಂಥಗಳು ಸಮಗ್ರವಾದ ಈ ಏಕೈಕ ಸತ್ಯದ ರೂಪಗಳು ಹಾಗೂ ಭಾಗಗಳಾಗಿವೆ ಮತ್ತು ಎಲ್ಲ ಯೋಗ ಸಾಧನೆಗಳು ತಮ್ಮ ಭಿನ್ನ ಭಿನ್ನ ರೀತಿಗಳಲ್ಲಿ ಏಕೈಕ ಸರ್ವೋಚ್ಚ ಅನುಭವ ಪಡೆಯಲು ಶ್ರಮಿಸುತ್ತಿವೆ.

**ಶ್ರೀ ಅರವಿಂದರು ತಮ್ಮನ್ನು ಕುರಿತು**

## [5]

## ಸ್ವಾಮಿ ವಿವೇಕಾನಂದರ ಧ್ವನಿ ಸೆರೆಮನೆಯಲ್ಲಿ ಕೇಳಿ ಬಂದಿತು

(26/68) ಗುರುವಿನ ಸಹಾಯವಿಲ್ಲದೆ ನಾನು ಯೋಗ ಸಾಧನೆಯನ್ನು 1904 ರಲ್ಲಿ ಪ್ರಾರಂಭಿಸಿದೆ. 1908 ರಲ್ಲಿ ಮಹಾರಾಷ್ಟ್ರದ ಯೋಗಿಯೊಬ್ಬರಿಂದ ನಾನು ಮಹತ್ವದ ಸಹಾಯ ಪಡೆದೆ ಮತ್ತು ನನ್ನ ಸಾಧನೆಯ ತಳಹದಿಯನ್ನು ಕಂಡುಕೊಂಡೆ, ಆದರೆ ಅಂದಿನಿಂದ ಶ್ರೀಮಾತೆಯವರು ಭಾರತಕ್ಕೆ ಬರುವವರೆಗೆ ಬೇರೆ ಇನ್ನಾರಿಂದಲೂ



ಸಹಾಯ ಪಡೆಯಲಿಲ್ಲ. ನನ್ನ ಮುಂಚಿನ ಅಥವಾ ನಂತರದ ಸಾಧನೆಯು ಗ್ರಂಥಗಳ ಆಧಾರದ ಮೇಲೆ ಸ್ಥಾಪಿತವಾಗಿರಲಿಲ್ಲ, ಆದರೆ ನನ್ನೊಳಗಿಂದ ಹೊರಹೊಮ್ಮಿ ನನ್ನ ಮೇಲೆ ಆವರಿಸಿದ ವೈಯಕ್ತಿಕ ಅನುಭವಗಳ ಮೇಲೆ ಸ್ಥಾಪಿತವಾಯಿತು. ಆದರೆ ಜೇಲಿನಲ್ಲಿ ನನ್ನ ಹತ್ತಿರ ಗೀತೆ, ಉಪನಿಷತ್ ಗ್ರಂಥಗಳಿದ್ದವು. ಗೀತೆಯ ಯೋಗವನ್ನಾಚರಿಸುತ್ತ ಉಪನಿಷತ್ತುಗಳ ಸಹಾಯದಿಂದ ಧ್ಯಾನ ಮಾಡುತ್ತಿದ್ದೆ. ಕೇವಲ ಈ ಗ್ರಂಥಗಳಿಂದ ಮಾರ್ಗದರ್ಶನ ಸಿಕ್ಕಿತು. ತರುವಾಯ ಪಾಂಡೀಚೇರಿಯಲ್ಲಿ ಪ್ರಾರಂಭಿಸಿದ ವೇದಾಭ್ಯಾಸದಿಂದ ನಾನು ನನ್ನ ಸಾಧನೆಯಲ್ಲಿ ಮಾರ್ಗದರ್ಶನ ಪಡೆಯುವುದಕ್ಕಿಂತಲೂ ಹೆಚ್ಚಾಗಿ ಈ ವರೆಗೆ ಪಡೆದಿದ್ದ ಅನುಭವಗಳು ಸತ್ಯವಾದವುಗಳು ಎಂಬುದನ್ನು ಕಂಡುಕೊಂಡೆ. ಕೆಲವು ಸಂದರ್ಭಗಳಲ್ಲಿ ಯಾವುದೊಂದು ಪ್ರಶ್ನೆ ಇಲ್ಲವೆ ಕಠಿಣ ಸಮಸ್ಯೆ ಉದ್ಭವಿಸಿದಾಗ ನಾನು ಭಗವದ್ಗೀತೆಯತ್ತ ಹೆಚ್ಚಿನ ಪ್ರಕಾಶಕ್ಕಾಗಿ ಹೊರಳುತ್ತಿದ್ದೆ ಮತ್ತು ಅದರಿಂದ ನೆರವನ್ನು, ತಕ್ಕ ಉತ್ತರವನ್ನು ಸಾಮಾನ್ಯವಾಗಿ ಪಡೆದುಕೊಳ್ಳುತ್ತಿದ್ದೆ.... ನಾನು ಸೆರೆಮನೆಯ ಏಕಾಂತದಲ್ಲಿ ಧ್ಯಾನದಲ್ಲಿರುತ್ತಿದ್ದಾಗ, ಹದಿನೈದು ದಿನಗಳ ಕಾಲ ಸ್ವಾಮಿ ವಿವೇಕಾನಂದರ ಧ್ವನಿ ನನಗೆ ಸತತ ಕೇಳಿಬರುತ್ತಿತ್ತೆಂಬುದು ಸತ್ಯ ಸಂಗತಿ, ಆಗ ಅವರ ಸಾನ್ನಿಧ್ಯದ ಅರಿವೂ ನನಗಾಗುತ್ತಿತ್ತು.... ಅವರ ಆ ಧ್ವನಿ ಒಂದು ವಿಶಿಷ್ಟ ಮತ್ತು ಸೀಮಿತ ಆದರೆ ಅತಿ ಮಹತ್ವದ ಆಧ್ಯಾತ್ಮಿಕ ಕ್ಷೇತ್ರವನ್ನು ಮಾತ್ರ ಕುರಿತು ಹೇಳುತ್ತಿತ್ತು ಮತ್ತು ಆ ವಿಷಯದ ಮೇಲೆ ಹೇಳಬೇಕಾದುದನ್ನು ಹೇಳಿದ ಕೂಡಲೆ ಆ ಧ್ವನಿ ನಿಂತುಹೋಯಿತು.

## [6]

## ಜೀವನದ ಮೊದಲ ದಿನಗಳಲ್ಲಿ ನನ್ನ ಮೇಲಾದ ಬೌದ್ಧಿಕ ಪ್ರಭಾವ

(Sri Aurobindo : Archives & Research Dec. 1983. p. 164)

ಹಿಂದೂ ತತ್ವಜ್ಞಾನ ಕುರಿತು ಹೇಳುವುದಾದರೆ ನಾನು ಅದನ್ನು ಕುರಿತು ವ್ಯಾಸಂಗ ಮಾಡಿರಲಿಲ್ಲ, ಆದರೆ ವೇದಾಂತದ ಸಾಮಾನ್ಯ ವಿಚಾರಗಳನ್ನು ತಿಳಿದುಕೊಂಡೆ. ಮ್ಯಾಕ್ಸಮುಲರ್‌ರ ಗ್ರಂಥಗಳಲ್ಲಿ ಹಾಗೂ ಕೆಲವು ಸಾಮಾನ್ಯ ಬರಹಗಳಲ್ಲಿ ಇದ್ದ ಕೆಲವೊಂದು ವಿಚಾರಗಳನ್ನು ಓದಿ ತಿಳಿದುಕೊಂಡಿದ್ದನ್ನು ಬಿಟ್ಟರೆ ಇತರ ಶಾಸ್ತ್ರಗಳ ಬಗ್ಗೆ ನಾನೇನನ್ನೂ ತಿಳಿದುಕೊಂಡಿರಲಿಲ್ಲ. ಇಂಗ್ಲಂಡಿನಲ್ಲಿದ್ದಾಗ 'ಆತ್ಮ' ಕುರಿತಾದ ವಿಚಾರ ನನ್ನ ಮನಸ್ಸೆಳೆದಿತ್ತು. ಆತ್ಮವೆಂದರೆ ಏನಿರಬಹುದು ಎಂಬುದನ್ನು ಖಚಿತವಾಗಿ ತಿಳಿದುಕೊಳ್ಳಲು ಯತ್ನಿಸಿದೆ.... ಮೊದಲು ನನ್ನ ಮೇಲೆ

ಬಹಳ ಪ್ರಭಾವ ಬೀರಿದ ಭಾರತೀಯ ಬರಹಗಳೆಂದರೆ ಉಪನಿಷತ್ತುಗಳು, ಅವು ನನ್ನಲ್ಲಿ ಬಲವಾದ ಆಸಕ್ತಿ, ಉತ್ಸಾಹಗಳನ್ನು ಹುಟ್ಟಿಸಿದ್ದರಿಂದ ಅವುಗಳಲ್ಲಿ ಕೆಲವನ್ನು ನಂತರ ಭಾಷಾಂತರಿಸಿದೆ. ಭಾರತದಲ್ಲಿ ನಾನು ವಾಸಿಸಲು ಪ್ರಾರಂಭಿಸಿದಾಗ ಶ್ರೀ ರಾಮಕೃಷ್ಣರ ವಚನಗಳು, ಸ್ವಾಮಿ ವಿವೇಕಾನಂದರ ಲೇಖನಗಳು, ಭಾಷಣಗಳು ನನ್ನ ಮೇಲೆ ಬಲವತ್ತರವಾದ ಪ್ರಭಾವ ಬೀರಿದವು, ಇದೆಲ್ಲ ಭಾರತೀಯ ಆಧ್ಯಾತ್ಮಿಕತೆಯ ಪ್ರಥಮ ಅನುಭವವಾಗಿತ್ತು, ಆದರೆ ಭಾರತೀಯ ತತ್ವಜ್ಞಾನದ ರೂಪದಲ್ಲಿರಲಿಲ್ಲ. ಅವು ನನ್ನನ್ನು ಯೋಗ ಸಾಧನೆಯಲ್ಲಿ ತೊಡಗುವುದರತ್ತ ಕೊಂಡೊಯ್ಯಲಿಲ್ಲ, ಅವುಗಳ ಪ್ರಭಾವ ಕೇವಲ ಮಾನಸಿಕ ಮಟ್ಟದ್ದಾಗಿತ್ತು.

## [7]
## ಶ್ರೀ ರಾಮಕೃಷ್ಣರಿಂದ ದೊರೆತ ಮೂರು ಸಂದೇಶಗಳು

(SA : A & R April 1987 pp. 11–12) ಡಿಸೆಂಬರ್ 5, 1912 ರಂದು ದಿನಚರಿ ಪುಸ್ತಕದಲ್ಲಿ ದಾಖಲಿಸಿದ್ದು :

**ಅಕ್ಟೋಬರ್ 18 :** ಇಂದು ಶ್ರೀ ರಾಮಕೃಷ್ಣರಿಂದ ಮೂರನೆಯ ಹಾಗೂ ಕೊನೆಯ ಸಂದೇಶ ದೊರೆಯಿತು. ಮೊದಲ ಸಂದೇಶ ಬಡೋದೆಯಲ್ಲಿ ದೊರೆತಿತ್ತು : "ಅರವಿಂದೋ ಮಂದಿರ ರಚಿಸು, ಮಂದಿರ ರಚಿಸು" ಎಂಬುದು ಮತ್ತು (ಬಾಲವನ್ನು ಬಾಯಿಯೊಳಗಿರಿಸಿಕೊಳ್ಳುತ್ತ) ತನ್ನನ್ನು ತಾನೇ ನುಂಗಿಕೊಳ್ಳುತ್ತಿದ್ದ "ಪ್ರವೃತ್ತಿ" ಸರ್ಪದ ಕತೆ. ಪಾಂಡೀಚೇರಿಗೆ ಬಂದು ಶಂಕರ ಚೆಟ್ಟಿಯವರ ಮನೆಯಲ್ಲಿ ವಾಸಿಸುತ್ತಿದ್ದಾಗ ಎರಡನೆಯ ಸಂದೇಶ ದೊರೆತಿತ್ತು. ಅದರ ಶಬ್ದಗಳು ಕಳೆದು ಹೋಗಿವೆ, ಆದರೆ ಅದು ನಿಮ್ಮ ಆತ್ಮದಲ್ಲಿ ಉನ್ನತ ಸತ್ತೆಯನ್ನು ರೂಪಿಸುವುದಕ್ಕೆ ಆದೇಶದ ರೂಪದಲ್ಲಿತ್ತು, ಅದರೊಂದಿಗೆ ನನ್ನ ಯೋಗ ಸಾಧನೆ ಮುಕ್ತಾಯದ ಹಂತಕ್ಕೆ ಬಂದಾಗ ಮತ್ತೊಮ್ಮೆ ಸಂದೇಶ ಕೊಡುವ ಭರವಸೆಯನ್ನೂ ಕೊಡಲಾಗಿತ್ತು. ಮೂರನೆಯ ಸಂದೇಶ ಹೀಗಿತ್ತು :

**ಅಕ್ಟೋಬರ್ 18, 1912 :**

ಕರ್ಮ ಸನ್ಯಾಸವನ್ನು ಪೂರ್ತಿಗೊಳಿಸು,
ವಿಚಾರ ಸನ್ಯಾಸವನ್ನು ಪೂರ್ತಿಗೊಳಿಸು,
ಭಾವನೆಯ ಸನ್ಯಾಸವನ್ನು ಪೂರ್ತಿಗೊಳಿಸು
ಇದೇ ನನ್ನ ಕೊನೆಯ ಸಂದೇಶ.



## [8]
## ಸ್ವಾಮಿ ವಿವೇಕಾನಂದರ ಕೊಡುಗೆ

(14/8) ಭಾರತೀಯರಲ್ಲಿ ಒಂದು ವರ್ಗದ ಜನರು ಅದೇಕೆ ಇನ್ನೂ ಎಲ್ಲ ಕ್ಷೇತ್ರಗಳಲ್ಲಿ ಯುರೋಪಿನ ಸಂಸ್ಕೃತಿಯಿಂದ ಅಷ್ಟೊಂದು ಸಮ್ಮೋಹನ–ಕ್ಕೊಳಗಾಗಿದ್ದಾರೆ ಮತ್ತು ರಾಜಕೀಯ ಕ್ಷೇತ್ರದಲ್ಲಿ ಆ ಸಂಸ್ಕೃತಿ ಅದೇಕೆ ಅವರನ್ನು ಅಷ್ಟೊಂದು ಸಮ್ಮೋಹನಗೊಳಿಸಿದೆ? ಏಕೆಂದರೆ ಅವರು ಯುರೋಪಿನ ಭಾಗಗಳಲ್ಲಿ ಎಲ್ಲ ಸಾಮರ್ಥ್ಯ, ಸೃಜನಕ್ರಿಯೆ ಹಾಗೂ ಚಟುವಟಿಕೆಗಳಿರುವುದನ್ನು ಮತ್ತು ಭಾರತದ ಭಾಗಗಳಲ್ಲಿ ಎಲ್ಲ ನಿಶ್ಚಲತೆ, ಇಲ್ಲವೆ ಜಡ, ಅಸಮರ್ಥ ಆತ್ಮ ಸಮರ್ಥನೆಯ ದೌರ್ಬಲ್ಯ ಕಂಡುಬರುವುದನ್ನು ನೋಡಿದರು. ಆದರೆ ಭಾರತೀಯ ಚೈತನ್ಯವು ಪ್ರತಿಕ್ರಿಯೆ ತೋರಲು, ಬಲದಿಂದ ದಾಳಿಗೈಯಲು ಮತ್ತು ಜಯೋತ್ಕರ್ಷದಿಂದ ಸೃಜನ ಕಾರ್ಯವೆಸಗಲು ಸಮರ್ಥವಾದೆಡೆಗಳಲ್ಲೆಲ್ಲ ಯುರೋಪಿನ ಮಾಯಾಜಾಲ ಕೂಡಲೆ ತನ್ನ ವಶೀಕರಣ ಶಕ್ತಿಯನ್ನು ಕಳೆದುಕೊಳ್ಳತೊಡಗಿದೆ. ಯುರೋಪಿನಿಂದ ಬರುತ್ತಿದ್ದ ಧಾರ್ಮಿಕ ದಾಳಿಯ ಭಾರ ಈಗ ಯಾರ ಮೇಲೂ ಬೀಳುತ್ತಿಲ್ಲ, ಆರಂಭದಲ್ಲಿ ಇದು ಬಹಳ ಬಲವತ್ತರವಾಗಿತ್ತು. ಏಕೆಂದರೆ ಹಿಂದೂ ಸಂಸ್ಕೃತಿಯ ಪುನರುಜ್ಜೀವನದ ಸೃಜನಶೀಲ ಚಟುವಟಿಕೆಗಳು ಹಿಂದೂ ಧರ್ಮವನ್ನು ಜೀವಂತ ಹಾಗೂ ವಿಕಾಸಶೀಲವನ್ನಾಗಿ ಮಾಡಿವೆ, ಅಲ್ಲದೆ ಅವು ಸುಭದ್ರ, ಜಯಶೀಲ ಮತ್ತು ಆತ್ಮವಿಶ್ವಾಸಾತ್ಮಕವಾಗಿ ದೃಢಪಡಿಸುವ ಸಾಮರ್ಥ್ಯವನ್ನು ತಂದುಕೊಟ್ಟಿವೆ. ಈ ಕಾರ್ಯಕ್ಕೆ ಎರಡು ಪ್ರಮುಖ ಘಟನೆಗಳು ಅಧಿಕಾರ ಮುದ್ರೆಯನ್ನೊತ್ತಿದವು : ಥಿಯೋಸೋಫಿಕಲ್ ಆಂದೋಲನ ಹಾಗೂ ಚಿಕ್ಯಾಗೋ ನಗರದಲ್ಲಿ ನಡೆದ ವಿಶ್ವ ಧರ್ಮಗಳ ಸಭೆಯಲ್ಲಿ ಸ್ವಾಮಿ ವಿವೇಕಾನಂದರು ಕಾಣಿಸಿಕೊಂಡುದುದು. ಇವೆರಡೂ ಘಟನೆಗಳು ಭಾರತ ಪ್ರತಿಪಾದಿಸುವ ಆಧ್ಯಾತ್ಮಿಕ ವಿಚಾರಗಳನ್ನು ಎತ್ತಿ ತೋರಿಸಿದವು, ಇವುಗಳಿಂದಾಗಿ ಭಾರತ ಈ ನಂತರ ಸ್ವ–ರಕ್ಷಣೆಯ ಆಧಾರದ ಮೇಲೆ ಒತ್ತುಕೊಡದೆ ಪಾಶ್ಚಾತ್ಯರ ಭೌತಿಕವಾದದ ಮನೋವೃತ್ತಿಯ ಮೇಲೆ ದಾಳಿಮಾಡುವಂತಾಯಿತು.

## [9]
## ಹಳೆಯದನ್ನು ಉಳಿಸಿಕೊಳ್ಳುವುದು ಮತ್ತು ಅದನ್ನು ಪುನಃ ಸೃಷ್ಟಿಸುವುದು

(14/415) ಈ ಆಂದೋಲನದ ಜೊತೆಗೆ ಮತ್ತು ವಿರುದ್ಧ ದಿಶೆಯಲ್ಲಿ ಸಾಗುವ, ವಿಶಿಷ್ಟ ಹಾಗೂ ಸಾಮರ್ಥ್ಯಪೂರ್ಣವಾದ ಪ್ರವಾಹವೊಂದು ಹರಿಯತೊಡಗಿತು.

ಮೊದಲು ಅದು ಭಾರತೀಯವಾದದ್ದೆಲ್ಲವನ್ನು ಅದಿದ್ದ ಹಾಗೆ ಸಮರ್ಥಿಸುತ್ತ ಮತ್ತು ಸ್ವೀಕರಿಸುತ್ತ ಪ್ರತಿಕ್ರಿಯೆ ತೋರಿಸುವ ದಾರಿಯಲ್ಲಿ ಸಾಗಿತ್ತು. ಈ ಪ್ರೇರಣೆಯ ತರಂಗಗಳು ಇನ್ನೂ ನಮ್ಮಲ್ಲಿವೆ ಮತ್ತು ಅವುಗಳಲ್ಲಿಯ ಬಹಳಷ್ಟು ಪ್ರಭಾವಗಳು ಇನ್ನೂ ಮುಂದುವರಿಯುತ್ತಲಿವೆ, ಏಕೆಂದರೆ ಅದರ ಕಾರ್ಯ ಇನ್ನೂ ಪೂರ್ತಿಯಾಗಿಲ್ಲ. ಆದರೆ ವಾಸ್ತವದಲ್ಲಿ ಈ ಪ್ರತಿಕ್ರಿಯೆಯು ಬಹಳ ಸೂಕ್ಷ್ಮವಾಗಿ ಜೀರ್ಣಿಸಿಕೊಳ್ಳುವಿಕೆ ಮತ್ತು ಒಂದುಗೂಡುವಿಕೆಗಳ ಆರಂಭದ ಚಿಹ್ನೆಯಾಗಿದೆ. ಏಕೆಂದರೆ ಪ್ರಾಚೀನ ಕಾಲದ ವಿಷಯಗಳನ್ನು ಸಮರ್ಥಿಸಿಕೊಳ್ಳುವಾಗ ಅದು ಏಕಕಾಲದಲ್ಲಿ ಹಳೆಯ ಮತ್ತು ಹೊಸ ಮನೋವೃತ್ತಿಗಳನ್ನು ಅಂದರೆ ಹಳೆಯ ಸಾಂಪ್ರದಾಯಿಕ ಹಾಗೂ ವಿಮರ್ಶಾತ್ಮಕ ಮನೋವೃತ್ತಿಗಳನ್ನು ಒಂದುಗೂಡಿಸಿ ತೃಪ್ತಿಪಡಿಸುವ ನಿರ್ಬಂಧಕ್ಕೊಳಗಾಗಬೇಕಾಗುತ್ತದೆ. ಇದು ತನ್ನಲ್ಲಿ ಮರಳಿ ಹೋಗುವುದಷ್ಟೇ ಆಗಿರುವುದಿಲ್ಲ, ಆದರೆ ಪ್ರಜ್ಞಾಪೂರ್ವಕ ಇಲ್ಲವೆ ಪ್ರಜ್ಞೆಯಿಲ್ಲದೆ ಕೊಡಬೇಕಾದ ಮರುಮಂಡನೆ ತ್ವರಿತವಾಗಿ ಬರುವಂತೆ ಮಾಡುತ್ತದೆ. ಮತ್ತು ಹಳೆಯದರ ಮರಳುವಿಕೆಯ ಹೆಚ್ಚು ಪರಿಪಕ್ವ ರೂಪವು ಸಮನ್ವಯದ ಮರುಮಂಡನೆಯನ್ನು ತನ್ನ ತತ್ವವನ್ನಾಗಿ ತೆಗೆದುಕೊಂಡಿರುತ್ತದೆ. ಅದು ಪ್ರಾಚೀನ ಕಾಲದ ಚೈತನ್ಯದತ್ತ ತಲುಪಲು ಬಯಸಿದೆ ಮತ್ತು ಅದರ ರೂಪಗಳಿಗೆ ಗೌರವವೀಯುತ್ತ, ಬಹಳಷ್ಟು ಸಲ ಅವುಗಳಿಗೆ ಹೊಸ ಚೇತನ ತಂದುಕೊಟ್ಟು, ಸವೆದುಹೋದುದನ್ನು ತಿರಸ್ಕರಿಸಲು ಹಿಂಜರಿಯದು, ಅಲ್ಲದೆ ಹಳೆಯ ಆಧ್ಯಾತ್ಮಿಕತೆಯು ಜೀರ್ಣಿಸಿಕೊಳ್ಳಬಹುದಾದ ಹೊಸ ಆಶಯಗಳನ್ನು ಸ್ವೀಕರಿಸಲು ಇಲ್ಲವೆ ಅದರ ಭವ್ಯ ಉತ್ಕ್ರಾಂತಿಯ ವಾಹಿನಿಯನ್ನು ವಿಸ್ತರಿಸಲು ಯೋಗ್ಯವಾದುದಕ್ಕೆ ಅವಕಾಶ ಮಾಡಿಕೊಡಲು ಹಿಂದೆಗೆಯದು. ಪ್ರಾಚೀನ ಹಾಗೂ ಆಧುನಿಕ ಸಂಸ್ಕೃತಿಗಳೊಡನೆ ಮುಕ್ತವಾಗಿ ವ್ಯವಹರಿಸುವುದರಲ್ಲಿ, ಪುನರ್ರಚನೆ–ಯೊಂದಿಗೆ ಹಳೆಯದನ್ನು ಉಳಿಸಿಕೊಳ್ಳುವುದರಲ್ಲಿ ಸ್ವಾಮಿ ವಿವೇಕಾನಂದರು ತಮ್ಮ ಜೀವಿತ ಕಾಲದಲ್ಲಿ ಮೇಲ್ಪಂಕ್ತಿಯ ನೇತಾರರು ಮತ್ತು ಸಾಮರ್ಥ್ಯಪೂರ್ಣ ಪ್ರತಿಪಾದಕರಾಗಿದ್ದರು.

## [10]
## ಹಿಂದೂ ಧರ್ಮದ ಅನಂತ ವೈವಿಧ್ಯ

(14/129) ಹಿಂದೂ ತತ್ವಜ್ಞಾನ ಹಾಗೂ ಧರ್ಮಗಳಲ್ಲಿರುವ ವೈವಿಧ್ಯ ಅನಂತವಾಗಿದೆ. ಇದು ಯುರೋಪಿನ ಮನಸ್ಸಿಗೆ ಕೊನೆಯಿಲ್ಲದ್ದು, ದಿಗ್ಭ್ರಮೆ ಹುಟ್ಟಿಸುವಂತಹದು, ಬೇಸರ ತರಿಸುವಂತಹದು ಮತ್ತು ನಿರುಪಯುಕ್ತವಾದುದು



ಎಂದು ತೋರಿಬರುತ್ತದೆ. ಈ ಅನಂತತೆಯ ಅರಣ್ಯದಲ್ಲಿ ಹುಲುಸಾಗಿ ಬೆಳೆದ ಅದರ ಸಸ್ಯರಾಶಿಯನ್ನು ನೋಡಲು ಅದಕ್ಕೆ ಅಸಾಧ್ಯವಾಗಿದೆ. ಅದರ ಹಲವಾರು ರೂಪಗಳೆಲ್ಲವಕ್ಕೂ ಸಾಮಾನ್ಯವಾಗಿರುವ ಆಧ್ಯಾತ್ಮಿಕ ಜೀವನ ಯುರೋಪಿನ ಮನಸ್ಸಿಗೆ ಕಾಣದಾಗಿದೆ. ಸ್ವಾಮಿ ವಿವೇಕಾನಂದರು ಬೊಟ್ಟುಮಾಡಿ ತೋರಿಸಿದಂತೆ ಈ ಅನಂತ ವೈವಿಧ್ಯವೇ ಶ್ರೇಷ್ಠ ಧಾರ್ಮಿಕ ಸಂಸ್ಕೃತಿಯ ಲಕ್ಷಣವಾಗಿದೆ. ಸರ್ವೋಚ್ಚವಾದುದು ಅನಂತವಾಗಿದೆ ಎಂದು ಭಾರತೀಯ ಮನಸ್ಸು ಸದಾ ಸಾಕ್ಷಾತ್ಕರಿಸಿಕೊಂಡಿದೆ. ವೇದ ಕಾಲದ ಆರಂಭದಿಂದಲೆ ಪ್ರಕೃತಿಯಲ್ಲಿರುವ ಅನಂತ ಆತ್ಮವು ತನ್ನನ್ನು ಕೊನೆಯಿಲ್ಲದ ಮುಖಗಳಲ್ಲಿ ವೈವಿಧ್ಯಪೂರ್ಣವಾಗಿ ತೋರಿಸಿಕೊಡುವುದೆಂಬುದನ್ನು ಗ್ರಹಿಸಿದೆ. ಎಲ್ಲ ಮಾನವ ಕುಲಕ್ಕೆ ಒಂದೇ ಧರ್ಮವಿರಬೇಕೆಂಬ ತಾರ್ಕಿಕವಲ್ಲದ, ಆಕ್ರಮಣಕಾರಕ ವಿಚಾರಕ್ಕೆ ಪಾಶ್ಚಾತ್ಯ ಮನೋವೃತ್ತಿ ಅಂಟಿಕೊಂಡಿದೆ. ಆ ಧರ್ಮ ತನ್ನ ಸಂಕುಚಿತತೆಯ ಶಕ್ತಿಯಿಂದಾಗಿಯೆ ವಿಶ್ವವ್ಯಾಪಿಯಾಗಬೇಕು, ಒಂದೇ ಬಗೆಯ ಧರ್ಮಾಂಧತೆ, ಒಂದೇ ಪಂಥ, ಸಮಾರಂಭಗಳ ವಿಧಾನದ ಒಂದೇ ಪದ್ಧತಿ, ವಿಧಿ–ನಿಷೇಧಗಳ ಒಂದೇ ಬಗೆಯ ಸರಮಾಲೆ, ಕ್ರೈಸ್ತ ಧರ್ಮದ ಶಾಸನ ಇವುಗಳನ್ನು ಹೊಂದಿರಬೇಕು. ಈ ಸಂಕುಚಿತ ಅಸಂಬದ್ಧತೆಯೆ ಒಂದು ನಿಜವಾದ ಧರ್ಮ ಎಂದು ಅದು ಬೆಡಗಿನಿಂದ ನಡೆಯುತ್ತಿದೆ. ಅದನ್ನು ಇಲ್ಲಿ ಮನುಷ್ಯರ ಪೀಡೆಗೊಳಗಾಗಬಹುದಾದ ಹೆದರಿಕೆಯಿಂದ, ಹಾಗೂ ಬೇರೆ ಲೋಕಗಳಲ್ಲಿ ಆಗಬಹುದಾದ ಆಧ್ಯಾತ್ಮಿಕ ನಿರಾಕರಣೆ ಹಾಗೂ ದೇವರ ಭೀಕರ ನಿರಂತರ ಶಿಕ್ಷೆಯ ಹೆದರಿಕೆಯಿಂದ ಸ್ವೀಕರಿಸಬೇಕು ಎಂಬ ಭಾವನೆ ಆ ಧರ್ಮದಿಂದ ಉಂಟಾಗಿದೆ.

## [11]
## ಪ್ರತಿಯೊಬ್ಬ ಮನುಷ್ಯ ತನ್ನದೇ ಧರ್ಮ ಹೊಂದಿರಬೇಕು

(20/51) ನಮ್ಮ ಯೋಗ ಶಾಸ್ತ್ರವು ಗ್ರಹಣಶೀಲವಾದ ಮನುಷ್ಯನ ಆತ್ಮದಲ್ಲಿ ಅನಂತ ಸ್ವಾತಂತ್ರ್ಯವನ್ನೊದಗಿಸಬೇಕು. ಮಾನವ ತನ್ನಲ್ಲಿ ವಿಶ್ವಾತ್ಮಕ ಹಾಗೂ ವಿಶ್ವಾತೀತ–ವಾದುದನ್ನು ಅಂಗೀಕರಿಸುವ ರೀತಿ ಹಾಗೂ ಮಾದರಿಗಳಲ್ಲಿ ಮುಕ್ತವಾದ ಹೊಂದಿಕೊಳ್ಳುವಿಕೆ ಇದು ಅವನಲ್ಲಿಯ ಆಧ್ಯಾತ್ಮಿಕ ಜೀವನಕ್ಕಾಗಿ ಸರಿಯಾದ ಸ್ಥಿತಿಯಾಗಿರುತ್ತದೆ. ಎಲ್ಲ ಧರ್ಮಗಳ ಐಕ್ಯತೆ ಅವಶ್ಯವಾಗಿ ಅವುಗಳ ರೂಪಗಳ ವೈವಿಧ್ಯದಲ್ಲಿ ಹೆಚ್ಚುತ್ತಿರುವ ಶ್ರೀಮಂತಿಕೆಯ ಮೂಲಕ ಅಭಿವ್ಯಕ್ತಿ ಪಡೆಯಬೇಕೆಂದು ಎತ್ತಿ ತೋರಿಸಿದ ಸ್ವಾಮಿ ವಿವೇಕಾನಂದರು ಆ ಸ್ಥಿತಿಯ ಪರಿಪೂರ್ಣತೆ ಪ್ರತಿಯೊಬ್ಬ

ಮನುಷ್ಯನಿಗೆ ಅವನದೇ ಧರ್ಮವಿದ್ದಾಗ, ಅವನು ಅನುಸರಿಸುತ್ತಿರುವ ಯಾವುದೇ ಧರ್ಮ, ಪಂಥ ಇಲ್ಲವೆ ಸಾಂಪ್ರದಾಯಿಕ ರೂಪದಿಂದ ಬಂಧಿತನಾಗದೆ ಇದ್ದಾಗ ಮತ್ತು ಸರ್ವೋಚ್ಚನೊಡನೆ ಇರುವ ಸಂಬಂಧಗಳಲ್ಲಿ ತನ್ನ ಸ್ವಭಾವದ ಮುಕ್ತ ಹೊಂದಾಣಿಕೆಯಾದಾಗ ಬರುವುದೆಂದು ಹೇಳಿದ್ದರು.

## [12]
## ಭಾರತದಿಂದ ಹೊರಸೂಸಿ ಹರಡುತ್ತಿರುವ ಪ್ರಕಾಶಮಯ ಸಂದೇಶ

(1/66) ಅಷ್ಟೊಂದು ಸಾವಿರಾರು ಜನ ಪವಿತ್ರಾತ್ಮರು, ಸಾಧುಗಳು, ಸನ್ಯಾಸಿಗಳು ತಮ್ಮ ಜೀವನಾದರ್ಶಗಳಿಂದ ಬೋಧಿಸಿದ್ದಾದರೂ ಏನು? ಭಗವಾನ್ ಶ್ರೀ ರಾಮಕೃಷ್ಣ ಪರಮಹಂಸರ ವ್ಯಕ್ತಿತ್ವದಿಂದ ಹೊರಹೊಮ್ಮಿದ ಸಂದೇಶವಾದರೂ ಏನು? ತಮ್ಮ ಸಿಂಹ ಸದೃಶ ಹೃದಯದಿಂದ ಸ್ವಾಮಿ ವಿವೇಕಾನಂದರು ಜಗತ್ತನ್ನು ಅಲ್ಲಾಡಿಸಿದ ಆ ವಾಗ್ವೈಖರಿಯ ತಿರುಳಿನಲ್ಲಿ ಇದ್ದಿತಾದರೂ ಏನು? ಆ ಸಂದೇಶವೆಂದರೆ ಇದು : ಸಿಂಹಾಸನದಲ್ಲಿ ಕುಳಿತ ರಾಜನಿಂದ ಶ್ರಮಿಸುವ ಕೂಲಿಯ ವರೆಗೆ, ಸಂಧ್ಯಾವಂದನೆಯಲ್ಲಿ ಮಗ್ನನಾದ ಬ್ರಾಹ್ಮಣನಿಂದ ಜನರಿಂದ ತಿರಸ್ಕೃತನಾಗಿ ತಿರುಗಾಡುವ ಅಸ್ಪೃಶ್ಯನ ವರೆಗೆ – ಈ ಮೂವತ್ತು ಕೋಟಿ ಜನಸಂಖ್ಯೆಯ ಪ್ರಜೆಗಳಲ್ಲಿ ಪ್ರತಿಯೊಬ್ಬನ ಹೃದಯದಲ್ಲಿ ಭಗವಂತನಿದ್ದಾನೆ ಎಂಬುದು. ನಾವೆಲ್ಲಾ ದೇವರುಗಳೇ, ಸೃಷ್ಟಿಕರ್ತರೇ, ಏಕೆಂದರೆ ಭಗವಂತನ ಶಕ್ತಿ ನಮ್ಮಲ್ಲಿದೆ ಮತ್ತು ಎಲ್ಲ ಜೀವನವೂ ಸೃಷ್ಟಿಯೇ, ಹೊಸ ರೂಪಗಳನ್ನು ರಚಿಸುವುದಷ್ಟೇ ಸೃಷ್ಟಿಯಲ್ಲ, ಆದರೆ ಇದ್ದುದು ಅಳಿಯದಂತೆ ಉಳಿಸಿಕೊಳ್ಳುವುದೂ ಸೃಷ್ಟಿಯೇ, ವಿನಾಶವೂ ಕೂಡ ಸೃಷ್ಟಿಯೇ. ನಾವೇನು ಸೃಷ್ಟಿಸಬೇಕೆಂಬುದು ನಮ್ಮೊಡನಿದೆ, ಏಕೆಂದರೆ, ನಾವು ಆಯ್ದುಕೊಳ್ಳದೆ ಇದ್ದರೆ, ಮಾಯೆಯ, ಅದೃಷ್ಟದ ಗೊಂಬೆಗಳು ನಾವಲ್ಲ, ನಾವು ಸರ್ವಶಕ್ತನ ಸಾಮರ್ಥ್ಯದ ಮುಖಗಳಾಗಿದ್ದೇವೆ, ಅವನ ಅಗಣಿತ ಪ್ರಕಟ ರೂಪಗಳಾಗಿದ್ದೇವೆ.

## [13]
## ಭಾರತಮಾತೆ ಪುನರ್ಜನ್ಮ ತಳೆಯಲೇಬೇಕು, ಏಕೆಂದರೆ ಜಗತ್ತಿನ ಭವಿಷ್ಯ ಆಕೆಯ ಪುನರ್ಜನ್ಮವನ್ನು ಬೇಡುತ್ತದೆ

(1/66–67) ಭಾರತ ನಾಶವಾಗದು. ನಮ್ಮ ಜನಾಂಗ ಅಳಿದು ಹೋಗದು, ಏಕೆಂದರೆ ಮಾನವ ಕುಲದ ಭಿನ್ನ ಭಿನ್ನ ವಿಭಾಗಗಳಲ್ಲಿ ಅತ್ಯುಚ್ಚ ಹಾಗೂ ಅತ್ಯಂತ



ವೈಭವ ಭರಿತ ಅದೃಷ್ಟವು ಮಾನವ ಜನಾಂಗದ ಭವಿತವ್ಯಕ್ಕೆ ಅಗತ್ಯವಾದ ಭಾರತ ದೇಶಕ್ಕೆ ಮೀಸಲಾಗಿರುವುದು. ಭಾರತ ಮಾತೆಯೆ ಇಡಿಯ ಜಗತ್ತಿನ ಭವಿಷ್ಯತ್ತಿನ ಧರ್ಮವನ್ನು ತನ್ನಿಂದ ಹೊರಹೊಮ್ಮಿಸಿ ಕಳಿಸಬೇಕಾಗಿದೆ. ಅದು ಶಾಶ್ವತ ಧರ್ಮವಾಗಿದ್ದು ಎಲ್ಲ ಧರ್ಮ, ವಿಜ್ಞಾನ, ತತ್ವಜ್ಞಾನಗಳನ್ನು ಸಮರಸಗೊಳಿಸಿ ಇಡಿಯ ಮಾನವ ಜನಾಂಗವನ್ನು ಏಕೈಕ ಆತ್ಮವನ್ನಾಗಿ ಮಾಡಬೇಕಾಗಿದೆ. ಹಾಗೆಯೆ ನೈತಿಕ ಜೀವನದ ಕ್ಷೇತ್ರದಲ್ಲಿ ಮಾನವ ಕುಲದಿಂದ ಮ್ಲೇಚ್ಛರೂಪದ ಕಾಡುತನವನ್ನು ಹೊರತಳ್ಳಿ ಇಡಿಯ ಜಗತ್ತಿನ ಜನರನ್ನು ಆರ್ಯರನ್ನಾಗಿ ಮಾಡುವ ಮಣಿಹ ಭಾರತದ್ದಾಗಿದೆ. ಇದನ್ನು ಸಾಧಿಸಲು ಆಕೆ ತನ್ನ ಜನರನ್ನು ಮೊದಲು ಆರ್ಯರನ್ನಾಗಿ ಮಾಡಬೇಕಾಗಿದೆ.

ಈ ಘನ ಕಾರ್ಯವನ್ನು ಪ್ರಾರಂಭಿಸುವುದಕ್ಕೆಂದೇ, ಮಾನವ ಕುಲಕ್ಕೆ ಕೊಡಲಾದ ಅತ್ಯಂತ ಅದ್ಭುತ ಕಾರ್ಯದ ಹೊಣೆ ಹೊತ್ತುಕೊಳ್ಳಬೇಕಾದ ಸಿದ್ಧತೆಗೆಂದೇ ಭಗವಾನ್ ಶ್ರೀ ರಾಮಕೃಷ್ಣ ಪರಮಹಂಸರು ಅವತರಿಸಿದರು ಮತ್ತು ವಿವೇಕಾನಂದರು ಬೋಧಿಸಿದರು. ಮೊದಲು ಮೂಡಿಸಿದ ಭರವಸೆಯ ಭಾವನೆಯಂತೆ ಕಾರ್ಯ ನಡೆಯದೆ ಕುಂಠಿತವಾಗಿದ್ದರೆ ಅದಕ್ಕೆ ಕಾರಣ ನಾವು ಮತ್ತೊಮ್ಮೆ ನಮ್ಮ ಮೇಲೆ ತಮಸ್ಸಿನ ಭೀಕರ ಮೋಡಗಳು ಕವಿಯುವುದಕ್ಕೆ ಅವಕಾಶ ಮಾಡಿಕೊಟ್ಟೆವು : ಭಯ, ಸಂದೇಹ, ಅನುಮಾನ, ಆಲಸ್ಯಗಳೇ ಆ ತಮಸ್ಸಿನ ಮೋಡಗಳು. ನಮ್ಮಲ್ಲಿ ಕೆಲವರು ಒಬ್ಬರಿಂದ ಸುರಿದ ಭಕ್ತಿಯನ್ನು, ಇನ್ನೊಬ್ಬರಿಂದ ಕೊಡಲಾದ ಜ್ಞಾನವನ್ನು ಸ್ವೀಕರಿಸಿದ್ದೇವೆ, ಆದರೆ ಶಕ್ತಿಯ ಹಾಗೂ ಕರ್ಮದ ಅಭಾವದಿಂದಾಗಿ ನಮ್ಮ ಭಕ್ತಿ ಜೀವಂತವಾಗಿರುವಂತೆ ಮಾಡಿಕೊಳ್ಳಲು ಸಮರ್ಥರಾಗಿಲ್ಲ.

## [14]
## ಜಗತ್ತಿನ ಮೇಲೆ ಆಧ್ಯಾತ್ಮಿಕ ಪ್ರಭುತ್ವವನ್ನು ವಿಸ್ತರಿಸುವುದು

(1/427–28) ಭಾರತ ಅದೇಕೆ ಸಾಮರ್ಥ್ಯದಲ್ಲಿ ಜಗತ್ತಿನಲ್ಲಿಯೆ ಮೊದಲನೆಯದಾಗಬಾರದು? ಬೇರೆ ಯಾವ ದೇಶಕ್ಕೆ ಜಗತ್ತಿನ ಮೇಲೆ ಆಧ್ಯಾತ್ಮಿಕ ಪ್ರಭುತ್ವವನ್ನು ವಿಸ್ತರಿಸಲು ವಿವಾದರಹಿತ ಹಕ್ಕಿದೆ? ಇದು ಸ್ವಾಮಿ ವಿವೇಕಾನಂದರ ದಂಡಯಾತ್ರೆಯ ಯೋಜನೆಯಾಗಿತ್ತು. ತನ್ನ ಆಧ್ಯಾತ್ಮಿಕ ಘನತೆಯ ಪ್ರಭಾವದಿಂದಾಗಿ ಭಾರತ ತನ್ನ ಮಹಿಮೆಯ ಬಗ್ಗೆ ಮತ್ತೊಮ್ಮೆ ಜಾಗ್ರತಗೊಳ್ಳಲು ಸಾಧ್ಯವಿದೆ. ಈ ಮಹಿಮೆಯ ಅರಿವು ಮಾತ್ರ ಅದರ ಎಲ್ಲ ಸ್ವ–ಮೌಲ್ಯಾಪಕರ್ಷಣಕ್ಕೆ

ಕೊನೆ ಹೇಳುವುದು ಮತ್ತು ಕಳೆದು ಹೋದುದನ್ನು ಮರಳಿ ದೊರಕಿಸುವುದಕ್ಕೆ ಉಜ್ವಲ ಆಕಾಂಕ್ಷೆಯನ್ನು ಹುಟ್ಟಿಸುವುದು.

## [15]
## ಶ್ರೀ ರಾಮಕೃಷ್ಣರ ಜೀವನ : ಹಿಂದುತ್ವದ ಸಂದೇಶ

(1/799–801) ಸಂದೇಹವಾದ ತನ್ನ ಶಿಖರವನ್ನು ತಲುಪಿದ್ದಾಗ ಆಧ್ಯಾತ್ಮಿಕತೆ ತನ್ನನ್ನು ದೃಢೀಕರಿಸುವ ಕಾಲ ಸನ್ನಿಹಿತವಾಗಿತ್ತು. ಭಗವಂತನ ಪ್ರಕಟಣೆಯೆಂದಾಗಿ ಜಗತ್ತಿನ ನೈಜತೆ, ಇಂದ್ರಿಯಗಳಿಂದಾಗುವ ಗೊಂದಲದ ರಹಸ್ಯ, ಮನುಷ್ಯನ ಭವ್ಯ ಸಾಧ್ಯತೆಗಳು ಮತ್ತು ಭಗವಂತನ ಅನಿರ್ವಚನೀಯ ಪರಮಾನಂದ ಇವುಗಳನ್ನು ನಿರ್ವಿವಾದ ವಿಷಯಗಳನ್ನಾಗಿ ಮಾಡಬೇಕಾಗಿತ್ತು. ಈ ಕಾರ್ಯವನ್ನು ಪೂರೈಸುವುದರ ಪ್ರಾರಂಭಕ್ಕಾಗಿ ಶ್ರೀ ರಾಮಕೃಷ್ಣರು ಅವತರಿಸಿದರು. ಮತ್ತು ಬುದ್ಧನು ಅವತರಿಸಿದ ನಂತರದ ಎರಡು ಸಾವಿರ ವರುಷಗಳಿಗಿಂತಲೂ ಹೆಚ್ಚಿನ ಕಾಲಾವಧಿಯಲ್ಲಿ ಆಗಿದ್ದ ಎಲ್ಲ ಬೆಳವಣಿಗೆಯು ದಕ್ಷಿಣೇಶ್ವರದ ಅವತಾರ ಪುರುಷ ಶ್ರೀ ರಾಮಕೃಷ್ಣರ ಆಧ್ಯಾತ್ಮಿಕ ಬೋಧನೆ ಹಾಗೂ ಅನುಭವಗಳ ಸಾಮರಸ್ಯದ ಸಿದ್ಧತೆಯಾಗಿತ್ತು.

ಭಾರತವು ಯುಗ–ಯುಗಾಂತರಗಳಿಂದ ಪಾಲಿಸುತ್ತ ಬಂದಿದ್ದ ಯೋಗ ಸಾಧನೆಗಳು ಈಗ ತಮ್ಮ ಗುರಿಯನ್ನು ತಲುಪುತ್ತಲಿವೆ. ಪೂರ್ವ ದಿಕ್ಕಿನಲ್ಲಿ ಭವ್ಯ ಪ್ರಕಾಶ ಉದಯವಾಗುತ್ತಿದೆ. ಆ ಪ್ರಕಾಶದ ಉದಯವನ್ನು ಸಾರುವ ಮೊದಲ ಮಿಣುಕು ದೃಶ್ಯಗಳು ಈಗಾಗಲೇ ದಿಗಂತದಲ್ಲಿ ಕಾಣಿಸಿಕೊಂಡಿವೆ. ಹೊಸ ದಿನವೊಂದು ಉದಯವಾಗಲಿದೆ. ಅದೆಷ್ಟು ವೈಭವದಿಂದ ಕೂಡಿರುತ್ತದೆಂದರೆ ಅದನ್ನು ಅವತಾರಗಳಲ್ಲಿ ಕೊನೆಯವರೂ ಕೂಡ ವರ್ಣಿಸಲಾರರು. ಹಾಗಿದ್ದರೂ ಅವರಿಲ್ಲದಿದ್ದರೆ ಆ ದಿನ ಬರುತ್ತಿರಲೇ ಇಲ್ಲ. ಹಿಂದೂ ಆಧ್ಯಾತ್ಮಿಕತೆಯ ಪರಿಪೂರ್ಣ ಅಭಿವ್ಯಕ್ತಿ ಪೌರ್ವಾತ್ಯರಲ್ಲಿ ಪುನರುತ್ಥಾನದ ಸಂಕೇತವಾಗಿದೆ. ಮಾನವ ಕುಲವು ಬಹು ಕಾಲದಿಂದ ವಿವಿಧ ವಿಚಾರ ಪದ್ಧತಿಗಳೊಡನೆ, ನೀತಿ ಶಾಸ್ತ್ರದ ವಿವಿಧ ತತ್ವಗಳೊಂದಿಗೆ, ಭೌತಿಕ ಸಾಧನ, ಸಲಕರಣೆಗಳಿಂದ ಪಡೆಯಬಹುದಾದ ಜೀವನದ ಪರಿಪೂರ್ಣತೆಯ ವಿಲಕ್ಷಣ ಕನಸುಗಳೊಂದಿಗೆ ಹಾಗೂ ಅಸಾಧ್ಯ–ವೆನಿಸುವ ಧರ್ಮ ಯುಗಗಳ ಹಾಗೂ ಮಾನವ ಹಿತಸಾಧನೆಯ ಬಯಕೆಗಳೊಂದಿಗೆ ನೂರಾರು ಪ್ರಯೋಗಗಳನ್ನು ನಡೆಸುತ್ತಲೇ ಬಂದಿದೆ. ಜೀವನದ ಅಂತಿಮ ರಹಸ್ಯವನ್ನು ಭೇದಿಸುವುದರಲ್ಲಿ ಅದು ಎಲ್ಲಿಯೂ



ಯಶಸ್ವಿಯಾಗಿಲ್ಲ, ತೃಪ್ತಿಯನ್ನು ಅದೆಲ್ಲಿಯೂ ಕಂಡುಕೊಂಡಿಲ್ಲ, ಸಮಾಜದ ಇಲ್ಲವೆ ರಾಜಕಾರಣದ ಯಾವ ಯೋಜನೆಯಿಂದಲೂ ಮಾನವ ಕುಲಕ್ಕೆ ಸದಾ ಬೆನ್ನು ಹತ್ತಿರುವ ದುಃಖ, ದಾರಿದ್ರ್ಯ, ಹೋರಾಟ, ಅತೃಪ್ತಿಗಳಿಂದ ಪಾರಾಗಿ ಹೊರಬರಲು ಅದಕ್ಕೆ ನೆರವು ದೊರೆತಿಲ್ಲ, ಏಕೆಂದರೆ ಭೌತಿಕ ಸಾಧನ–ಸಲಕರಣೆಗಳಿಂದ ಈ ಸಮಸ್ಯೆಯ ಪರಿಹಾರ ಕಂಡು ಹಿಡಿಯಲು ಯತ್ನಿಸಿದ ಯಾರಿಗಾದರೂ ಸೋಲು ಖಚಿತ. ಪೌರ್ವಾತ್ಯರಲ್ಲಿ ದಿವ್ಯ ಸತ್ಯದ ಅರಿವು ಕೆಲಮಟ್ಟಿಗಿದೆ, ಅವರೇ ಪಾಶ್ಚಾತ್ಯರಿಗೆ ಇದನ್ನು ಬೋಧಿಸಬಲ್ಲರು, ಅವರೇ ಮಾನವ ಕುಲವನ್ನು ಉಳಿಸಬಲ್ಲರು. ಈ ಎಲ್ಲ ಯುಗಗಳಲ್ಲಿ ಏಶಿಯಾ ಖಂಡವು ತನ್ನೊಳಗಿನ ಬೆಳಕಿಗಾಗಿ ಶೋಧ ನಡೆಸುತ್ತಲೇ ಇದೆ, ತಾನು ಶೋಧಿಸುವ ಬೆಳಕಿನ ಇಣುಕು ನೋಟವು ಲಭ್ಯವಾದಾಗೆಲ್ಲ ಘನವಾದ ಧರ್ಮವೊಂದು ಉದಯಿಸಿದೆ. ಬೌದ್ಧ ಧರ್ಮ, ಕನ್‌ಫ್ಯೂಸಿಯನ್ ಧರ್ಮ, ಕ್ರೈಸ್ತ ಧರ್ಮ, ಇಸ್ಲಾಮ್ ಧರ್ಮಗಳು ತಮ್ಮೊಳಗಿನ ಅಗಣಿತ ಪಂಥಗಳೊಡನೆ ಉದಯಿಸಿವೆ. ಆದರೆ ಭಾರತ ಆಧ್ಯಾತ್ಮಿಕ ಅನುಭವದ ಭವ್ಯ ಕಾರ್ಯಾಗಾರ, ಆತ್ಮ ವಿದ್ಯೆಯ ಪ್ರಯೋಗಾಲಯವಾದದ್ದು ಕಂಡುಬರುತ್ತದೆ. ಇಲ್ಲಿ ಸಾವಿರಾರು ಮಹಾತ್ಮರು ಪ್ರತಿಯೊಂದು ತಲೆಮಾರಿನಲ್ಲಿ ಜನಿಸಿದ್ದಾರೆ. ಅವರು ಶಾಂತ ರೀತಿಯಿಂದ ತಮ್ಮ ಆತ್ಮದಲ್ಲಿ ಕಾರ್ಯ ಕೈಕೊಳ್ಳುವುದರಲ್ಲಿ, ತಮ್ಮ ಜ್ಞಾನವನ್ನು ಪರಿಪೂರ್ಣಗೊಳಿಸುವುದರಲ್ಲಿ, ತಮ್ಮ ಪ್ರಯೋಗಗಳ ಫಲಿತಾಂಶವನ್ನು ತಮ್ಮ ಕೆಲವೇ ಜನ ಶಿಷ್ಯರಿಗೆ ತಿಳಿಸಿಕೊಡುವುದರಲ್ಲಿ ಮತ್ತು ಇನ್ನುಳಿದ ಕಾರ್ಯವನ್ನು ಇತರರು ಪೂರ್ಣಗೊಳಿಸಲೆಂದು ಬಿಟ್ಟುಕೊಡುವುದರಲ್ಲಿ ತೃಪ್ತಿ ಕಂಡುಕೊಂಡಿದ್ದಾರೆ. ಅವರೆಂದೂ ಜನರನ್ನು ಮತಾಂತರಗೊಳಿಸಲು ಆತುರರಾಗಿರಲಿಲ್ಲ, ತಮ್ಮ ಮಹಿಮೆಯನ್ನು ಸಾರಲು ಅವರೆಂದೂ ಆಸಕ್ತರಾಗಿರಲಿಲ್ಲ, ಅವರು ತಮ್ಮ ಪಾಲಿನ ಅನುಭವದ ಕೊಡುಗೆಯನ್ನೊಪ್ಪಿಸಿ ತಾವು ಬಂದ ಮೂಲಸ್ಥಾನಕ್ಕೆ ಮರಳಿ ಹೋದರು. ಈ ರೀತಿಯಾಗಿ ಆತ್ಮಾಭಿವ್ಯಕ್ತಿಯಿಂದ ಸಂಗ್ರಹಿಸಿದ ಆಧ್ಯಾತ್ಮ ಶಕ್ತಿಯ ಭವ್ಯ ಭಾಂಡಾರ ಅವತಾರಿಗಳು ಹುಟ್ಟಿ ಬರುವ ಸ್ಥಿತಿಯನ್ನುಂಟು ಮಾಡಿತ್ತು. ಅವತಾರಿಗಳು ಭಗವಂತನನ್ನು ತಮ್ಮಲ್ಲಿ ಎಷ್ಟೊಂದು ತುಂಬಿಕೊಂಡಿದ್ದರೆಂದರೆ ಅವರು ನಿಶ್ಚಲನೀರವತೆಯಲ್ಲಿ ಅನುಭವಕ್ಕೆ ಬರುವ ಪರಮಾನಂದದಿಂದ ತೃಪ್ತಿಪಡಲಿಲ್ಲ, ಆದರೆ ಅದನ್ನು ಜಗತ್ತಿನ ಮೇಲೆ ಸುರಿದರು. ಹಾಗೆ ಮಾಡುವುದರಲ್ಲಿ ಮತಾಂತರಗೊಳಿಸುವ ವಿಚಾರವಿರಲಿಲ್ಲ, ಆದರೆ ಅವರು ತಮ್ಮ ಸಿದ್ಧಿಯ ಅತ್ಯಾನಂದವನ್ನು ಸ್ವೀಕರಿಸುವ ಯೋಗ್ಯತೆಯುಳ್ಳವರಿಗೆ ಅಂದರೆ ಹಿಂದೆ ಕೈಕೊಂಡ ತಪಸ್ಸಿನಿಂದ ಇಲ್ಲವೆ ತಮ್ಮ

ಆಕಾಂಕ್ಷೆಯಲ್ಲಿರುವ ಪರಿಶುದ್ಧತೆಯಿಂದ ಸಿದ್ಧತೆ ಮಾಡಿಕೊಂಡವರಿಗೆ ನೀಡುವ ಬಯಕೆ ಅವರದಾಗಿತ್ತು. ಇಂತಹ ಮಹಾತ್ಮರಲ್ಲಿ ಶ್ರೀ ರಾಮ್ಯಕೃಷ್ಣರು ಕೊನೆಯವರು ಮತ್ತು ಅತ್ಯಂತ ಶ್ರೇಷ್ಠರು, ಏಕೆಂದರೆ ಇತರರು ಭಗವಂತನ ಹಲವಾರು ಮುಖಗಳಲ್ಲಿ ಒಂದು ಮುಖದ ಇಲ್ಲವೆ ಅವನ ಸೀಮಿತಾಂಶದ ಸ್ಪರ್ಶಾನುಭವವನ್ನು ಪಡೆದವರಾಗಿದ್ದರು, ಶ್ರೀ ರಾಮಕೃಷ್ಣರು ನಿಸ್ಸೀಮ ಐಕ್ಯತೆಯನ್ನು ನಿಸ್ಸೀಮ ವಿವಿಧತೆಯ ಮೊತ್ತವನ್ನಾಗಿ ಅನುಭವಕ್ಕೆ ತಂದುಕೊಂಡಿದ್ದರು. ಅವರಲ್ಲಿ ಈ ಮೊದಲು ಆಗಿ ಹೋದ ಲಕ್ಷಾವಧಿ ಸಾಧು–ಸಂತರ ಆತ್ಮಾನುಭವಗಳು ನವೀಕರಣ ಹೊಂದಿದವು ಮತ್ತು ಏಕತೆ ಪಡೆದವು. ಶ್ರೀ ರಾಮಕೃಷ್ಣರು ಜಗತ್ತಿಗೆ ಸಾರಬೇಕಾದ ಹಿಂದುತ್ವದ ಅಂತಿಮ ಸಂದೇಶವನ್ನು ಭಾರತಕ್ಕೆ ನೀಡಿದ್ದಾರೆ. ಅವರು ಜನ್ಮತಾಳಿದಂದಿನಿಂದ ನೂತನ ಯುಗವೊಂದರ ಆರಂಭವಾಗುತ್ತದೆ. ಈ ಯುಗದಲ್ಲಿ ಪೃಥ್ವಿಯ ಮೇಲಿನ ಜನರು ಕೆಲ ಕಾಲದ ವರೆಗೆ ಭಗವಂತನೊಡನೆ ಆಧ್ಯಾತ್ಮಿಕ ಸಂಸರ್ಗದಲ್ಲಿ ಮೇಲಕ್ಕೆತ್ತಲ್ಪಡುತ್ತಾರೆ. ಮತ್ತು ಆಧ್ಯಾತ್ಮಿಕತೆ ಮಾನವ ಜೀವನದ ಪ್ರಧಾನ ಲಕ್ಷಣವಾಗಲಿದೆ. ಯಾವುದನ್ನು ಸಾಧಿಸುವುದರಲ್ಲಿ ಕ್ರೈಸ್ತ ಧರ್ಮವು ವಿಫಲವಾಯಿತೋ, ಇಸ್ಲಾಮ ಧರ್ಮವು ಅಪರಿಪಕ್ವ ಕಾಲದಲ್ಲಿ ಯಾವುದನ್ನು ಸಾಧಿಸಲು ಹೋರಾಡಿತೋ, ಬೌದ್ಧ ಧರ್ಮವು ಕೆಲ ಕಾಲದವೆರೆಗೆ, ಅರೆಕೊರೆಯದಾಗಿ ಮಾತ್ರ, ಕೆಲವೇ ಸೀಮಿತ ಸಂಖ್ಯೆಯ ಜನರಲ್ಲಿ ಯಾವುದನ್ನು ಸಾಧಿಸಲು ಯತ್ನಿಸಿತೋ ಅದನ್ನು ಶ್ರೀ ರಾಮಕೃಷ್ಣರ ಜೀವನದಲ್ಲಿ ಒಟ್ಟಿಗೆ ಸೇರಿದ ಹಿಂದುತ್ವ ಇಡೀ ಜಗತ್ತಿಗಾಗಿ ಸಾಧಿಸಲಿದೆ. ಭಾರತದ ಪುನರುತ್ಥಾನದ ಕಾರಣ ಇದಾಗಿದೆ. ಭಗವಂತನು ಮತ್ತೊಮ್ಮೆ ಭಾರತ ಮಾತೆಯಲ್ಲಿ ಜೀವದುಸಿರು ತುಂಬಿದ್ದು ಇದಕ್ಕಾಗಿ, ಆಕೆಯ ಮಕ್ಕಳ ಹೃದಯದಲ್ಲಿ ಒಮ್ಮೆಲೆ ಪರಿವರ್ತನೆಯಾಗುತ್ತಿರುವುದು ಇದಕ್ಕಾಗಿ. ಈಗ ಪ್ರಾರಂಭವಾದ ಆಂದೋಲನದ ಮೊದಲ ಹಂತವು ರಾಜಕೀಯವಾಗಿದ್ದರೂ ಅದು ಆಧ್ಯಾತ್ಮಿಕತೆಯ ಪರಾಕಾಷ್ಠೆಯಲ್ಲಿ ಪರ್ಯವಸಾನ ಹೊಂದುವುದು.

## [16]
## ಮಾನವನಲ್ಲಿ ದೈವೀ ವೈಭವ

(1/714–15) ತರ್ಕ ಸರ್ವೋಚ್ಚ ಮಾರ್ಗದರ್ಶಿ ಅಲ್ಲವೆಂದು ಅದನ್ನು ಜನರು ಕಡೆಗಣಿಸಿದಾಗ ಬೌದ್ಧಿಕ ಜಂಬದ ಪ್ರಭಾವಕ್ಕೊಳಗಾದವನಿಗೆ ಆಘಾತವಾಗುತ್ತದೆ, ತರ್ಕವನ್ನು ಕಡೆಗಣಿಸಿ ಜನರು ದೇವರೆಂದು ಕರೆಯುವ ಬಾಹ್ಯ ಪ್ರಭಾವವನ್ನು



ಘನತೆಗೇರಿಸುವುದು ಸುಸಂಸ್ಕೃತ ಮನುಷ್ಯನಿಗೆ ಹೇಗೆ ಸಾಧ್ಯ ಎಂದು ಅವನು ಪ್ರಶ್ನಿಸುತ್ತಾನೆ. ಆದರೆ ಇಂತಹ ಸಂದೇಹವಾದಿಗಳು ಯುರೋಪಿನ ಭೌತಿಕವಾದದ ಪ್ರಭಾವಕ್ಕೆ ಒಳಪಟ್ಟವರಾಗಿರುತ್ತಾರೆ, ಭೌತಿಕವಾದವು ಮನುಷ್ಯನನ್ನು ಅವನಲ್ಲಿಯ ಜಡ ವಸ್ತುವಿನ ಭಾಗಕ್ಕೆ ಸೀಮಿತಗೊಳಿಸುತ್ತದೆ, ಅವನ ದೈವೀ ಮೂಲವನ್ನು, ದೈವೀ ಅದೃಷ್ಟವನ್ನು ಅಲ್ಲಗಳೆಯುತ್ತದೆ. ಯುರೋಪಿನಲ್ಲಿ ಕ್ರೈಸ್ತ ಧರ್ಮವನ್ನು ಧರ್ಮೋಪದೇಶಕರಿಗೆ, ಸನ್ಯಾಸಿಗಳಿಗೆ ಬಿಟ್ಟುಕೊಟ್ಟಾಗ ಮತ್ತು ಗೆಲಿಲಿಯೋನ ಬೋಧನೆಗಳನ್ನು ಮರೆತು ಬಿಟ್ಟಾಗ ಆ ಖಂಡ ತನ್ನನ್ನು ಭೀಕರ ಅದೃಷ್ಟಕ್ಕೆ ತೆರೆದುಕೊಂಡಿತು, ಅದಿನ್ನೂ ಅವರನ್ನು ಕಾಡದೆ ಬಿಡದು. ಮಾನವನಲ್ಲಿ ಭಗವಂತನಿದ್ದಾನೆಂದು ತಿಳಿದುಕೊಳ್ಳುವುದೇ ಸಕಲ ದಿವ್ಯ ಜ್ಞಾನ, ಸಕಲ ಧರ್ಮ. ಕ್ರೈಸ್ತ ಧರ್ಮ ಮಸಕು ಮಸಕಾಗಿ ಬೋಧಿಸಿದ್ದನ್ನು ಹಿಂದುತ್ವವು ವೇದಾಂತದಲ್ಲಿ ಬುದ್ಧಿಗೆ ಸ್ಪಷ್ಟಪಡಿಸಿದೆ. ಭಾರತವು ಶಂಕರ, ಮಧ್ವ ಮತ್ತು ರಾಮಾನುಜರಿಂದ ದೊರೆತ ಬೋಧನೆಗಳನ್ನು ನೆನಪಿಸಿಕೊಂಡಾಗ ಮತ್ತು ಶ್ರೀ ರಾಮಕೃಷ್ಣರು ಪ್ರಕಟಪಡಿಸಿದುದನ್ನು ಸರಿಯಾಗಿ ತಿಳಿದುಕೊಂಡಾಗ ತಲೆಯೆತ್ತಿ ನಿಲ್ಲುವುದು. ಭಾರತದ ಜೀವನವೇ ವೇದಾಂತ.

ನಾವು ಕೇವಲ ಬುದ್ಧಿಜೀವಿಗಳೆಂದು ಯಾರಾದರೂ ತಿಳಿದುಕೊಂಡಿದ್ದರೆ ಅವರು ಹಿಂದುಗಳಲ್ಲ. ಹಿಂದುತ್ವವು ಬೌದ್ಧಿಕತೆಯ ವೈಭವೀಕರಣವನ್ನು ದೇವರನ್ನು ಕಂಡಿಲ್ಲದವರಿಗೆ ಬಿಟ್ಟುಕೊಡುತ್ತದೆ. ಭಗವಂತನ ಮಹಿಮೆ, ವೈಭವಗಳನ್ನು ಕೊಂಡಾಡಲೆಂದೇ ಅವನಿಂದ ಭಾರತ ಮಾತೆ ನಿಯೋಜಿತಳಾಗಿದ್ದಾಳೆ, ಮತ್ತು ಆಕೆ ಸಾವಿರಾರು ವರ್ಷಗಳಿಂದ ಅದನ್ನೇ ಮಾಡುತ್ತ ಬಂದಿದ್ದಾಳೆ. ನಾವು ಯುರೋಪಿನ ಶಿಕ್ಷಣವನ್ನು ಸ್ವೀಕರಿಸಿದಾಗ ಅವರ ಆಧುನಿಕ ವಿಜ್ಞಾನದ ಬೆಳಕಿನಿಂದ ದಾರಿ ತಪ್ಪಿಸಿಕೊಳ್ಳಲು ನಮಗೆ ನಾವೇ ಅನುವು ಮಾಡಿಕೊಟ್ಟೆವು. ಆಧುನಿಕ ವಿಜ್ಞಾನದ ಬೆಳಕು ಒಂದು ಕೋಣೆಗೆ ಮಾತ್ರ ಸೀಮಿತವಾದುದು, ಜಗತ್ತನ್ನೇ ಬೆಳಗುವ ಸೂರ್ಯನ ಹಾಗಲ್ಲ. ಆಧುನಿಕ ವಿಜ್ಞಾನದ ಮೊತ್ತವೆಲ್ಲ ಅಪರಾ ವಿದ್ಯೆ. ಆದರೆ ಉಚ್ಚತರ ವಿದ್ಯೆಯೊಂದಿದೆ, ಅದು ಬಹಳ ಬಲಶಾಲಿಯಾದ ಜ್ಞಾನವಾಗಿದೆ. ಕೆಳದರ್ಜೆಯ ಜ್ಞಾನದ ಪ್ರಭಾವಕ್ಕೊಳಗಾದಾಗ ನಾವೇ ಎಲ್ಲವನ್ನು ಮಾಡುವವರು ಎಂಬ ಕಲ್ಪನೆಯಿರುತ್ತದೆ ಮತ್ತು ತರ್ಕಬುದ್ಧಿಯೇ ಸಾಮ್ರಾಟ್ ಶಕ್ತಿ, ಸರ್ವಜ್ಞ ಶಕ್ತಿ ಎಂದುಕೊಂಡು ನಾವು ಸಿಕ್ಕಿ ಹಾಕಿಕೊಂಡಿರುವ ಪ್ರತಿಯೊಂದು ಸನ್ನಿವೇಶವನ್ನು ತರ್ಕಬುದ್ಧಿಯಿಂದ ತಿಳಿದುಕೊಳ್ಳಲು ಪ್ರಯತ್ನಿಸುತ್ತೇವೆ. ಆದರೆ ಇದು ಭ್ರಮೆಯ ಧೋರಣೆ ಮತ್ತು ಮಾಯೆ. ತನ್ನೊಳಗೆ ಭಗವಂತನ ವೈಭವವನ್ನು ಕಂಡ ಮನುಷ್ಯ

ಎಂದಿಗೂ ಬುದ್ಧಿ ಪರಮೋಚ್ಚವಾದುದೆಂದು ನಂಬಲಾರ. ಉಚ್ಚತರವಾದ ದಿವ್ಯ ಧ್ವನಿಯೊಂದಿದೆ, ವಿಫಲವಾಗದ ಹೆಚ್ಚಿನ ದಿವ್ಯವಾಣಿಯೊಂದಿದೆ, ಅದು ಭಗವಂತನ ವಾಸ ಸ್ಥಳವಾದ ಹೃದಯ ಗುಹೆಯಲ್ಲಿ ಇದೆ. ಭಗವಂತ ಮನುಷ್ಯನ ಮಿದುಳಿನ ಮೂಲಕ ಕಾರ್ಯವೆಸಗುತ್ತಿರುವುದು ನಿಜ, ಆದರೆ ಮಿದುಳು ಅವನ ಹಲವಾರು ಉಪಕರಣಗಳಲ್ಲೊಂದು. ಮಿದುಳು ಯಾವುದೇ ಉಪಾಯ ಮಾಡಲಿ, ಹಂಚಿಕೆ ಹಾಕಲಿ ಹೃದಯವೇ ಅದನ್ನು ಮೊದಲು ಅರಿತುಕೊಳ್ಳುವುದು. ಮತ್ತು ಮಿದುಳನ್ನು ದಾಟಿ ಹೃದಯದತ್ತ ಹೋಗಬಲ್ಲವನಿಗೆ ಸನಾತನನ ದಿವ್ಯವಾಣಿ ಕೇಳಿಸುತ್ತದೆ.

## [17]
## ಅಂತರಂಗದ ಬೆಳಕು – ಭವಿಷ್ಯದ ಸತ್ಯ

(2/417) ಕಳೆದ ಒಂದೂವರೆ ವರ್ಷಗಳಲ್ಲಿ ನಡೆದ ಘಟನೆಗಳಲ್ಲೆಲ್ಲ ದಿವ್ಯ ಗುರುವಿನ ಧ್ವನಿ ಕೇಳಬರುತ್ತಿದೆ, ಅದು ನಮಗೆ ಕೂಗಿ ಹೇಳುತ್ತದೆ : “ನೀವು ಒಡೆತನ ಹೊಂದಿರಬಹುದಾದುದೆಲ್ಲವನ್ನು ಬಿಟ್ಟುಕೊಡಿರಿ, ನನ್ನ ಸಂಕಲ್ಪದಂತೆ ಕಾರ್ಯಮಾಡಿರಿ, ನಿಮ್ಮನ್ನು ನೀವು ತಿಳಿದುಕೊಳ್ಳಿರಿ, ನಿಮ್ಮನ್ನು ನೀವು ಶುದ್ಧಗೊಳಿಸಿಕೊಳ್ಳಿರಿ, ನಿಮ್ಮ ಭ್ರಾಮಕ ಕಲ್ಪನೆಗಳನ್ನು ಅನುಸರಿಸಬೇಡಿರಿ.” ಕಿವಿಗಳಿದ್ದವನು ಕೇಳಲಿ, ಅಂತರಾತ್ಮನ ಸಂಪರ್ಕವಿಲ್ಲದವನಿಗೆ, ಅಂತರಂಗದೊಳಗೆ ಬೆಳಕು ಕಾಣದವನಿಗೆ ದಿವ್ಯ ಜ್ಞಾನವು ಬಾರದು. ಇಂತಹನಿಗೆ ಲೌಕಿಕ ಯಶಸ್ಸಿನತ್ತ ಕೊಂಡೊಯ್ಯುವ ವ್ಯವಹಾರ ಜ್ಞಾನವೂ ಕೂಡ ಬಾರದು. ಸತ್ಯವು ಹೃದ್ಗತವಾಗುವವರೆಗೆ ಕೆಳದರ್ಜೆಯ ವ್ಯವಹಾರ ಬುದ್ಧಿಯ ಬೆಳಕಿನಲ್ಲಿ ಇಟ್ಟ ಪ್ರತಿ ಹೆಜ್ಜೆಯೂ ವಿಫಲವಾಗುವುದು.

ದಕ್ಷಿಣೇಶ್ವರದಲ್ಲಿ ಆರಂಭವಾದ ಕಾರ್ಯ ಪೂರ್ತಿಗೊಳ್ಳುವುದರಿಂದ ಇನ್ನೂ ದೂರದಲ್ಲಿದೆ, ಅದೇನೆಂಬುದನ್ನು ಜನರು ತಿಳಿದುಕೊಂಡಿಲ್ಲ. ಸ್ವಾಮಿ ವಿವೇಕಾನಂದರು ಶ್ರೀ ರಾಮಕೃಷ್ಣರಿಂದ ಪಡೆದು ಅಭಿವೃದ್ಧಿಗೊಳಿಸಲು ಹೆಣಗಿದುದಕ್ಕೆ ಇನ್ನೂ ಮೂರ್ತರೂಪ ಕೊಡಲಾಗಿಲ್ಲ.

## [18]
## ನೇರ ಮಾರ್ಗದಿಂದ ಜ್ಞಾನ ದೊರಕಿಸುವ ಧೀಶಕ್ತಿ ಬೆಳೆಸಿಕೊಳ್ಳುವುದು

(3/327) ಬಹು ಕಾಲದಿಂದ ರಾಜಕೀಯ ಹಾಗೂ ಆರ್ಥಿಕ ಸಮಸ್ಯೆಗಳಲ್ಲಿ ಮಗ್ನವಾಗಿರುವ ಭಾರತೀಯ ಮನಸ್ಸು ತನ್ನ ದಿಗಂತವನ್ನು ವಿಸ್ತರಿಸಿಕೊಳ್ಳುವ ಕಾಲ



ಇದೀಗ ಬಂದಂತಿದೆ. ಇಂತಹ ವಿಸ್ತರಣೆ ವಿಶೇಷವಾಗಿ ಬಂಗಾಲಕ್ಕೆ ತೀರ ಅವಶ್ಯವಾಗಿದೆ.

ಭಾರತೀಯ ಉನ್ನತತರ ಯೋಚನೆಗಳಿಗೆ ಪುಟಕೊಟ್ಟು ಮುನ್ನಡೆಸಿದವರು ಮತ್ತು ಇನ್ನೂ ಮುನ್ನಡೆಸುತ್ತಿರುವವರು ಬಂಗಾಲಿ ಜನರೇ, ಏಕೆಂದರೆ ಉದ್ಭವಿಸಬೇಕಾದ ಹೊಸ ಜನಾಂಗಕ್ಕೆ ತೀರ ಅವಶ್ಯವಾದ ದೈವದತ್ತ ಪ್ರತಿಭಾ ಸಂಪನ್ನತೆ ಅವರಲ್ಲಿದೆ. ಮಾನವ ಕುಲವು ಮುನ್ನಡೆಯ ಬಹು ದೊಡ್ಡ ಹೆಜ್ಜೆಯನ್ನಿಡಬೇಕಾದ ಪ್ರಸಂಗ ಬಂದಾಗಲೆಲ್ಲ ಅದನ್ನು ಮುಂದಕ್ಕೆ ಚಲಿಸುವಂತೆ ಮಾಡುವ, ಹೃದಯ ಕಲಕುವ ಘನವಾದ ವಿಚಾರಗಳಿಗೆ ತೆರೆದಿಟ್ಟುಕೊಂಡ ಭಾವನೆ ಹಾಗೂ ಕಲ್ಪನಾಶಕ್ತಿಗಳನ್ನು ಅವರು ಹೊಂದಿದ್ದಾರೆ. ಹೃದಯದ ಮೂಲಕ ಆಲೋಚಿಸುವ ಅತ್ಯಮೂಲ್ಯ ದೈವದತ್ತ ಶಕ್ತಿ ಅವರದಾಗಿದೆ. ಹಾಗೆಯೇ ಅವರು ಬಹು ಸೂಕ್ಷ್ಮ ಮಿದುಳು ಹೊಂದಿದ್ದಾರೆ, ಅದು ಕೆಲವೊಂದು ಸೀಮಿತ ವ್ಯಾಪ್ತಿಯಲ್ಲಿ ತರ್ಕದ ಹಿಡಿತಕ್ಕೆ ಸಿಗುವ ಹಾಗೂ ತಾರ್ಕಿಕ ಬೌದ್ಧಿಕತೆಯನ್ನು ಮೀರಿದ ವಿಚಾರಗಳ ಅರ್ಥ ಛಾಯೆಗಳನ್ನು, ಸೂಕ್ಷ್ಮ ಸ್ವಾರಸ್ಯಗಳನ್ನು ಒಮ್ಮೆಲೆ ಗ್ರಹಿಸಬಲ್ಲ ಸಾಮರ್ಥ್ಯ ಹೊಂದಿದೆ. ಎಲ್ಲದಕ್ಕಿಂತಲೂ ಹೆಚ್ಚಾಗಿ ಬಂಗಾಲದ ಜನರು ಉಳಿದೆಲ್ಲ ಜನಾಂಗಗಳ ಜನರಿಗಿಂತ ಹೆಚ್ಚಿನ ಪ್ರಮಾಣದಲ್ಲಿ, ಇನ್ನೂ ಅಭಿವೃದ್ಧಿಹೊಂದಿರದೆ ಇದ್ದ, ನೇರ ಮಾರ್ಗದಿಂದ ಜ್ಞಾನ ದೊರಕಿಸುವ ಧೀಶಕ್ತಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಹೊಂದಿದ್ದಾರೆ, ಆ ಧೀಶಕ್ತಿ ಮಾನವತೆಯಲ್ಲಿ ಅಡಗಿದೆ, ಇದೀಗ ಅದು ಉತ್ಕ್ರಾಂತಿ ಪಥದಲ್ಲಿದೆ. ಈ ಜ್ಞಾನ ತರ್ಕಕ್ಕೆ ಹಾಗೂ ಊಹಾಶಕ್ತಿಗೆ ನಿಲುಕದು. ಮಾನವ ಕುಲದ ಪರಮೋಚ್ಚ ಫಲವೆಂದು ಅವತಾರವೆತ್ತಿದ ಶ್ರೀ ರಾಮಕೃಷ್ಣರಲ್ಲಿ ಈ ಧೀಶಕ್ತಿಯಿತ್ತು. ಅವರು ಶಿಕ್ಷಣದ ಯಾವ ಪರಿಶ್ರಮವೂ ಇಲ್ಲದೆ ತಾವು ಇಚ್ಛಿಸಿದ ಯಾವುದೇ ಜ್ಞಾನದ ಮೇಲೆ ಸುಲಭವಾಗಿ ಹಾಗೂ ದಿವ್ಯ ರೀತಿಯಲ್ಲಿ ಪ್ರಭುತ್ವ ಪಡೆಯಬಲ್ಲವರಾಗಿದ್ದರು. ಇಂದು ಮಾನವ ಕುಲದಲ್ಲಿ ಈ ಧೀಶಕ್ತಿಯು ಕ್ರಮಬದ್ಧವಲ್ಲದ ರೀತಿಯಲ್ಲಿ ಕಾರ್ಯ ಮಾಡುತ್ತಿದೆ; ಅದನ್ನಾರೂ ಗುರುತಿಸುತ್ತಿಲ್ಲ, ಮಾನವನ ಕಲ್ಪನೆ ಹಾಗೂ ಸೀಮಿತ ತರ್ಕಬುದ್ಧಿ ಮಧ್ಯೆ ಪ್ರವೇಶಿಸುವುದರಿಂದ ಗೊಂದಲಕ್ಕೀಡಾಗಿದೆ. ಮಾನವ ಕುಲದಲ್ಲಿ ಮತ್ತು ವ್ಯಕ್ತಿಗಳಲ್ಲಿ ಶೇಖರಿಸಲಾದ ಹಳೆಯ ಸಂಸ್ಕಾರಗಳೂ ಈ ಗೊಂದಲದಲ್ಲಿ ಪಾಲುಗೊಳ್ಳುತ್ತಿವೆ. ಪ್ರಾಚೀನ ಭಾರತದ ಋಷಿಗಳು ಯೋಗ ಶಾಸ್ತ್ರದಲ್ಲಿ ನಿರೂಪಿಸಿದ ಶಿಕ್ಷಣ ಹಾಗೂ ಶಿಸ್ತುಪಾಲನೆಗಳಿಂದಲ್ಲದೆ ಈ ಧೀಶಕ್ತಿಯನ್ನು ಗುರುತಿಸುವುದಾಗಲಿ, ರೂಢಿಯಲ್ಲಿ ತರುವುದಾಗಲಿ ಸಾಧ್ಯವಿಲ್ಲ. ಅದರೆ ಕೆಲವು ಜನಾಂಗಗಳು ಇತರ ಸಾಮಾನ್ಯ

ಜನಾಂಗಗಳಿಗಿಂತ ಹೆಚ್ಚು ಉತ್ಕ್ರಾಂತಿ ಹೊಂದಿದ ಮತ್ತು ಹೆಚ್ಚಿನ ಸಿದ್ಧತೆ ಮಾಡಿಕೊಂಡ ಕಾರ್ಯರೀತಿಗಳನ್ನು ತಿಳಿದಿರುತ್ತವೆ ಮತ್ತು ಈ ಜನಾಂಗಗಳೇ ಭವಿಷ್ಯತ್ತಿನ ಉತ್ಕ್ರಾಂತಿಯನ್ನು ಮುನ್ನಡೆಸಿಕೊಂಡು ಹೋಗುವವು. ಇದಲ್ಲದೆ ಆ ಜನಾಂಗಗಳು ಬಹಳ ಕಾಲದಿಂದ ನಡೆಸಿಕೊಂಡು ಬಂದ ಶಕ್ತಿಯ ಆರಾಧನೆಯಿಂದಾಗಿ ಬಲಶಾಲಿಯಾದ ಸಂಕಲ್ಪ ಶಕ್ತಿಯನ್ನು ಹೊಂದಿರುತ್ತವೆ.

## [19]
## ಸ್ವಾಮಿ ವಿವೇಕಾನಂದರು ಮೇಲಿಂದ ಮೇಲೆ ಸಂದರ್ಭೋಚಿತವಾಗಿ ಹೇಳುತ್ತಿದ್ದ ಉಪನಿಷತ್ತಿನಲ್ಲಿಯ ಎರಡು ಪಕ್ಷಿಗಳ ದೃಷ್ಟಾಂತದ ಕತೆ

(1/855–57) (ಬರುಯಿಪುರ (Baruipur) ದಲ್ಲಿ 12–4–1908 ರಂದು ಏರ್ಪಡಿಸಲಾಗಿದ್ದ ಸ್ವದೇಶಿ ಸಭೆಯಲ್ಲಿ ಶ್ರೀ ಅರವಿಂದರು ಈ ಕತೆಯನ್ನು ಹೇಳಿದ್ದರು ಮತ್ತು ನಂತರ 'ವಂದೇ ಮಾತರಮ್' ಪತ್ರಿಕೆಯಲ್ಲಿ ಅದನ್ನು ಪ್ರಕಟಿಸಿದರು.)

ಉಪನ್ಯಾಸಕರು (ಶ್ರೀ ಅರವಿಂದರು) ಸುಪ್ತವಾಗಿರುವ ಆತ್ಮವು ಎಚ್ಚರ–ಗೊಳ್ಳುವುದು ಕಷ್ಟ–ಸಂಕಷ್ಟಗಳು ಬಂದಾಗಲೇ ಎಂಬ ವಿಷಯವನ್ನು ವಿಸ್ತರಿಸುತ್ತ, ಉಪನಿಷತ್ತಿನಲ್ಲಿ ಹೇಳಲಾದ 'ಎರಡು ಪಕ್ಷಿಗಳ ದೃಷ್ಟಾಂತ ಕತೆ'ಯನ್ನು ಉಲ್ಲೇಖಿಸಿದರು. ಸ್ವಾಮಿ ವಿವೇಕಾನಂದರು ಈ ಕತೆಯನ್ನು ಆಗಾಗ ಸಂದರ್ಭೋಚಿತವಾಗಿ ಹೇಳುತ್ತಿದ್ದರು. ಆ ಕತೆ ಹೀಗಿದೆ : ಕಹಿ–ಸಿಹಿ ಹಣ್ಣುಗಳಿಂದ ತುಂಬಿದ್ದ ದೊಡ್ಡ ಮರವೊಂದರ ಮೇಲೆ ಎರಡು ಪಕ್ಷಿಗಳು ಕುಳಿತಿದ್ದವು – ಒಂದು ಮರದ ತುದಿಯಲ್ಲಿ, ಇನ್ನೊಂದು ಅದರ ಕೆಳ ಭಾಗದಲ್ಲಿ, ಕೆಳ ಭಾಗದಲ್ಲಿದ್ದ ಪಕ್ಷಿ ಮರದ ತುದಿಯಲ್ಲಿ ತನ್ನ ವಿಪುಲ ಗರಿಗಳ ಸಿರಿಸಂಪತ್ತನ್ನು ಹರಡಿಕೊಂಡು ವೈಭವಯುತವಾಗಿ ಮೆರೆಯುತ್ತಿದ್ದ ಆ ಇನ್ನೊಂದು ಪಕ್ಷಿಯನ್ನು ನೋಡುತ್ತ, ಮೋದಗೊಂಡು, ಅದು ತನ್ನದೇ ಆದ ಅತ್ಯುಚ್ಚ ಆತ್ಮವೆಂದು ಭಾವಿಸಿತ್ತು. ಆದರೆ ಮರದಲ್ಲಿಯ ಸಿಹಿ ಹಣ್ಣುಗಳನ್ನು ಸವಿಯುತ್ತಿದ್ದ ಕಾಲದಲ್ಲಿ, ಆ ಸವಿಯಲ್ಲಿ ಮಗ್ನವಾಗುತ್ತ, ತನ್ನ ಸಹಚರ ಪಕ್ಷಿಯನ್ನು ಮರೆತು ಬಿಡುತ್ತಿತ್ತು. ಕೆಲ ಸಮಯದ ನಂತರ ಆ ಮರದಲ್ಲಿಯ ಕಹಿ ಹಣ್ಣುಗಳನ್ನು ತಿನ್ನುವ ಸಮಯ ಬಂದಾಗ, ಆ ಕಹಿಗೆ ಬೆಚ್ಚಿಬಿದ್ದು, ಅದು ತನ್ನ ಉಜ್ವಲ ಸಹಚರ ಪಕ್ಷಿಯತ್ತ ಮತ್ತೆ ನೋಡುತ್ತಿತ್ತು. ಈ ದೃಷ್ಟಾಂತ ಕತೆ ವೈಯಕ್ತಿಕ ಆತ್ಮೋದ್ಧಾರದ ಬೋಧೆಗೆ ಸಂಬಂಧಿಸಿದುದೆಂಬುದು ಸ್ಪಷ್ಟವಿದೆ. ಸಾಂಸಾರಿಕ ಜೀವಿಗಳು ಜಗತ್ತಿನ ಜೀವನದ ಸುಖ ಭೋಗಗಳಲ್ಲಿ



ಮಗ್ನರಾದಾಗ ಮೇಲಿರುವ ಪರಮಾತ್ಮ ತಮ್ಮ ಆತ್ಮದ ಅತ್ಯುಚ್ಚ ಸ್ವರೂಪವಲ್ಲದೆ ಬೇರೇನಲ್ಲ ಎಂಬುದನ್ನು ಮರೆತು ಬಿಟ್ಟಿರುತ್ತಾರೆ. ಈ ಜಗತ್ತಿನ ಮಾಯೆಯಿಂದಾಗಿ ತಮ್ಮನ್ನು ತಾವು ಮರೆತುಬಿಟ್ಟಿರುವಾಗ, ಈ ಮಾಯೆಯನ್ನು ಚದುರಿಸಿ ಕಳಿಸುವ ಸಮಯ ಎಂದರೆ ಜಗತ್ತಿನ ಜೀವನದ ಕಷ್ಟ–ಸಂಕಷ್ಟಗಳ ಕಹಿಯನ್ನು ಸವಿಯುವ ಸಮಯವೂ ಬರುತ್ತದೆ. ಆಗ ಸಂಸಾರದ ಮೋಹ–ಮಾಯೆಗಳು ತೊಲಗಿ ನೈಜವಾದ ತನ್ನಾತ್ಮದ ಅರಿವು ಉಂಟಾಗುತ್ತದೆ. ಈ ದೃಷ್ಟಾಂತ ಕತೆ ದೇಶದ ಮುಕ್ತಿಗೂ ಅನ್ವಯಿಸುತ್ತದೆ. ಭಾರತದಲ್ಲಿಯ ನಾವು ವಿದೇಶೀಯರ ಮಾಯೆಯ ಪ್ರಭಾವಕ್ಕೊಳಗಾಗಿ ನಮ್ಮ ಆತ್ಮಗಳನ್ನೇ ಮಾರಿಕೊಂಡೆವು. ಪರಕೀಯ ಆಡಳಿತ, ಪರಕೀಯರ ಸಂಸ್ಕೃತಿ–ನಾಗರಿಕತೆ, ಪರಕೀಯರ ಶಕ್ತಿ–ಸಾಮರ್ಥ್ಯಗಳು ಇವೆಲ್ಲದರ ಮಾಯೆ ನಮ್ಮನ್ನಾಳತೊಡಗಿತು. ಇವೆಲ್ಲವೂ ಅಷ್ಟೊಂದು ಸರಪಣಿಗಳಾಗಿ ನಮ್ಮ ದೈಹಿಕ, ಬೌದ್ಧಿಕ, ನೈತಿಕ ಜೀವನವನ್ನೆಲ್ಲ ಕಟ್ಟಿಹಾಕಿಬಿಟ್ಟವು. ವಿದೇಶೀಯರೊಂದಿಗೆ ಶಾಲೆಗೆ ಹೋಗತೊಡಗಿದೆವು, ಶಾಲೆ, ಕಾಲೇಜುಗಳಲ್ಲಿ ವಿದೇಶೀಯ ಶಿಕ್ಷಕರು ನಮಗೆ ಕಲಿಸುವಂತಾಯಿತು. ಮತ್ತು ನಮ್ಮೊಳಗಿದ್ದ ಶ್ರೇಷ್ಠ ಹಾಗೂ ಒಳ್ಳೆಯದೆಲ್ಲವನ್ನು ಬಿಟ್ಟುಕೊಟ್ಟು ನಮ್ಮ ಮನಸ್ಸು ಅಡ್ಡದಾರಿ ಹಿಡಿಯಿತು. ಸ್ವರಾಜ್ಯಕ್ಕೂ, ರಾಜಕೀಯ ಜೀವನಕ್ಕೂ ನಾವು ಅನರ್ಹರೆಂದು ನಾವೇ ಭಾವಿಸತೊಡಗಿದೆವು : ಇಂಗ್ಲಂಡೇ ನಮಗೆ ಮಾದರಿ, ಅದೇ ನಮ್ಮ ಸಂರಕ್ಷಕ ಎಂಬ ಭಾವನೆ ಬಲಿಯಿತು. ಇದೆಲ್ಲವೂ ಮಾಯೆ ಮತ್ತು ಬಂಧನ. ಒಮ್ಮೆ ಈ ಮಾಯೆಯ ಬಂಧನಕ್ಕೆ ಸಿಕ್ಕುಬಿದ್ದಾದ ಮೇಲೆ ಅದರ ಸರಪಣಿಗಳು ಒಂದಾದ ಮೇಲೊಂದರಂತೆ ನಮ್ಮನ್ನು ಕಟ್ಟಿಹಾಕತೊಡಗಿದವು. ವಿದೇಶೀಯ ಶಿಕ್ಷಣದಿಂದ ನಮ್ಮ ಮನಸ್ಸು ಬಂಧನಕ್ಕೊಳಗಾಯಿತು, ಅನಂತರ ವ್ಯಾಪಾರೋದ್ಯಮದ ಬಂಧನ, ರಾಜಕೀಯ ಬಂಧನ ಇತ್ಯಾದಿ. ಇವುಗಳಿಂದಾಗಿ ಈ ಬಂಧನಗಳಿಲ್ಲದಿದ್ದರೆ ನಮ್ಮ ಕೈಸಾಗದು ಎನ್ನುವಷ್ಟರ ಮಟ್ಟಿಗೆ ಅಸಹಾಯಕರಾದೆವು. ಭಾರತದಲ್ಲಿ ಈ ಮೊದಲು ನಡೆಸುತ್ತಿದ್ದ ನಮ್ಮ ಜೀವನವನ್ನು ಕೆಡಿಸಿಬಿಡಲು ನಾವೇ ವಿದೇಶೀಯರಿಗೆ ನೆರವಿತ್ತೆವು. ಅವರ ಪೋಲೀಸ ರಕ್ಷಣೆಯಲ್ಲಿ ನಾವು ಬದುಕತೊಡಗಿದೆವು. ಅವರು ನಮಗೆಂತಹ ರಕ್ಷಣೆ ಒದಗಿಸಿದರೆಂಬುದರ ಅರಿವು ನಮಗೆ ಈಗಾಗತೊಡಗಿದೆ. ನಮ್ಮ ಬಂಧನಕ್ಕೆ ನಾವೇ ಅವರಿಗೆ ಸಾಧನ ಸಲಕರಣೆಗಳಾದೆವು. ಬಂಗಾಲಿಗಳಾದ ನಾವು ವಿದೇಶೀಯರ ಸೇವಾವೃತ್ತಿಗಳಲ್ಲಿ ಸೇರಿಕೊಂಡೆವು. ವಿದೇಶೀಯರನ್ನು ನಾವೇ ಕರೆತಂದೆವು, ನಾವೇ ಅವರ ಆಡಳಿತಕ್ಕೆ ಭದ್ರತಳಹದಿ ಹಾಕಿಕೊಟ್ಟೆವು.

ಅಧಃಪಾತಕ್ಕೆ ಬಿದ್ದು ಹೋಗಿದ್ದ ನಮ್ಮ ಸಂರಕ್ಷಣೆಗೆ, ನಮಗೆ ವಿದ್ಯೆ ಕಲಿಸಲಿಕ್ಕೆ, ನಮ್ಮ ಆಹಾರಕ್ಕಾಗಿಯೂ ಇತರರ ನೆರವೇ ಬೇಕಾಗಿತ್ತು. ಹೀಗೆ ಸಂಪೂರ್ಣವಾಗಿ ನಮ್ಮ ಸ್ವಾವಲಂಬನ ಶಕ್ತಿ ನಷ್ಟವಾಗಿ ಹೋದುದರಿಂದ ಮಾನವ ಜೀವನದ ಈ ಎಲ್ಲ ಕೆಲಸ–ಬೊಗಸೆಗಳನ್ನು ನಾವು ಮಾಡಲಾರೆವಾದೆವು.

ಈ ಬಗೆಯ ದಬ್ಬಾಳಿಕೆ ಮತ್ತು ಯಾತನೆಗಳಿಗೆ ಒಳಗಾಗಿರುವುದರ ಕಾರಣದಿಂದಾಗಿಯೆ ಈ ಮಾಯೆ ಚದುರಿ ಹೋಗಬಲ್ಲದು. ಲಾರ್ಡ ಕರ್ಝನ್‌ನಿಂದ ಉಂಟಾದ ಬಂಗಾಲದ ವಿಭಜನೆಯ ಕಹಿ ಫಲದಿಂದಾಗಿ ಆಗ ಮುಸುಕಿದ್ದ ಮಾಯೆ ಚದುರಿ ಹೋಯಿತು. ಆಗ ನಾವು ಮೇಲೆ ಗಮನ ಹರಿಸಿ ಅಲ್ಲಿ ಕುಳಿತಿದ್ದ ಉಜ್ವಲ ಪಕ್ಷಿಯನ್ನು ನೋಡಿದೆವು. ಅದು ಬೇರೇನೂ ಅಲ್ಲ, ನಾವೇ ನಮ್ಮ ನೈಜ ಆತ್ಮವೆಂಬುದನ್ನು ಕಂಡುಕೊಂಡೆವು. ಹೀಗೆ ನಮ್ಮ ಸ್ವರಾಜ್ಯ ನಮ್ಮೊಳಗೇ ಇರುವುದನ್ನು ಶೋಧಿಸಿದೆವು ಮತ್ತು ಅದನ್ನು ಪಡೆಯುವುದು ನಮ್ಮ ಕೈಗಳಲ್ಲೇ ಇರುವುದೆಂಬುದನ್ನು ಕಂಡುಕೊಂಡೆವು.

## [20]
## ಸ್ವಾಮಿ ವಿವೇಕಾನಂದರ ಮಾರ್ಗ

ಲಂಡನ್ನಿನಲ್ಲಿ ಕಾಂಗ್ರೆಸ್ ಅಧಿವೇಶನವನ್ನು ಏರ್ಪಡಿಸಬೇಕೆಂಬ ಸೂಚನೆಯ ಬಗ್ಗೆ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದಂದಿನಿಂದ ಈ ಪ್ರತಿಗಾಮಿ ಹೆಜ್ಜೆಗೆ ಎರಡು ತುರ್ತಿನ ಕಾರಣಗಳು ಕಂಡುಬಂದಿವೆ. ಇಂಗ್ಲಂಡಿನಲ್ಲಿ, ನಮ್ಮ ಉಪೇಕ್ಷೆಯಿಂದಾಗಿ, ನಿರ್ಣಯ ನಮ್ಮ ವಿರುದ್ಧವಾಗುವುದನ್ನು ತಡೆಯಲು ಮತ್ತು ಸುಸಂಸ್ಕೃತ ಜಗತ್ತಿನ ಸಹಾನುಭೂತಿಯನ್ನು ಪಡೆಯಲು ಅದು ಅವಶ್ಯವೆಂದು ತೋರುತ್ತಿದೆ. ಮೊದಲನೆಯ ವಾದಕ್ಕೆ ನಾವೀಗಾಗಲೇ ಕಳೆದ ಸಂಚಿಕೆಯಲ್ಲಿ ಉತ್ತರ ನೀಡಿದ್ದೇವೆ. ಪ್ರಖ್ಯಾತ ವಾಗ್ಮಿಯೊಬ್ಬನ ಭಾಷಣಗಳಿಂದಾಗಲಿ ಇಲ್ಲವೆ ಅಷ್ಟೊಂದು ಪ್ರಖ್ಯಾತರಲ್ಲದ ಹಲವಾರು ವಾಗ್ಮಿಗಳ ಭಾಷಣಗಳಿಂದಾಗಲಿ ಬ್ರಿಟಿಷ್ ಹಿತಾಸಕ್ತಿಗಳಿಗೆ ವಿರುದ್ಧವಾದ ನಮ್ಮ ಹಕ್ಕುಗಳ ಬೇಡಿಕೆಗೆ ಬ್ರಿಟಿಷರ ಬೆಂಬಲವನ್ನು ಪಡೆಯುವುದು ಅಸಾಧ್ಯ. ದೀರ್ಘ ಕಾಲದ ಹಾಗೂ ಏಕಪ್ರಕಾರದ ಆಂದೋಲನವನ್ನು ಇಂಗ್ಲೆಂಡಿನಲ್ಲಿ ನಡೆಸುವುದರಿಂದ ಮಾತ್ರ ಕೆಲಮಟ್ಟಿಗೆ, ನಿಜವಾದ ಹಾಗೂ ಬಹು ಕಾಲ ಬಾಳಬಲ್ಲ ಪರಿಣಾಮವನ್ನು ಬ್ರಿಟಿಶ್ ಜನರಮೇಲೆ ಉಂಟು ಮಾಡಬಹುದು. ಮತ್ತು ಅದರ ಪ್ರಭಾವವೂ ಕೂಡ ನಮ್ಮ ಉದ್ದೇಶ ಸಾಧನೆಯ ದೃಷ್ಟಿಯಿಂದ ಸಾಕಾಗಲಿಕ್ಕಿಲ್ಲ....



ಭಾರತದಲ್ಲಿ ಆಡಳಿತ ನಡೆಸುತ್ತಿರುವ ಬ್ರಿಟಿಶ್ ಸರಕಾರ ಮತ್ತು ಭಾರತದ ಪ್ರಜೆಗಳ ನಡುವೆ ಉದ್ಭವಿಸಬಹುದಾದ ಸಂವಿಧಾನಾತ್ಮಕ ಪ್ರಶ್ನೆಯ ದೃಷ್ಟಿಯಿಂದ ಜಗತ್ತಿನ ಅಭಿಪ್ರಾಯ ಇಲ್ಲವೆ ಸಹಾನುಭೂತಿಯಿಂದ ಆಗಬಹುದಾದ ಪ್ರಯೋಜನವೇನೆಂಬುದು ನಮಗೆ ಕಂಡುಬರುತ್ತಿಲ್ಲ. ಕಾರ್ಯ ರೂಪದಲ್ಲಿ ಬರದೆ ಇದ್ದ ಅನುಮೋದನೆ ನಮ್ಮ ಉದ್ದೇಶಗಳಿಗೆ ಯಾವ ನೆರವೂ ನೀಡದು. ಅಲ್ಲದೆ ಜಗತ್ತಿನ ಸಹಾನುಭೂತಿ ಇಂತಹ ಕಾರ್ಯ ರೂಪದಲ್ಲಿ ಬರದ ಅನುಮೋದನೆಗಿಂತ ಹೆಚ್ಚಿನ ಉತ್ಸಾಹ ತೋರಿಸುವುದಿಲ್ಲ. ಅದು ಹಾಗೆ ಆಗಿರದಿದ್ದರೂ ಲಂಡನ್ನಿನಲ್ಲಿ ನಡೆಯಬಹುದಾದ ಕಾಂಗ್ರೆಸ್ ಅಧಿವೇಶನ ತಾತ್ಪೂರ್ತಿಕ ಕುತೂಹಲವನ್ನು ಕೆರಳಿಸಬಹುದಲ್ಲದೆ ಬೇರೇನನ್ನೂ ಮಾಡಲಾರದು. ಈ ವಿಷಯಕ್ಕೆ ಸಂಬಂಧಿಸಿದ ಹಾಗೆ ಸ್ವಾಮಿ ವಿವೇಕಾನಂದರು ಅಮೇರಿಕೆಗೆ ತೆರಳಿ ಅಲ್ಲಿ ಮಾಡಿ ಬಂದ ಕಾರ್ಯ ಮತ್ತು ಆ ತರುವಾಯ ಅವರ ಅನುಯಾಯಿಗಳು ಮಾಡಿದ ಕಾರ್ಯ ಲಂಡನ್ನಿನಲ್ಲಿ ನೂರಾರು ಅಧಿವೇಶನಗಳು ಮಾಡಬಹುದಾದ ಕಾರ್ಯಕ್ಕಿಂತ ಹೆಚ್ಚು ಪರಿಣಾಮಕಾರಿ ಎಂದೇ ಹೇಳಬಹುದು. ನಮ್ಮ ಗತ ಕಾಲದ ಚರಿತ್ರೆ ಭವ್ಯವಾದುದು, ನಮ್ಮ ಪ್ರಾಚೀನ ಸಂಸ್ಕೃತಿ, ನಾಗರಿಕತೆಗಳು ಶ್ರೇಷ್ಠವಾದವುಗಳು, ಇಂದಿಗೂ ನಮ್ಮ ಪೂರ್ವಜರ ಪ್ರತಿಭೆಯ ಹಾಗೂ ಚಾರಿತ್ರ್ಯದ ಅಂಶವನ್ನು ನಾವು ಹೊಂದಿದ್ದೇವೆ, ಜಗತ್ತಿಗೆ ಸಲ್ಲಿಸಲು ನಮ್ಮಲ್ಲಿ ಇನ್ನೂ ಏನೋ ಇದೆ ಎಂದು ನಮ್ಮನ್ನು ಇತರ ದೇಶಗಳಿಗೆ ತೋರಿಸಿಕೊಟ್ಟು ಅವುಗಳ ಸಹಾನುಭೂತಿಯನ್ನು ನಮ್ಮ ಪೌರುಷದ, ಯೋಗ್ಯತೆಯ ಆಧಾರದ ಮೇಲೆ ಗಳಿಸುವುದು ನಿಜವಾದ ಮಾರ್ಗ, ಭಿಕ್ಷೆ ಕೇಳುವುದು ಸರಿಯಾದ ಮಾರ್ಗವಲ್ಲ.

## [21]
## ಹೆಚ್ಚು ಪರಿಪೂರ್ಣ ಸಮನ್ವಯದೆಡೆಗೆ

ವೇದಾಂತ ಎಂಬ ಪದವನ್ನು ಸಾಮಾನ್ಯವಾಗಿ ಮಹೋನ್ನತ ಹಾಗೂ ಸನ್ಯಾಸದ ಬುದ್ಧಿ ಶಕ್ತಿಯನ್ನು ಹೊಂದಿದ್ದ ಶಂಕರಾಚಾರ್ಯರು ಸ್ಥಾಪಿಸಿದ ಕಟ್ಟುನಿಟ್ಟಿನ ಅದ್ವೈತ ಮತ್ತು ವಿಶಿಷ್ಟ ರೀತಿಯ ಮಾಯಾವಾದಗಳೊಡನೆ ಗುರುತಿಸಲಾಗುತ್ತಿದೆ. ಆದರೆ ವೇದಾಂತಿಗಳಿಗೆ ಅಧಿಕೃತ ಶಾಸ್ತ್ರಗಳೆಂದರೆ ಉಪನಿಷತ್ತುಗಳ ಮೂಲ ಗ್ರಂಥಗಳಲ್ಲದೆ ಅವುಗಳನ್ನು ಕುರಿತು ಬರೆದ ಭಾಷ್ಯ ಗ್ರಂಥಗಳಾಗಲಾರವು. ಶಂಕರಾಚಾರ್ಯರ ಗ್ರಂಥಗಳು ಅದೆಷ್ಟೇ ಮಹತ್ವದವು ಹಾಗೂ ತಾತ್ಪೂರ್ತಿಕವಾಗಿ ತೃಪ್ತಿಕರವಾದವುಗಳು ಎನಿಸಿದರೂ ಅವು

ಉಪನಿಷತ್ತುಗಳ ಒಂದು ಬಗೆಯ ಸಮನ್ವಯ ಮತ್ತು ವ್ಯಾಖ್ಯಾನ ಗ್ರಂಥಗಳಾಗಿವೆ. ಹಾಗೆಯೆ ಈ ಹಿಂದೆ ಇತರ ಕೆಲವು ಭಾಷ್ಯಗಳೂ ರಚಿತವಾಗಿವೆ. ಅವೂ ಕೂಡ ರಾಷ್ಟ್ರದ ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರಿವೆ. ಹೀಗಿರುವಾಗ ಅವುಗಳ ತರುವಾಯ ಭವಿಷ್ಯದಲ್ಲಿ ಇನ್ನೂ ಹೆಚ್ಚು ಪರಿಪೂರ್ಣವಾದ ಭಾಷ್ಯ ಗ್ರಂಥಗಳು ಹುಟ್ಟಲಾರವು ಎಂದು ಹೇಳಲಾಗದು. ಶ್ರೀ ರಾಮಕೃಷ್ಣರು ಹಾಗೂ ಸ್ವಾಮಿ ವಿವೇಕಾನಂದರು ಬೋಧಿಸಿದ ತತ್ವಗಳು ಇಡೀ ಜೀವನವನ್ನು, ಜೀವನದ ಎಲ್ಲ ಕ್ರಿಯೆಗಳನ್ನು ವ್ಯಾಪಿಸಿಕೊಳ್ಳುವ ವ್ಯಾಪಕ ಸಮನ್ವಯದ ವಿಚಾರಗಳನ್ನು ಸಿದ್ಧಪಡಿಸುತ್ತ ಬಂದಿವೆ. ಈಗ ಮಸಕು ಮಸಕಾಗಿ ಆರಂಭವಾಗಿರುವುದು ಬುದ್ಧನು ಜೀವಿಸುತ್ತಿದ್ದಾಗ ಹಿಂದೊಮ್ಮೆ ಭಾರತದಲ್ಲಿ ನಡೆಯುತ್ತಿದ್ದುದರ ಪುನರಾವರ್ತನೆ–ಯಾಗಿದೆ. ಬುದ್ಧನು ಜೀವಿಸಿ ಆರ್ಯ ದೇಶಗಳಿಗೆ ತತ್ವಜ್ಞಾನ ಹಾಗೂ ನೈತಿಕತೆಯನ್ನು ಬೋಧಿಸಿದುದು ಹೆಚ್ಚು ಶೀಘ್ರವಾದದ್ದಾಗಿದ್ದರೂ, ಚಿಕ್ಕಪುಟ್ಟ ವಿಷಯಗಳಿಗೆ ಸೀಮಿತವಾಗಿತ್ತು. ಈಗಿನಂತೆ ಆಗಲೂ ಪ್ರಬಲವಾದ ಆತ್ಮ ಶಕ್ತಿಯೊಂದು – ಅದು ಮಾನವ ರೂಪದಲ್ಲಿ, ಶ್ರೇಷ್ಠ ರೀತಿಯಲ್ಲಿ ಹೊರಹೊಮ್ಮಿದ ದೈವೀ ಶಕ್ತಿಯಾಗಿದ್ದು ಅವತಾರ ಪುರುಷನದಿರಲಿ, ವಿಭೂತಿ ಪುರುಷನದಾಗಿರಲಿ – ಭಗವಂತನ ಪೂರ್ಣ ಅಭಿವ್ಯಕ್ತಿಯಾಗಿ ಜನರ ಮಧ್ಯದಲ್ಲಿ ಅವತರಿಸಿತ್ತು ಮತ್ತು ಅವರ ದೈನಂದಿನ ಜೀವನದಲ್ಲಿ ಹಾಗೂ ಆಚರಣೆಯಲ್ಲಿ ಅಪ್ಪಟ ಆಧ್ಯಾತ್ಮಿಕತೆಯ ಪ್ರೇರಣೆಯನ್ನು ತಂದುಕೊಟ್ಟಿತು. ಆದರೆ ಈ ಸಲ ಅದು ಪರಿಪೂರ್ಣ ಜ್ಯೋತಿಯಾಗಿದ್ದು ಬೌದ್ಧ ಮತಕ್ಕಿಂತ ಭಿನ್ನವಾಗಿದೆ. ಬೌದ್ಧ ಮತವು ವೈದಿಕ ನೈತಿಕತೆಯನ್ನು ಪ್ರಚುರ ಪಡಿಸುತ್ತಿದ್ದರೂ ವೇದಾಂತದ ಮೂಲಭೂತ ಸತ್ಯವನ್ನು ನಿರಾಕರಿಸಿತು, ಮತ್ತು ಆ ಕಾರಣದಿಂದಾಗಿ ತಾನು ಬೆಳೆದ ಮೂಲ ಸ್ಥಾನದಿಂದ ಹೊರದೂಡಲ್ಪಟ್ಟಿತು. ಅಂದು ಉಂಟಾದ ಭೌತಿಕ ಪರಿಣಾಮ ಇಂದೂ ಉಂಟಾಗಲಿದೆ. ಆಗ ಬಹು ದೊಡ್ಡ ಪ್ರಮಾಣದ ರಾಜಕೀಯ, ನೈತಿಕ ಮತ್ತು ಸಾಮಾಜಿಕ ಕ್ರಾಂತಿ ಸಂಭವಿಸಿತು, ಇಂದೂ ಸಂಭವಿಸಲಿದೆ. ಅದರಿಂದಾಗಿ ಭಾರತವು ಇತರ ದೇಶಗಳಿಗೆ ಗುರುದೇಶವಾಯಿತು. ಮತ್ತು ತನ್ನ ಜ್ಯೋತಿಯನ್ನು ಇತರ ಎಲ್ಲ ನಾಗರಿಕ ದೇಶಗಳ ಮೇಲೆ ಹರಡಲು ಕೊಂಡೊಯ್ದಿತು, ಹೊಸ ವಿಚಾರಗಳ ಪಡಿಯಚ್ಚನ್ನು ತಯಾರು ಮಾಡಿತು, ಹೊಸ ರೂಪ – ರಚನೆಗಳು ಅದರಿಂದಾಗಿ ಸೃಷ್ಟಿಯಾದವು, ಅವು ಇಂದಿಗೂ ಕೂಡ ಶಕ್ತಿಯುತವಾಗಿ ಜೀವಂತವಾಗಿವೆ.



## [22]

## ಮನೋಧರ್ಮದ ಪಡಿಯಚ್ಚನ್ನು ಮುರಿದು ಹಾಕಿರಿ, ಅದರಿಂದಾಗಿ ಆತ್ಮ ಬದುಕುವಂತಾಗಲಿ

ಹಿಂದುತ್ವ ಎರಡು ಬಗೆಯದಾಗಿದೆ – ಒಂದು ಅಡಿಗೆಮನೆಯಲ್ಲಿ ತನ್ನ ಸ್ಥಾನವನ್ನು ಕಂಡುಕೊಂಡದ್ದಾಗಿದ್ದು ದೇಹವನ್ನು ಶುಚಿಗೊಳಿಸುವುದರ ಮೂಲಕ ಸ್ವರ್ಗವನ್ನು ಅರಸುತ್ತದೆ, ಇನ್ನೊಂದು ಭಗವಂತನನ್ನು ಅರಸುತ್ತದೆ ಆದರೆ ಅದು ಆತ್ಮದ ಮೂಲಕ, ಅಡಿಗೆ ಮನೆಯ ಪಾತ್ರೆಗಳ ಮೂಲಕವಲ್ಲ, ಸಾಮಾಜಿಕ ಸಂಪ್ರದಾಯಗಳ ಮೂಲಕವಲ್ಲ. ಎರಡನೆಯದು ಕೂಡ ಹಿಂದುತ್ವಕ್ಕೆ ಸಂಬಂಧಿಸಿದುದೇ, ಅದು ಮೊದಲನೆಯದಕ್ಕಿಂತ ಹೆಚ್ಚು ಪ್ರಾಚೀನವಾದದ್ದು ಮತ್ತು ಬಾಳಿಕೆ ಬರುವಂತಹದೂ ಆಗಿದೆ. ಇದು ಬೀಷ್ಮ–ಕೃಷ್ಣರ, ಶಂಕರ–ಚೈತನ್ಯರ ಹಿಂದುತ್ವ, ಹಿಂದುಸ್ತಾನವನ್ನು ದಾಟಿ ಆಚೆಗೆ ಸಾಗಿ ಹರಡುವಂತಹದು, ಅತಿ ಪ್ರಾಚೀನ ಕಾಲದಿಂದ ಬಂದಂತಹದು, ಚಿರಂತನ ಕಾಲ ಬಾಳುವಂತಹದು, ಮುಂಬರುವ ಎಲ್ಲ ಕಾಲದಲ್ಲೂ ಇರುವಂತಹದು. ಇದರ ಸೂತ್ರ ವಾಕ್ಯ **'ಕ್ರಿಯೆ'ಯಲ್ಲ 'ಕರ್ಮ', 'ಶಾಸ್ತ್ರ'ವಲ್ಲ 'ಜ್ಞಾನ', 'ಆಚಾರ'ವಲ್ಲ 'ಭಕ್ತಿ'**. ಹೀಗಿದ್ದರೂ ಇದು ಕ್ರಿಯೆ, ಶಾಸ್ತ್ರ ಮತ್ತು ಆಚಾರಗಳನ್ನು ಸ್ವೀಕರಿಸುತ್ತದೆ, ಅವುಗಳೇ ಗುರಿಯೆಂದಲ್ಲ, ಅವುಗಳಿಗಾಗಿಯೆ ಅಲ್ಲ, ಆದರೆ ಕರ್ಮ, ಜ್ಞಾನ, ಭಕ್ತಿಗಳನ್ನು ಪರಿಪೂರ್ಣ ಸ್ಥಿತಿಗೆ ಮುಟ್ಟಿಸುವ ಸಾಧನ–ಸಲಕರಣೆಗಳೆಂದು ಸ್ವೀಕರಿಸಲಾಗಿದೆ.

ಉನ್ನತತರ ಹೆಚ್ಚು ನೈಜವಾದ ಹಿಂದುತ್ವವು ಕೂಡ ಎರಡು ಬಗೆಯದಾಗಿದೆ : ಮತೀಯ ಮತ್ತು ಮತೀಯವಲ್ಲದ್ದು, ಒಡಕು ಹುಟ್ಟಿಸುವಂತಹದು ಮತ್ತು ಸಮನ್ವಯಗೊಳಿಸುವಂತಹದು, ತನ್ನದೆನ್ನುವುದರಿಂದಲೆ ಬಂಧಿತವಾಗಿರುವುದು ಮತ್ತು ದೈವಿಕವಾದುದೆಲ್ಲವನ್ನು ಅರಸುವಂತಹದು ಎಂದು. ಮೊದಲನೆಯದು ರಾಜಸಿಕ ಇಲ್ಲವೆ ತಾಮಸಿಕ ಆಸಕ್ತಿಯಿಂದ ಒಂದು ವಿಚಾರಕ್ಕೆ, ಅನುಭವಕ್ಕೆ, ಅಭಿಪ್ರಾಯಕ್ಕೆ ಇಲ್ಲವೆ ಅಭಿಪ್ರಾಯಗಳ ಸಂಗ್ರಹಕ್ಕೆ, ಮನೋವೃತ್ತಿಗೆ, ಧೋರಣೆಗೆ, ವಿಶಿಷ್ಟ ಗುರುವಿಗೆ, ಆಯ್ದುಕೊಂಡ ಅವತಾರಕ್ಕೆ ಅಂಟಿಕೊಂಡಿರುತ್ತದೆ. ಇಂತಹ ಆಸಕ್ತಿ ಅಸಹನೆಯಿಂದ ಕೂಡಿದ್ದು, ದುರಾಗ್ರಹದ್ದು, ತನ್ನ ಅಲ್ಪ ಜ್ಞಾನದ ಬಗ್ಗೆ ಗರ್ವಪಡುವಂತಹದು, ತನ್ನದಲ್ಲದ ಇತರ ಮತೀಯರ ವಿಚಾರಗಳನ್ನು ಹೀಗಳೆಯುವಂತಹದು. ಅದು ಯಾವಾಗಲೂ ಇತರ ಮತೀಯರ ಕುಸಂಸ್ಕಾರಗಳನ್ನು, ಮೂಢ ನಂಬಿಕೆಗಳನ್ನು ಹಳಿಯುತ್ತ ತನ್ನವಾದವುಗಳ ಬಗ್ಗೆ

ಕುರುಡಾಗಿರುತ್ತದೆ. "ತನ್ನ ಮತದ ಗುರುವೇ ನಿಜವಾದ ಗುರು, ಇತರ ಮತ ಪಂಥಗಳ ಗುರುಗಳೆಲ್ಲ ಬೂಟಾಟಿಕೆಯ ಇಲ್ಲವೆ ನೀಚ ದರ್ಜೆಯ ಗುರುಗಳು" ಇಲ್ಲವೆ "ನನ್ನ ಮನೋಧರ್ಮವೇ ನಿಜವಾದ ಮನೋಧರ್ಮ ನನ್ನ ಮಾರ್ಗವನ್ನು ಅನುಸರಿಸದವರು ಮೂರ್ಖರು ಇಲ್ಲವೆ ಶುಷ್ಕ ಪಂಡಿತರು ಇಲ್ಲವೆ ನಿಷ್ಠೆಯಿಲ್ಲದವರು" ಇಲ್ಲವೆ "ನನ್ನ ಮತದ ಅವತಾರವೇ ನಿಜವಾದ ದೇವರು ಇತರ ಮತಗಳ ಜನರು ನಂಬುವ ಅವತಾರಗಳೆಲ್ಲವೂ ನನ್ನ ಮತದ ಅವತಾರದ್ದೇ ಆಗಿರುವ ಬೇರೆ ಬೇರೆ ಸಾಮಾನ್ಯ ದರ್ಜೆಯ ಪ್ರಕಟಗೊಂಡ ರೂಪಗಳು" ಇಲ್ಲವೆ "ತನ್ನ ಇಷ್ಟ ದೇವತೆಯೇ ನಿಜವಾದ ದೇವರು, ಉಳಿದ ದೇವರುಗಳೆಲ್ಲರೂ ತನ್ನ ಇಷ್ಟ ದೇವತೆಯಿಂದಲೆ ಹೊರಹೊಮ್ಮಿದ ಕೆಳ ದರ್ಜೆಯ ದೇವತಾ ಪ್ರಕಾರಗಳು" ಎಂದೆಲ್ಲ ಅದು ಹೇಳಿಕೊಳ್ಳುತ್ತದೆ.

ಆತ್ಮವು ಹೆಚ್ಚು ಉನ್ನತ ಸ್ಥಿತಿಗೆ ತಲುಪಿದಾಗ ಅದು ಇಷ್ಟಪಟ್ಟ ತನ್ನದೇ ವಿಚಾರ, ಅನುಭವ, ಅಭಿಪ್ರಾಯ, ಮನೋಧರ್ಮ, ಗುರು, ಇಷ್ಟ ದೇವತೆಗಳನ್ನು ಅನುಸರಿಸಿದಾಗ್ಯೂ ಇತರರು ಅನುಸರಿಸುವುದನ್ನು ಕಡೆಗಣಿಸಿ, ಪ್ರತ್ಯೇಕವೆಂದು ನೋಡುವುದಿಲ್ಲ. "ಮಾರ್ಗಗಳು ಹಲವಾರಿವೆ ಮತ್ತು ಎಲ್ಲವೂ ಸಮನಾಗಿ ಭಗವಂತನೆಡೆಗೆ ಮುನ್ನಡೆಸುತ್ತವೆ, ಎಲ್ಲ ಜನರು – ಅವರು ಪಾಪಿಗಳಾಗಿರಲಿ ಇಲ್ಲವೆ ನಾಸ್ತಿಕರಾಗಿರಲಿ – ಸಾಧನಾ ಪಥದಲ್ಲಿ ನನ್ನ ಬಾಂಧವರೇ ಆಗಿದ್ದಾರೆ, ಪ್ರೇಮರೂಪಿ ಭಗವಂತನು ತನ್ನದೇ ಆದ ರೀತಿಯಲ್ಲಿ ಏಕಮೇವಾದ್ವಿತೀಯನಾದ ತನ್ನೆಡೆಗೆ ಎಳೆದು ಕರೆದೊಯ್ಯುತ್ತಾನೆ" ಎಂದು ಅದು ಸಾರಿ ಹೇಳುತ್ತದೆ. ಪೂರ್ಣ ಜ್ಞಾನವು ಆತ್ಮದಲ್ಲಿ ಉದಯಿಸಿದಾಗ ಅದು ಎಲ್ಲ ಅನುಭವಗಳನ್ನು ಅಪ್ಪಿಕೊಳ್ಳುತ್ತದೆ, ಎಲ್ಲ ವಿಚಾರಗಳೂ ಸತ್ಯವಾದವೆಂದು ಅದಕ್ಕೆ ತಿಳಿದಿರುತ್ತದೆ. ಎಲ್ಲ ಅಭಿಪ್ರಾಯಗಳು, ಅನುಭವಗಳು ಮತ್ತು ಮನೋವೃತ್ತಿಗಳು ವಿಶ್ವಂಭರ ಅನುಭವ ಮತ್ತು ಸಂಪೂರ್ಣತೆಯನ್ನು ಪಡೆಯುವ ಸಾಧನಗಳು ಹಾಗೂ ಹಂತಗಳಾಗಿರುತ್ತವೆ. ಎಲ್ಲ ಗುರುಗಳು ಏಕೈಕ ಗುರುವಾದವನ ಅಪರಿಪೂರ್ಣ ವಾಹಿನಿಗಳು ಹಾಗೂ ವಿಭೂತಿಗಳು, ಎಲ್ಲ ಇಷ್ಟ ದೇವತೆಗಳು ಮತ್ತು ಅವತಾರಗಳು ಸ್ವಯಂ ಭಗವಂತನೇ ಆಗಿರುತ್ತಾರೆ.

ಅದನ್ನೇ ಶ್ರೀ ರಾಮಕೃಷ್ಣರು ತಮ್ಮ ಜೀವನ ಹಾಗೂ ಸಾಧನೆಗಳಿಂದ ಕಲಿಸಿಕೊಟ್ಟರು, ಆದುದರಿಂದ ಅವರು ಮಾನವತೆಯ ಭವಿಷ್ಯವನ್ನು ತಯಾರು ಮಾಡಿದ ಆ ಯುಗದ ಅವತಾರ ಪುರುಷರು. ಆದರೆ ಅವರನ್ನು ಒಂದು ಪಂಥದ



ಗುರುವನ್ನಾಗಿ, ಧರ್ಮಾಂಧತೆಯ ವಿಭೂತಿ ಪುರುಷರನ್ನಾಗಿ ಮಾಡುವ ಅಪಾಯವಿರುತ್ತದೆ. ಅವರನ್ನು ಮತವೊಂದಕ್ಕೆ ಬದ್ಧರನ್ನಾಗಿ ಮಾಡಿ, ಮತಾಂಧತೆಯ ರೀತಿಯಲ್ಲಿ ಪೂಜಿಸಿ ಅವರ ಬಗ್ಗೆ ಭಕ್ತಿ ಪ್ರದರ್ಶನ ಮಾಡುವುದು ಅವರ ಜೀವನ ಹಾಗೂ ಸಾಧನೆಗಳನ್ನು ಅಸಂಗತ ಮಾಡಿದಂತಾಗುತ್ತದೆ. ಇಂತಹದನ್ನು ಮಾಡಬಾರದು. ಅದು ಒಂದು ಮತದ ಸಂಘಟನೆಯ ಜೊತೆಗಿರುವ ದೊಡ್ಡ ಶಾಪವಾಗುತ್ತದೆ. ಪಂಥಗಳನ್ನು, ದೇವ ಮಂದಿರಗಳನ್ನು ಬಿಟ್ಟುಕೊಟ್ಟು ಕೇವಲ ಭಗವಂತನನ್ನು ಆರಾಧಿಸೋಣ.

ಬಂಧನದ ನಾಶ, ಸ್ವಾತಂತ್ರ್ಯ ಸಿದ್ಧಿ, ನಮ್ಮ ಬೇಡಿಗಳನ್ನು ಕಳಚಿ ಅವುಗಳನ್ನು ತುಳಿಯುವುದು, ಇವು ಭವಿಷ್ಯದಲ್ಲಿ ಸಾಧಿಸಬೇಕಾದ ಮೊದಲ ಆವಶ್ಯಕತೆಗಳು. ಶ್ರೀ ರಾಮಕೃಷ್ಣರು 'ಮುಕ್ತಿ' ಕೊಡಲು ಬಂದಿದ್ದರು, ಮತ್ತೊಂದು ಬಂಧನವನ್ನು ಹೇರುವುದಕ್ಕಲ್ಲ. ಅವರ ಸಂದೇಶಗಳನ್ನು ಜನಾಂಗಗಳಿಗೆ ತಲುಪಿಸಲು ಬದ್ಧರಾಗಿದ್ದ ಸ್ವಾಮಿ ವಿವೇಕಾನಂದರು ಎಲ್ಲ ವಿಷಯಗಳಲ್ಲಿ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುವವರಾಗಿದ್ದರು. ಹಿಂದುತ್ವದ ಆತ್ಮ ಯೋಗ್ಯವಲ್ಲದ ದೇಹದಲ್ಲಿ ಕುಗ್ಗಿಕೊರಗುತ್ತಲಿದೆ. ಈ ಪಡಿಯಚ್ಚನ್ನು ಮುರಿದು ಹಾಕಿರಿ, ಅದರಿಂದಾಗಿ ಆತ್ಮ ಬದುಕಿಕೊಳ್ಳುವಂತಾಗಲಿ. ಆತ್ಮವನ್ನು ನಶ್ವರ ದೇಹದೊಂದಿಗೆ ಗುರುತಿಸುವ ದೇಹಾತ್ಮಕ ಬುದ್ಧಿರೂಪದ ಕುರುಡುತನವನ್ನು ನಾಶ ಮಾಡುವುದು ಯೋಗದ ಮೊದಲ ಪಾಠವಲ್ಲವೆ? ದೇಹ ತಾರುಣ್ಯದಿಂದ ಕೂಡಿದ್ದು, ಎಲ್ಲ ಕಾರ್ಯಗಳಿಗೆ ಹೊಂದಿಕೊಳ್ಳುವಂತಹದಾಗಿದ್ದು, ಆರೋಗ್ಯದಿಂದಿದ್ದದ್ದು ಆಗಿದ್ದರೆ ಅದನ್ನು ಆತ್ಮ ಉಪಯೋಗಿಸಬಹುದು, ಆದರೆ ಅದು ಸೊರಗಿದೆ, ರೋಗಗ್ರಸ್ತವಾಗಿದೆ, ಅಶುದ್ಧವಾಗಿದೆ; ಅದನ್ನು ಬದಲಿಸಬೇಕು, ಪಾಶ್ಚಾತ್ಯರ ಮೂರ್ತಿಭಂಜಕ ಭಾವದಿಂದಲ್ಲ, ಅದು ದೇಹದೊಡನೆ ಆತ್ಮವನ್ನೂ ನಾಶಮಾಡುತ್ತದೆ, ಆದರೆ ಅದನ್ನು ರಾಷ್ಟ್ರೀಯ ಯೋಗ ಪದ್ಧತಿಯ ಪ್ರಕಾರ ಕೈಕೊಳ್ಳಬೇಕು.

## [23]

## ಎರಡು ಸೂಕ್ತಿಗಳು

ಶ್ರೀ ರಾಮಕೃಷ್ಣರು ಹೀಗೆ ಹೇಳಿದರು, ಸ್ವಾಮಿ ವಿವೇಕಾನಂದರು ಹೀಗೆ ಹೇಳಿದರು, ಹೌದು, ಆದರೆ ಆ ಅವತಾರ ಪುರುಷ ಮಾತುಗಳಲ್ಲಿ ವ್ಯಕ್ತಪಡಿಸದಿದ್ದ ಸತ್ಯಗಳನ್ನು ಮತ್ತು ಆ ಸಂತರು ತಮ್ಮ ಬೋಧನೆಗಳಲ್ಲಿ ಹೇಳದೆ

ಬಿಟ್ಟುಕೊಟ್ಟುದುದನ್ನು ನಾನು ಅರಿತುಕೊಳ್ಳಬಯಸುವೆ. ಮನುಷ್ಯ ಎಂದಿಗೂ ಕಲ್ಪನೆ ಮಾಡಿಕೊಂಡಿರಲು ಸಾಧ್ಯವಾಗದಂತಹ, ಮಾತುಗಳಲ್ಲಿ ಉಚ್ಚರಿಸಲಾಗದಂತಹ ಇನ್ನೂ ಹೆಚ್ಚಿನದು ಭಗವಂತನಲ್ಲಿ ಯಾವಾಗಲೂ ಇದ್ದೇ ಇರುತ್ತದೆ.

ಶ್ರೀ ರಾಮಕೃಷ್ಣರು ಎಂತಹವರಾಗಿದ್ದರು? ಅವರಲ್ಲಿ ಭಗವಂತ ಮಾನವ ರೂಪದಲ್ಲಿ ಪ್ರಕಟನಾಗಿದ್ದನು. ಆದರೆ ಇಂತಹ ಪ್ರಕಟಣೆಯ ಹಿಂದೆ ಭಗವಂತ ತನ್ನ ಅನಂತ ಅವ್ಯೆಯಕ್ತಿಕತೆಯಲ್ಲಿ ಹಾಗೂ ವಿಶ್ವಂಭರ ವ್ಯಕ್ತಿತ್ವದಲ್ಲಿ ಇರುತ್ತಾನೆ. ಸ್ವಾಮಿ ವಿವೇಕಾನಂದರು ಎಂತಹವರಾಗಿದ್ದರು? ಶಿವನ ಕಣ್ಣಿನಿಂದ ಹೊರಹೊಮ್ಮಿದ ಪ್ರಜ್ವಲಿಸುವ ಕುಡಿನೋಟವಾಗಿದ್ದರು, ಆದರೆ ಅವರು ಬಂದುದರ ಹಿಂದೆ ಸ್ವತಃ ಶಿವ, ಬ್ರಹ್ಮ, ವಿಷ್ಣು ಮತ್ತು ಓಂ ಇವೆಲ್ಲವನ್ನು ಮೀರಿದ ದೈವೀ ನೆಟ್ಟನೋಟವಿತ್ತು.

## [24]

## ಸುಳಿವು, ಸೂಚನೆಗಳು – ಸಂಕೋಲೆಗಳಲ್ಲ

ತತ್ವಜ್ಞಾನದ ಇಲ್ಲವೆ ಧರ್ಮದ ಪದ್ಧತಿ ಒಂದು ವ್ಯವಸ್ಥೆಯನ್ನು ಕುರಿತು ನೀಡಲಾದ ಹೇಳಿಕೆಯಷ್ಟೆ. ಈ ವ್ಯವಸ್ಥೆ ಭಗವಂತನು ನಮಗೆ ನಮ್ಮ ಸತ್ತೆಯ ಸ್ಥಾನಮಾನವೆಂದು ಪ್ರಕಟಿಸಿದ ವಿಶ್ವದಲ್ಲಿಯ ಅಸ್ತಿತ್ವದ ವ್ಯವಸ್ಥೆ. ನಾವು ಪ್ರಕೃತಿಯಲ್ಲಿ ಕಾರ್ಯಕೈಕೊಳ್ಳುತ್ತಿರುವಾಗ ಮನಸ್ಸಿಗೆ ಒಂದು ಆಧಾರವಾಗಿರಲೆಂದು ಅದನ್ನು ನೀಡಲಾಗಿದೆ. ಆದರೆ ನಮ್ಮ ದೃಷ್ಟಿ ನಿಖರವಾಗಿ ಇತರರ ದೃಷ್ಟಿಯಂತೆ ಇರಬೇಕೆಂದೇನಿಲ್ಲ. ನಮ್ಮ ಮನಸ್ಸಿಗೆ ಯೋಗ್ಯವೆನಿಸಿದ ಯೋಚನೆಯ ರೂಪ ಬೇರೆ ರೀತಿಯಿಂದ ರಚಿತವಾದ ಮನೋವೃತ್ತಿಗೆ ತಕ್ಕದ್ದಾಗಿರಬೇಕೆಂದೇನಿಲ್ಲ, ನಮ್ಮ ಪದ್ಧತಿಯಲ್ಲಿ ಮತಾಂಧತೆಯಿಲ್ಲದ ದೃಢತೆ, ದೌರ್ಬಲ್ಯವಿಲ್ಲದ ಸಹನೆ ಇಟ್ಟುಕೊಳ್ಳುವುದು ನಮ್ಮ ಬೌದ್ಧಿಕ ದೃಷ್ಟಿಯ ಧೋರಣೆಯಾಗಿರಬೇಕು.

ನಿಮ್ಮ ಪದ್ಧತಿಯನ್ನು ಪ್ರಶ್ನಿಸುತ್ತ ಅದು ಒಂದು ಬಗೆಯ ಇಲ್ಲವೆ ಇನ್ನೊಂದು ಬಗೆಯ ಶಾಸ್ತ್ರಕ್ಕನುಗುಣವಾಗಿ ಇಲ್ಲ, ತತ್ವಜ್ಞಾನಿಗಳು, ಸಂತರು ಇಲ್ಲವೆ ಅವತಾರಿ ಪುರುಷರು ಅಧಿಕೃತವಾಗಿ ಹೇಳಿದ ಹಾಗಿಲ್ಲ ಎಂದು ವಾದಿಸುವ ಜನರಿರುತ್ತಾರೆ. ಆಗ ನೀವು ಸಾಕ್ಷಾತ್ಕರಿಸಿಕೊಳ್ಳುವುದು ಮತ್ತು ಅನುಭವಕ್ಕೆ ತಂದುಕೊಳ್ಳುವುದು ಮಾತ್ರ ಮಹತ್ವದ ಪ್ರಮಾಣಗಳು ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ಅಸ್ತಿತ್ವದ ಬಗ್ಗೆ ಶಂಕರಾಚಾರ್ಯರು ವಾದಿಸಿದ್ದಾಗಲಿ, ಸ್ವಾಮಿ ವಿವೇಕಾನಂದರು ಬೌದ್ಧಿಕವಾಗಿ



ಕಲ್ಪಿಸಿಕೊಂಡದ್ದಾಗಲಿ ಇಲ್ಲವೆ ಶ್ರೀ ರಾಮಕೃಷ್ಣರು ಮಾಡಿಕೊಂಡಿದ್ದ ಅನೇಕ ವೈವಿಧ್ಯಮಯ ಸಿದ್ಧಿ–ಸಾಕ್ಷಾತ್ಕಾರಗಳ ಅನುಭವಗಳಿಂದ ಹೇಳಿದ್ದಾಗಲಿ, ಹೀಗೆ ಏನಿದ್ದರೂ ಅವೆಲ್ಲವೂ ನಿಮಗುಂಟಾದ ಭಗವಂತನ ಪ್ರೇರಣೆಯಿಂದ ಸ್ವೀಕೃತವಾಗಬೇಕು ಮತ್ತು ನಿಮ್ಮ ಅನುಭವದಲ್ಲಿ ಹೊಸ ರೂಪ ತಾಳಬೇಕು, ಇಷ್ಟರಮಟ್ಟಿಗೆ ಅವುಗಳಿಗೆ ಮಹತ್ವವಿದೆ, ಮೌಲ್ಯವಿದೆ. ನೀವು ಕಂಡುಕೊಂಡದ್ದು ಮಹತ್ವದ್ದು, ನಿಮ್ಮ ಯೋಗ ಪಥದಲ್ಲಿ ಭಗವಂತನೇ ತನ್ನ ವಿಶ್ವಾತ್ಮಕ ವ್ಯಕ್ತಿ ರೂಪದಲ್ಲಿ ಇಲ್ಲವೆ ಅವ್ಯೆಯಕ್ತಿಕ ರೂಪದಲ್ಲಿ ಇಲ್ಲವೆ ಗುರುವಿನ ವ್ಯಕ್ತಿತ್ವದ, ಮಾರ್ಗ ಅನ್ವೇಷಕರ ರೂಪದಲ್ಲಿ ಮಾರ್ಗದರ್ಶನ ಮಾಡಿರುವನೆಂಬುದನ್ನು ಅರಿತುಕೊಳ್ಳಬೇಕು.

## [25]

## ಸನ್ಯಾಸ ಮತ್ತು ವೈರಾಗ್ಯ

ಸನ್ಯಾಸ ಮತ್ತು ವೈರಾಗ್ಯಗಳಂತಹ ಶ್ರೇಷ್ಠ ವಿಚಾರಗಳನ್ನು ಋಷಿಗಳು ಇಂತಹ ಅನುದಾತ್ತ ಉದ್ದೇಶಗಳಿಗಾಗಿ ಉಪಯೋಗವಾಗಲಿ ಎಂದು ಜಗತ್ತಿನಲ್ಲಿ ಪ್ರಕಟಪಡಿಸಿರಲಿಲ್ಲ. ಇಂಥ ದೌರ್ಬಲ್ಯದಿಂದ ಎಚ್ಚರವಾಗಿರು "ಕ್ಲೈಬ್ಯಂ ಮಾ ಸ್ಮ ಗಮಃ ಪಾರ್ಥ ನೈತತ್‌ತ್ವಯ್ಯುಪ ಪದ್ಯತೆ" ಓ ಪಾರ್ಥ! ಯೋಧನ ಪೌರುಷವನ್ನು ತೊರೆದು ಅಧಃಪತನ ಹೊಂದಬೇಡ, ಇದು ನಿನ್ನಂತಹ ವೀರನಿಗೆ ಯೋಗ್ಯವಲ್ಲ. (ಗೀತಾ, 2ನೆಯ ಅಧ್ಯಾಯ, 3ನೆಯ ಶ್ಲೋಕ) ನಿಜವಾಗಿ ಶಾಶ್ವತನೂ, ಸೃಷ್ಟಿಕರ್ತನೂ, ರಕ್ಷಕನೂ ಜಗತ್ತುಗಳನ್ನೇ ನಾಶಮಾಡುವವನೂ, ಬೇರೆ ಯಾರೂ ಅಲ್ಲದ ಬ್ರಹ್ಮನೇ ಆಗಿರುವಾಗ ಇಂತಹ ಕೀಳು ದೌರ್ಬಲ್ಯ ಯೋಗ್ಯವಲ್ಲ. ಆದರೆ ಇನ್ನೊಂದೆಡೆ ನಿರಾಶೆ–ದುಃಖಗಳಿಂದುಂಟಾಗುವ ನಿಜವಾದ ವೈರಾಗ್ಯವಿದೆ. ಕೆಲವೊಂದು ಸಲ ಮನುಷ್ಯರು ತಮ್ಮ ಅಜ್ಞಾನದಲ್ಲಿ ಅನುದಾತ್ತ ಕಾರ್ಯಗಳಿಗೆ ಇದನ್ನು ಉಪಯೋಗಿಸಿ ವಿಫಲರಾಗಿದ್ದರೆ, ದೌರ್ಬಲ್ಯದಿಂದಾಗಿ ಅಲ್ಲ, ಆದರೆ ಇಂತಹ ವಿಷಯಗಳು ಅವರ ಸ್ವಭಾವದಲ್ಲಿರಲಿಲ್ಲ, ಅವರು ಆ ವಿಷಯಗಳಿಗೆ ಯೋಗ್ಯರಾಗಿರಲಿಲ್ಲ ಮತ್ತು ಅವು ಅವರ ನಿಜವಾದ ಘನತೆಗೆ ಹಾಗೂ ಭವ್ಯ ಅದೃಷ್ಟಕ್ಕೆ ತಕ್ಕದ್ದಾಗಿರದೆ ಕೀಳು ದರ್ಜೆಯವಾಗಿದ್ದವು. ದುಃಖ ಹಾಗೂ ನಿರಾಶೆ ತಮ್ಮ ನಿಜವಾದ ಆತ್ಮದತ್ತ ಹೊರಳುವಂತೆ ಅವರ ಕಣ್ತೆರೆಯಿಸಲು ಅವಶ್ಯವಾಗಿದ್ದವು. ಹಾಗಾದಾಗ ಅವರು ಏಕಾಂತ, ಧ್ಯಾನ ಹಾಗೂ ಸಮಾಧಿಗಳನ್ನು ಅರಸುತ್ತಾರೆ, ಹಾಗೆ ಮಾಡುವುದು ತಮ್ಮ ವೇದನೆ ಹಾಗೂ ತೃಪ್ತಿಪಡೆಯದ ಹಂಬಲಗಳನ್ನು

ಮಾದಕ ಪೇಯದಲ್ಲಿ ಮುಳುಗಿಸಲಿಕ್ಕಲ್ಲ, ಅವರ ಹಂಬಲ ಅಯೋಗ್ಯ ವಿಷಯಗಳಿಗಾಗಿ ಇರುವುದಿಲ್ಲ, ಭಗವದ್ಭಕ್ತಿಗಾಗಿ ಮತ್ತು ಸನಾತನನ ಬಗೆಗಿನ ಜ್ಞಾನಕ್ಕಾಗಿ ಇರುತ್ತವೆ. ಕೆಲವೊಮ್ಮೆ ಮಹಾತ್ಮರಾದವರು ಸನ್ಯಾಸ ಮಾರ್ಗದಲ್ಲಿ ಪ್ರವೇಶಿಸುತ್ತಾರೆ, ಏಕೆಂದರೆ ಸನಾತನನೊಂದಿಗೆ ಏಕಾಂತದಲ್ಲಿ ತಮ್ಮ ದೈವೀ ಶಕ್ತಿ(ಬ್ರಹ್ಮತೇಜ)ಯನ್ನು ಅಭಿವೃದ್ಧಿಪಡಿಸಿಕೊಳ್ಳುತ್ತಾರೆ ಮತ್ತು ಅದನ್ನು ದೈವೀ ಉದ್ದೇಶಗಳಿಗಾಗಿ ಬಳಸುತ್ತಾರೆ. ಒಮ್ಮೆ ಅವರು ಬ್ರಹ್ಮತೇಜಸ್ಸನ್ನು ಪಡೆದರೆಂದರೆ ಅದನ್ನು ಜಗತ್ತಿನ ಮೇಲೆ ದಿವ್ಯ ಜ್ಞಾನದ ಮೂಲಕ ಇಲ್ಲವೆ ದಿವ್ಯ ಪ್ರೇಮ ಪ್ರವಾಹದ ಮೂಲಕ ಹರಿಸುವರು. ಇಂತಹ ಮಹಾತ್ಮರಲ್ಲಿ ಶಂಕರಾಚಾರ್ಯರು, ಶ್ರೀ ರಾಮಕೃಷ್ಣರು ಸೇರಿದ್ದಾರೆ. ಕೆಲವೊಂದು ಸಂದರ್ಭಗಳಲ್ಲಿ ಜಗತ್ತಿನ ದುಃಖ ಹಾಗೂ ಯಾತನೆಗಳು ಇಂತಹ ಮಹಾತ್ಮರನ್ನು ತಮ್ಮ ಆರಾಮದ ಹಾಗೂ ಸುಖದ ಜೀವನದ ಚೌಕಟ್ಟಿನಿಂದ ಹೊರಗೆ ಬರುವಂತೆ ಮಾಡುತ್ತವೆ. ಬುದ್ಧ ಮತ್ತು ಕ್ರಿಸ್ತರು ಈ ರೀತಿ ಹೊರಬಂದು ಅಜ್ಞಾನಿಗಳಿಗೆ ಪ್ರಕಾಶ, ನೋವಿನಲ್ಲಿದ್ದವರಿಗೆ ಸಹಾಯವನ್ನು ತಮ್ಮದೇ ಸತ್ತೆಯ ಆಳಗಳಿಂದ ಅರಸಿದರು. ನಿಜವಾದ ಸನ್ಯಾಸಿಗಳು ಕಾರ್ಯಕರ್ತರಲ್ಲಿ ಅತ್ಯಂತ ಶ್ರೇಷ್ಠರಾಗಿರುತ್ತಾರೆ, ಏಕೆಂದರೆ ಅವರಲ್ಲಿ ಮಿಶ್ರಿತವಾಗದ ಹಾಗೂ ಕಡಿಮೆಯಾಗದ ಬಲವಿದ್ದು ಅವರು ಭಗವಂತನಲ್ಲಿ, ಭಗವಂತನಿಗಾಗಿ ಕಾರ್ಯ ಮಾಡುವುದಕ್ಕೆ ಅತ್ಯಂತ ಬಲಶಾಲಿಗಳಾಗಿರುತ್ತಾರೆ.

ವೈರಾಗ್ಯದ ನಿಖರವಾದ ಲಕ್ಷಣ ಇಲ್ಲವೆ ಅದರ ನೇರವಾದ ಹಾಗೂ ಉತ್ಸಾಹ ತುಂಬುವ ಕಾರಣ ಏನೇ ಇರಲಿ, ಸನಾತನನನ್ನು ಸಾಕ್ಷಾತ್ಕರಿಸಿಕೊಳ್ಳುವ ಹಂಬಲ ಅದರಲ್ಲಿ ಕೂಡಿಕೊಂಡರೆ ಅದನ್ನು ನಿಜವಾದ ವೈರಾಗ್ಯ ಮತ್ತು ಮುಕ್ತಿ ಪಡೆಯುವುದಕ್ಕೆ ಅವಶ್ಯವಾದ ಪ್ರೇರಣೆ ಎಂದು ತಿಳಿಯಬೇಕು. ಶಾಶ್ವತವಾದುದನ್ನು ತಲುಪಬೇಕಾದರೆ ನೀವು ಈ ಅವಸ್ಥೆಯಲ್ಲಿ ಹಾಯ್ದು ಹೋಗಬೇಕು. ಐಹಿಕ ಜೀವನದ ಬಗ್ಗೆ ನೀವು ಬೇಸರಪಟ್ಟುಕೊಳ್ಳದಿದ್ದರೆ ನಿಮ್ಮ ಮನಸ್ಸು ಶಾಶ್ವತದತ್ತ ಹೊರಳುವುದು ಸಾಧ್ಯವೇ ಇಲ್ಲ. ಐಹಿಕ ಜೀವನದ ಆಕರ್ಷಣೆ ನಿಮ್ಮ ದೃಷ್ಟಿ ಸದಾ ಕೆಳಗಡೆ ಮತ್ತು ಬಾಹ್ಯ ವಿಷಯಗಳತ್ತ ತಿರುಗುವಂತೆ ಮಾಡುತ್ತದಲ್ಲದೆ ಮೇಲ್ಗಡೆ ಮತ್ತು ಅಂತರಂಗದತ್ತ ಹೊರಳುವಂತೆ ಮಾಡುವುದಿಲ್ಲ. ಆದ್ದರಿಂದ ನಿಮ್ಮ ಜೀವನದಲ್ಲಿ ವೈರಾಗ್ಯದ ಮೊದಲ ಒಳನುಗ್ಗುವಿಕೆಯನ್ನು ಸ್ವಾಗತಿಸಿರಿ, ಆದರೆ ಇದು ಈ ಮಾರ್ಗದಲ್ಲಿ ಮೊದಲ ಹಂತವೆಂದು ಅರಿತುಕೊಳ್ಳಿರಿ, ಅದೇ ಗುರಿಯೆಂದು ತಿಳಿದುಕೊಳ್ಳದಿರಿ. ಸ್ವಾಮಿ ಭಾಸ್ಕರಾನಂದರು ಈ ಜಗದ ಜೀವನದ ಬಗೆಗೆ ತಳೆದ



ಮಿತಿಮೀರಿದ ತೀಕ್ಷ್ಣ ತಿರಸ್ಕಾರದಿಂದಾಗಿ ಸನ್ಯಾಸದತ್ತ ಹೊರಳಿದರು, ಆದರೆ ಅವರು ಮುಕ್ತಿಯನ್ನು ಸಂಪಾದಿಸಿದ ಮೇಲೆ, ಅವರ ಮನಸ್ಥಿತಿ ಅದೆಷ್ಟು ಬದಲಾವಣೆ ಹೊಂದಿತೆಂದರೆ, ಅವರ ಹೆಂಡತಿ ಜೀವಂತವಿದ್ದಿದ್ದರೆ ಅವರು ಆಕೆಯೊಂದಿಗೆ ಸಂಸಾರಿಗನಂತೆ ಈ ಜಗತ್ತಿನಲ್ಲಿ ಜೀವಿಸಬಹುದಿತ್ತು. ಈ ವಿಚಾರ ಪೌರೋಹಿತ್ಯ ಪಾಂಡಿತ್ಯದ ಸಂಪ್ರದಾಯಬದ್ಧ ಧಾರ್ಮಿಕ ಪ್ರವೃತ್ತಿಗೆ ಆಘಾತವನ್ನುಂಟು ಮಾಡುವಂತಹದು, ಆದರೆ ಜೀವನ್ಮುಕ್ತನಿಗೆ ಸ್ವಾಭಾವಿಕವೆನಿಸುವಂತಹದು. ಶ್ರೀ ರಾಮಕೃಷ್ಣರು ಭಗವಂತನೊಡನೆ ಏಕತೆ ಪಡೆದ ನಂತರ ಸಾಂಸಾರಿಗನಂತೆ ಜಗತ್ತಿನೆಡೆಗೆ ಹೊರಳಲು ಅವರಿಗೆ ಸಾಧ್ಯವಾಗಲಿಲ್ಲ, ಜಗತ್ತಿನ ವಸ್ತು–ಒಡವೆಗಳ ಸ್ಪರ್ಶವನ್ನೂ ಅವರು ಸಹಿಸುತ್ತಿರಲಿಲ್ಲ–ಏಕೆಂದರೆ ಅವರು ಉತ್ಕಟ ಭಕ್ತಿಯ ಅವತಾರವೇ ಅಗಿದ್ದರು–ಆದರೆ ಜಗತ್ತಿನಲ್ಲಿ ಪ್ರಕಟನಾಗಿದ್ದ ಭಗವಂತನಲ್ಲಿ, ಅದರಲ್ಲಿಯೂ ವಿಶೇಷವಾಗಿ ಮನುಷ್ಯರಲ್ಲಿ ತಾವು ಸಮಾಧಿ ಸ್ಥಿತಿಯಲ್ಲಿ ದೊರಕಿಸುತ್ತಿದ್ದ ಆನಂದದ ಸ್ವರೂಪವನ್ನೇ ಅವರು ಕಂಡುಕೊಳ್ಳು–ತ್ತಿದ್ದರು. ಕರ್ಮಯೋಗಿಯು ವೈರಾಗ್ಯದ ಅವಸ್ಥೆಯಲ್ಲಿ ಹಾಯ್ದುಕೊಂಡೇ ಮುಂದುವರಿಯಬೇಕು, ಆದರೆ ಅವನು ಅದರಲ್ಲಿಯೇ ನೆಲಸಕೂಡದು. ಅಥವಾ ಇನ್ನೂ ಸರಿಯಾದ ರೀತಿಯಲ್ಲಿ ಹೇಳಬೇಕೆಂದರೆ ಅವನು ವೈರಾಗ್ಯದಲ್ಲಿಯ ಆಧ್ಯಾತ್ಮಿಕ ಅಂಶವನ್ನು ಉಳಿಸಿಕೊಂಡು ಭೌತಿಕಾಂಶವನ್ನು ತ್ಯಜಿಸಬೇಕು. ವೈರಾಗ್ಯದ ಆಧ್ಯಾತ್ಮಿಕ ಅಂಶವೆಂದರೆ ಪ್ರಾಪಂಚಿಕ ವಸ್ತುಗಳ ಹಾಗೂ ಕರ್ಮಗಳ ಬಗ್ಗೆ ಸ್ವಾರ್ಥದಿಂದ ಕೂಡಿದ ಆಸೆಯಿಂದ ಮುಖ ಹೊರಳಿಸಿ ದೂರ ಸರಿಯುವುದು ಹಾಗೂ ಅದರಲ್ಲಿಯ ಭೌತಿಕಾಂಶವೆಂದರೆ ಭೌತಿಕ ವಸ್ತುಗಳು ಹಾಗೂ ಕರ್ಮಗಳಿಂದ ಭಯಪಡುವುದು ಮತ್ತು ಮುದುಡಿಕೊಳ್ಳುವುದು. ಆಧ್ಯಾತ್ಮಿಕ ಅಂಶವನ್ನು ಉಳಿಸಿಕೊಳ್ಳುವುದು ಎಲ್ಲ ಯೋಗಿಗಳಿಗೆ ಅವಶ್ಯವಾದದ್ದು, ಆದರೆ ಭೌತಿಕಾಂಶವನ್ನು ಉಳಿಸಿಕೊಳ್ಳುವುದು, ಬಹಳಷ್ಟು ಸಲ, ಭೌತಿಕ ಶುದ್ಧಿಯು, ಶ್ರೇಷ್ಠ ಸಾಧುತ್ವದ ಲಕ್ಷಣವೆಂದು ಭಾವಿಸಬಹುದಾದರೂ ಅದು ಮುಕ್ತಿಗೆ ಅತಿ ಮುಖ್ಯವಾದುದಲ್ಲ.

## [26]
## ಆಧ್ಯಾತ್ಮಿಕ ಏಕತೆ

ವ್ಯಕ್ತಿ ತನ್ನ ಸಾಧನೆಯಲ್ಲಿ ಪ್ರಗತಿ ಸಾಧಿಸುತ್ತಿದ್ದ ಹಾಗೆ ಅವನು ಆಧ್ಯಾತ್ಮಿಕ ಸ್ವಾತಂತ್ರ್ಯದತ್ತ ಸಾಗುತ್ತಾನೆ, ಆದರೆ ಈ ಸ್ವಾತಂತ್ರ್ಯ ವಿಶ್ವಂಭರ ಅಸ್ತಿತ್ವದಿಂದ ಪೂರ್ತಿಯಾಗಿ ಪ್ರತ್ಯೇಕವಾಗಿರುವುದಿಲ್ಲ, ಅದರೊಡನೆ ಐಕ್ಯಮತ ಹೊಂದಿರುತ್ತದೆ,

ಏಕೆಂದರೆ ಅದೂ ಕೂಡ ಮನುಷ್ಯ ಆತ್ಮವನ್ನು ಹೊಂದಿರುವಂತೆ ಆತ್ಮವಂತವಾಗಿರುತ್ತದೆ. ಅವನು ಆಧ್ಯಾತ್ಮಿಕ ಸ್ವಾತಂತ್ರ್ಯದೆಡೆಗೆ ಸಾಗುತ್ತಿರುವಂತೆ ಆಧ್ಯಾತ್ಮಿಕ ಏಕತೆಯತ್ತ ಕೂಡ ಸಾಗುತ್ತಾನೆ. ಆಧ್ಯಾತ್ಮಿಕ ಸಿದ್ಧಿಯನ್ನು ಪಡೆದ, ಜೀವನ್ಮುಕ್ತ ಮನುಷ್ಯ ಎಲ್ಲ ಸತ್ತೆಗಳ ಒಳ್ಳೆಯದಕ್ಕಾಗಿ ಶ್ರಮಿಸುತ್ತಾನೆ ಎಂದು ಭಗವದ್ಗೀತೆ ಹೇಳುತ್ತದೆ. ನಿರ್ವಾಣದ ಮಾರ್ಗವನ್ನು ಶೋಧಿಸಿದ ಬುದ್ಧ ಆ ಮಾರ್ಗವನ್ನು ತಮ್ಮ ಸತ್ತೆಯ ಬಗ್ಗೆ ಅಥವಾ ಸತ್ತೆ ಇಲ್ಲದುದರ ಬಗ್ಗೆ ನಿಜವಾದ ಅರಿವು ಹೊಂದಿರದೆ ಕೇವಲ ರಚನೆಯ ಭ್ರಮಾತ್ಮಕ ಅರಿವುಳ್ಳವರಿಗೆ ತೆರೆದು ತೋರಿಸಿಕೊಡಲು ಅವರತ್ತ ಹೊರಳಬೇಕು. ಪರಮಾತ್ಮನಿಂದ ಪ್ರೇರಿತರಾಗಿದ್ದ ಸ್ವಾಮಿ ವಿವೇಕಾನಂದರು ಮಾನವತೆಯಲ್ಲಿ ಪ್ರಚ್ಛನ್ನನಾಗಿದ್ದ ದೇವರ ಕರೆಗೆ ಓಗೊಟ್ಟರು. ವಿಶೇಷವಾಗಿ ದೀನದಲಿತರ ಹಾಗೂ ಯಾತನೆಪಡುವವರ ಆತ್ಮಗಳ ಕರೆ ಅದಾಗಿತ್ತು. ಅಂಧಕಾರಮಯ ವಿಶ್ವದ ದೇಹದೊಳಗೆ ಹುದುಗಿದ್ದ ಆತ್ಮಕ್ಕೆ ಆತ್ಮದ ಕರೆ ಅದಾಗಿತ್ತು.

## [27]

## ನಿಜವಾದ ಮುಕ್ತಿ

ಅನೇಕ ಸಲ ವೈಯಕ್ತಿಕ ಮುಕ್ತಿಯ ಆಸೆಯನ್ನು ಬಿಟ್ಟುಕೊಟ್ಟು ನಮ್ಮ ಸ್ವಭಾವದ ಉನ್ನತ ತಿರುವಿಗೆ ಸಂಬಂಧಿಸಿದ ಬೇರೊಂದು ಆಕರ್ಷಣೆಯ ಸೆಳೆತಕ್ಕೆ ನಾವು ಒಳಗಾಗುವುದನ್ನು ಕಾಣುತ್ತೇವೆ. ಇದು ಜೀವನ್ಮುಕ್ತನು ಅನುಸರಿಸಲೇ ಬೇಕಾದ ಬಹು ಮಹತ್ವದ ಲಕ್ಷಣವಾಗಿದೆ. ಅಮಿತಾಭ ಬುದ್ಧನ ಜೀವನ ಕತೆಯಲ್ಲಿ ಇದರ ಸೂಚನೆ ಕಂಡುಬರುತ್ತದೆ, ಅವನ ಆತ್ಮವು ನಿರ್ವಾಣದ ಹೊಸ್ತಿಲಲ್ಲಿರುವಾಗ ಅದರಿಂದ ದೂರ ಸರಿದು ದುಃಖ ಹಾಗೂ ಅಜ್ಞಾನದಲ್ಲಿ ಜೀವಿಯೊಂದು ಉಳಿದುಕೊಂಡಿರುವವರೆಗೆ ಆ ನಿರ್ವಾಣದ ಹೊಸ್ತಿಲನ್ನು ದಾಟುವುದಿಲ್ಲವೆಂದು ಪ್ರತಿಜ್ಞೆ ಮಾಡುತ್ತಾನೆ. ಭಾಗವತ ಪುರಾಣದ ಮಹೋನ್ನತ ಶ್ಲೋಕವೊಂದರಲ್ಲಿ ಅಡಕವಾಗಿರುವ ಅರ್ಥವೂ ಇದೇ : "ಅಷ್ಟಸಿದ್ಧಿಗಳ ಸರ್ವೋಚ್ಚ ಸ್ಥಿತಿಯನ್ನು ನಾನು ಬಯಸುವುದಿಲ್ಲ, ಪುನರ್ಜನ್ಮ ಬೇಡವೆಂದು ಹೇಳುವುದಿಲ್ಲ, ಎಲ್ಲ ದುಃಖೀ ಜೀವಿಗಳ ದುಃಖವು ನನ್ನದಾಗಲಿ, ಮತ್ತು ನಾನು ಅವುಗಳೊಡನೆ ಒಂದಾಗ–ಬಯಸುತ್ತೇನೆ, ಅದರಿಂದಾಗಿ ಅವು ದುಃಖದಿಂದ ಮುಕ್ತವಾಗುವಂತಾಗಲಿ." ಇದೇ ಸ್ವಾಮಿ ವಿವೇಕಾನಂದರ ಪತ್ರವೊಂದರಲ್ಲಿ ಎದ್ದುಕಾಣುವ ಪರಿಚ್ಛೇದಕ್ಕೆ



ಸ್ಫೂರ್ತಿಯನ್ನಿತ್ತುದು. ಈ ಶ್ರೇಷ್ಠ ವೇದಾಂತಿ ಬರೆದದ್ದು ಹೀಗಿತ್ತು : "ನನ್ನ ಮುಕ್ತಿಯ ಬಗೆಗಿನ ಎಲ್ಲ ಆಸೆಯನ್ನು ಬಿಟ್ಟುಕೊಟ್ಟಿದ್ದೇನೆ, ನಾನು ಮತ್ತೆ, ಮತ್ತೆ ಜನ್ಮ ತಳೆದು ಸಹಸ್ರಾರು ಬಗೆಯ ದುಃಖಗಳನ್ನು ಅನುಭವಿಸುವಂತಾಗಲಿ, ಅದರಿಂದಾಗಿ ಅಸ್ತಿತ್ವದಲ್ಲಿರುವ ಏಕೈಕ ಭಗವಂತನನ್ನು ಪೂಜಿಸುವಂತಾಗಲಿ, ಆ ದೇವನಲ್ಲಿ ನನಗೆ ವಿಶ್ವಾಸವಿದೆ, ಅವನು ಎಲ್ಲ ಆತ್ಮಗಳ ಮೊತ್ತವಾಗಿದ್ದಾನೆ. ಮತ್ತು ಆ ನನ್ನ ದೇವರು ದುಷ್ಟ, ದುಃಖಿ, ಎಲ್ಲ ಜನಾಂಗಗಳಲ್ಲಿಯ ದರಿದ್ರನು, ಎಲ್ಲ ಜೀವ ಜಂತುಗಳಲ್ಲಿರುವ ಇಂತಹ ದೇವನೇ ನನ್ನ ಆರಾಧನೆಗೆ ವಿಶಿಷ್ಟನಾದವನು. ಯಾರು ಉನ್ನತನಾದವನು ಮತ್ತು ಕೆಳಮಟ್ಟದವನು, ಸಂತ ಮತ್ತು ಪಾಪಿ, ದೇವ ಮತ್ತು ಕ್ರಿಮಿ, ಗೋಚರಿಸುವವ, ಅರಿವಿಗೆ ಬರುವವ, ನೈಜವಾದವ ಮತ್ತು ಸರ್ವತ್ರ ವಾಸಿಸುವವ ಅವನನ್ನು ಪೂಜಿಸಿರಿ, ಉಳಿದೆಲ್ಲ ಮೂರ್ತಿಗಳನ್ನು ಭಗ್ನಗೊಳಿಸಿರಿ. ಯಾರಲ್ಲಿ ಭೂತ ಕಾಲದ ಜೀವನವಿಲ್ಲವೋ ಇಲ್ಲವೆ ಭವಿಷ್ಯದಲ್ಲಿ ಜನ್ಮವಿಲ್ಲವೋ ಯಾರಿಗೆ ಮರಣವಿಲ್ಲವೋ, ಬರುವುದಿರುವುದಿಲ್ಲವೋ, ಹೊಗುವುದಿರುವುದಿಲ್ಲವೋ, ಯಾರಲ್ಲಿ ನಾವು ಸದಾ ಇದ್ದೇವೆಯೋ ಮತ್ತು ಒಂದಾಗುವೆವೋ ಅಂತಹನನ್ನು ಪೂಜಿಸಿರಿ, ಉಳಿದೆಲ್ಲ ಮೂರ್ತಿಗಳನ್ನು ಭಗ್ನಗೊಳಿಸಿರಿ."

ಕೊನೆಯ ಎರಡು ವಾಕ್ಯಗಳಲ್ಲಿ ಮುಕ್ತಸ್ಥಿತಿಯ ಸಾರಸರ್ವಸ್ವವಿದೆ. ನಿಜವಾದ ಮುಕ್ತಿ ಅಥವಾ ಪುನರ್ಜನ್ಮಗಳ ಸರಣಿಯಿಂದ ನಿಜವಾದ ಬಿಡುಗಡೆ ಎಂದರೆ ಪೃಥ್ವಿಯ ಮೇಲಿನ ಜೀವನವನ್ನು ತಿರಸ್ಕರಿಸುವುದಾಗಲಿ ಇಲ್ಲವೆ ಆತ್ಮ–ವಿನಾಶದ ಮೂಲಕ ಪಲಾಯನ ಮಾಡುವುದಾಗಲಿ ಅಲ್ಲ. ಅದೇ ರೀತಿ ನಿಜವಾದ ಸನ್ಯಾಸವೆಂದರೆ ಭೌತಿಕವಾಗಿ ಕುಟುಂಬ ಹಾಗೂ ಸಮಾಜಗಳನ್ನು ತೊರೆದು ಹೋಗುವುದಲ್ಲ, ಅದು ಭಗವಂತನೊಡನೆ ಆಂತರಿಕವಾಗಿ ಗುರುತಿಸಿಕೊಳ್ಳುವುದು, ಅವನಲ್ಲಿ ಭೂತಕಾಲದ ಜೀವನದ ಇಲ್ಲವೆ ಭವಿಷ್ಯತ್ಕಾಲದ ಜನ್ಮದ ಮಿತಿಯಿಲ್ಲ, ಆದರೆ ಜನ್ಮ ತಾಳದ ಆತ್ಮದ ಶಾಶ್ವತ ಅಸ್ತಿತ್ವವಿದೆ. ಆಂತರಿಕವಾಗಿ ಸ್ವತಂತ್ರನಾದವನು ಕರ್ಮಗಳನ್ನು ಮಾಡುತ್ತಿದ್ದರೂ ಅವನು ನಿಷ್ಕರ್ಮಿ ಎಂದು ಭಗವದ್ಗೀತೆ ಹೇಳುತ್ತದೆ, ಏಕೆಂದರೆ ಅವನಲ್ಲಿ ಪ್ರಕೃತಿ, ತನ್ನ ಪ್ರಭುವಿನ ನಿಯಂತ್ರಣದಲ್ಲಿ, ಕಾರ್ಯ ಮಾಡುತ್ತದೆ. ಹಾಗೆಯೇ ಅವನು ನೂರಾರುಸಲ ದೇಹ ಧರಿಸಿ ಬಂದರೂ ಅವನು ಪುನರ್ಜನ್ಮಗಳ ಸರಣಿಯಿಂದ ಇಲ್ಲವೆ ಅಸ್ತಿತ್ವದ ಯಾಂತ್ರಿಕ ಚಕ್ರದಿಂದ ಸ್ವತಂತ್ರನಾಗಿರುತ್ತಾನೆ, ಏಕೆಂದರೆ ಅವನು ಜನ್ಮರಹಿತನಾದವನಲ್ಲಿ, ಮರಣರಹಿತ ಆತ್ಮನಲ್ಲಿ ಜೀವಿಸಿರುತ್ತಾನೆ, ದೇಹದ ಜೀವನದಲ್ಲಿ ಜೀವಿಸುತ್ತಿರುವುದಿಲ್ಲ. ಆದ್ದರಿಂದ

ಪುನರ್ಜನ್ಮದಿಂದ ಪಾರಾಗಬೇಕೆಂಬ ವಿಚಾರಕ್ಕೆ ಅಂಟಿಕೊಂಡಿರುವುದನ್ನು ಸಮಗ್ರ ಯೋಗದ ಸಾಧಕನು ಮುರಿದು ಹಾಕಿ ಎಸೆದುಬಿಡಬೇಕಾದ ಮೂರ್ತಕಲ್ಪನೆ–ಗಳಲ್ಲೊಂದು. ಏಕೆಂದರೆ ಅವನ ಯೋಗವು ವಿಶ್ವಾತೀತ ಪರಾತ್ಪರ ವಸ್ತುವನ್ನು ಅವನ ಆತ್ಮವು ಸಾಕ್ಷಾತ್ಕರಿಸಿಕೊಳ್ಳುವುದಷ್ಟಕ್ಕೆ ಸೀಮಿತವಾಗಿರುವುದಿಲ್ಲ, ವಿಶ್ವಾತ್ಮಕವಾದುದನ್ನು ಅಂದರೆ ವಿಶ್ವದ ಎಲ್ಲ ಆತ್ಮಗಳ ಸಮಷ್ಟಿ ರೂಪವನ್ನು ಅದು ಅಪ್ಪಿಕೊಳ್ಳುತ್ತದೆ. ಹಾಗಾಗಿ ವೈಯಕ್ತಿಕ ಮುಕ್ತಸ್ಥಿತಿ ಎಂಬುದು ವೈಯಕ್ತಿಕ ಮೋಕ್ಷವನ್ನು ಪಡೆದು ದೂರ ಎಲ್ಲಿಗೋ ಪಲಾಯನ ಮಾಡುವುದಕ್ಕೆ ಸೀಮಿತವಾದುದಲ್ಲ. ವಿಶ್ವದ ಗಡಿಗಳಾಚೆಯ ಪರಾತ್ಪರ ವಸ್ತುವಿನ ಅನುಭೂತಿ–ಯಲ್ಲಿದ್ದರೂ ಅವನು ಆ ಭಗವಂತನಲ್ಲಿಯ ಎಲ್ಲದರಲ್ಲೂ ಒಂದಾಗಿರುತ್ತಾನೆ. ಈ ವಿಶ್ವದಲ್ಲಿ ದೇವ ಕಾರ್ಯವೊಂದು ಅವನಿಗಾಗಿ ಕಾದಿರುತ್ತದೆ.

(ಸಾಧಕನೊಬ್ಬನ ಪ್ರಶ್ನೆಗೆ ಉತ್ತರ ನೀಡುತ್ತ ಶ್ರೀ ಅರವಿಂದರು ಮೇಲಿನ ಅವತರಣಿಕೆ ಕುರಿತು ವಿವರಣೆ ನೀಡಿದ್ದರಲ್ಲಿಯ ಅಂಶಗಳು)

ಸ್ವಾಮಿ ವಿವೇಕಾನಂದರ ಪತ್ರದಲ್ಲಿಯ ವಿಷಯ ಕುರಿತು ನಾನು ಒತ್ತುಕೊಟ್ಟು ಹೇಳಿದ್ದು ಮಾನವ ಹಿತಸಾಧನೆಯ ಬಗ್ಗೆ ಅಲ್ಲ. ನಾನು ಅಲ್ಲಿ ಕೊನೆಯ ಎರಡು ವಾಕ್ಯಗಳ ಮೇಲೆ ಒತ್ತುಕೊಟ್ಟು ಹೇಳಿರುವುದನ್ನು ಗಮನಿಸು. ಅಲ್ಲಿ ದರಿದ್ರ, ಪಾಪಿ, ಅಪರಾಧಿ ಭಗವಂತನನ್ನು ಕುರಿತು ಹೇಳಿಲ್ಲ. ಜಗತ್ತಿನಲ್ಲಿ ಎಲ್ಲವೂ ಭಗವಂತ, ಸರ್ವ ಭೂತಗಳೂ ಭಗವಂತ (ಗೀತೆಯಲ್ಲಿ ಹೇಳಿದಂತೆ) ಎಂಬುದನ್ನು ಹೇಳಲಾಗಿದೆ. ಅದು ಕೇವಲ ಮಾನವತೆಯನ್ನು ಕುರಿತು ಹೇಳಿದ್ದಲ್ಲ, ದರಿದ್ರರು ಮತ್ತು ದುಷ್ಟರನ್ನು ಕುರಿತು ಹೇಳಿದ್ದು ಇನ್ನೂ ಕಡಿಮೆ. ನಿಶ್ಚಿತವಾಗಿ ಶ್ರೀಮಂತರು, ಒಳ್ಳೆಯವರು ಕೂಡ ಸರ್ವರೊಳಗೆ ಸಮಾವೇಶವಾಗಿದ್ದಾರೆ. ಮತ್ತು ಒಳ್ಳೆಯವರೂ ಅಲ್ಲದ, ಶ್ರೀಮಂತರೂ ಅಲ್ಲದ, ಬಡವರೂ ಅಲ್ಲದ, ಕೆಟ್ಟವರೂ ಅಲ್ಲದ ಎಲ್ಲರೂ ಖಚಿತವಾಗಿ ಸರ್ವರಲ್ಲಿ ಸಮಾವೇಶವಾಗಿರುತ್ತಾರೆ. ಮತ್ತು ನನ್ನ ವಿವರಣೆಯಲ್ಲಿ ಜನೋಪಕಾರೀ ಸೇವಾಭಾವದ ಇಲ್ಲವೆ ದರಿದ್ರರ ಸೇವೆಯ ಪ್ರಶ್ನೆಯೂ ಇಲ್ಲ. ಮೊದಲು ನನ್ನಲ್ಲಿ ಮಾನವತೆ ಕುರಿತಾದ ದೃಷ್ಟಿಯಿತ್ತು, ಮಾನವ ಹಿತಸಾಧನೆ ಕುರಿತಾಗಿ ಅಲ್ಲ. ಅದು ಸ್ವಲ್ಪ ಮಟ್ಟಿಗೆ ನಾನು 'ಆರ್ಯ' ಪತ್ರಿಕೆಯಲ್ಲಿ ಬರೆದುದರಲ್ಲಿ ವ್ಯಕ್ತವಾಗಿರಬಹುದು. ಆದರೆ "ನಮ್ಮ ಯೋಗ ಮಾನವತೆಗಾಗಿ" ಎಂಬುದನ್ನು "ನಮ್ಮ ಯೋಗ ಭಗವಂತನಿಗಾಗಿ" ಎಂದು ಅದಾಗಲೆ ನನ್ನ ದೃಷ್ಟಿಕೋನವನ್ನು ಬದಲಾಯಿಸಿಕೊಂಡಿದ್ದೆ. 'ಭಗವಂತ' ಎಂಬ ಪದವು ವಿಶ್ವಾತೀತವನ್ನಲ್ಲದೆ ವಿಶ್ವಾತ್ಮಕ



ಹಾಗೂ ವೈಯಕ್ತಿಕ ಎಂಬುದೆಲ್ಲವನ್ನೂ ಒಳಗೊಳ್ಳುತ್ತದೆ, ಅದು 'ನಿರ್ವಾಣ', 'ಅತೀತ' ಎಂಬುದನ್ನಲ್ಲದೆ ಜೀವನವನ್ನೂ, ಸರ್ವಸ್ವವನ್ನೂ ಒಳಗೊಂಡಿರುತ್ತದೆ. ಇದನ್ನೇ ನಾನು ಎಲ್ಲೆಡೆ ಒತ್ತುಕೊಟ್ಟು ವಿವರಿಸಿದ್ದೇನೆ.

(ಮತ್ತೊಂದು ಪತ್ರದಲ್ಲಿ ಶ್ರೀ ಅರವಿಂದರು ಹೇಳಿದ್ದು)

ಅವನ 'ಸೇವಾ' ಕುರಿತಾದ ಆದರ್ಶ ಅವನ ಸ್ವಭಾವಕ್ಕೆ ಅವಶ್ಯವಾದದ್ದಾಗಿತ್ತು ಮತ್ತು ಅದು ಅವನಿಗೆ ಸಹಾಯಕವಾಗಿರಲೇಬೇಕು – ಅದರಿಂದಾಗಿ ಸೇವಾಭಾವವು ವಿಶ್ವಾತ್ಮಕವಾದ ಆಧ್ಯಾತ್ಮಿಕ ಅಗತ್ಯವೆಂದಾಗಲಿ, ಆದರ್ಶವೆಂದಾಗಲಿ ಸ್ವೀಕರಿಸಬೇಕೆಂದು ಇದರರ್ಥವಲ್ಲ.

## [28]

## ಅವತಾರದ ಪರಿಕಲ್ಪನೆ

ಉತ್ಕ್ರಾಂತಿ ಅಥವಾ ವಿಕಾಸದೊಂದಿಗೆ ಅವತಾರದ ಕಲ್ಪನೆ ಸಂಬಂಧಿಸಿದ್ದಲ್ಲವಾದರೆ ಅದಕ್ಕೆ ಯಾವ ಅರ್ಥವೂ ಇಲ್ಲ. ಹತ್ತು ಅವತಾರಗಳು ಕ್ರಮಬದ್ಧವಾಗಿ ಬಂದುದು ಉತ್ಕ್ರಾಂತಿ ತತ್ವದ ಒಂದು ರೂಪಕ ಕತೆಯೇ ಆಗಿದೆ. ಮೊದಲನೆಯದು ಮತ್ಸ್ಯಾವತಾರ, ಅನಂತರ ನೆಲ–ಜಲ ಸಂಬಂಧಿ ಕೂರ್ಮಾವತಾರ, ಅನಂತರ ಭೂಮಿಯ ಮೇಲೆ ಚಲಿಸುವ ಜೀವಿಯ ರೂಪದಲ್ಲಿ ವರಾಹಾವತಾರ, ತರುವಾಯ ಮಾನವ ಮತ್ತು ಸಿಂಹ ಕೂಡಿದ್ದ ನರಸಿಂಹಾವತಾರ – ಮನುಷ್ಯ ಪ್ರಾಣಿಗಳ ನಡುವೆ ಸೇತುವೆ ಕಟ್ಟಿದ್ದು. ಅನಂತರ ಗಿಡ್ಡ ಮಾನವ ಎಂದರೆ ವಾಮನಾವತಾರ – ಚಿಕ್ಕದು ಹಾಗೂ ಇನ್ನೂ ವಿಕಾಸ ಹೊಂದದಿರುವ ದೇಹಾಕಾರವುಳ್ಳದ್ದು : ಹೀಗಿದ್ದರೂ ತನ್ನೊಳಗೆ ದೇವ ಭಾವವನ್ನು ಬೆಳೆಸಿ–ಕೊಂಡಂತಹದು ಮತ್ತು ಅಸ್ತಿತ್ವದ ಒಡೆತನ ಹೊಂದಿದಂತಹದು. ಆ ತರುವಾಯ ರಾಜಸಿಕ, ಸಾತ್ವಿಕ, ನಿರ್ಗುಣ ಅವತಾರಗಳು. ಇವು ಮಾನವ ವಿಕಾಸವನ್ನು ಪ್ರಾಣಿಕ–ರಾಜಸಿಕತೆಯಿಂದ ಸಾತ್ವಿಕ–ಮಾನಸಿಕ ವಿಕಾಸದತ್ತ ಮಾತ್ರವಲ್ಲದೆ ಅಧಿಮಾನಸಾವಸ್ಥೆಯಲ್ಲಿರುವ ಅತಿಮಾನವನತ್ತ ಕರೆದೊಯ್ಯುವಂತಹವು. ಕೃಷ್ಣ, ಬುದ್ಧ, ಕಲ್ಕಿ ಅವತಾರಗಳು ಕೊನೆಯ ಮೂರು ಹಂತಗಳನ್ನು ತೋರಿಸುತ್ತವೆ. ಇವು ಆಧ್ಯಾತ್ಮಿಕ ವಿಕಾಸದ ಹಂತಗಳು. ಕೃಷ್ಣಾವತಾರವು ಅಧಿಮಾನಸದ ಸಾಧ್ಯತೆಯನ್ನು ತೆರೆದು ತೋರಿಸುತ್ತದೆ. ಬೌದ್ಧಾವತಾರವು ಆಚೆಯ ಪರಮೋಚ್ಚ ಮುಕ್ತಿಯತ್ತ ಧಾವಿಸುತ್ತದೆ. ಆದರೆ ಈ ಮುಕ್ತಿಯು ಇನ್ನೂ ನಕಾರಾತ್ಮಕವಾದುದು.

ವಿಕಾಸವನ್ನು ಪೂರ್ತಿಗೊಳಿಸಲು ಪೃಥ್ವಿಗೆ ಮರಳಿ ಬಾರದೆ ಇರುವುದು. ಕಲ್ಕಿ ಅವತಾರವು ಈ ದೋಷವನ್ನು ಸರಿಪಡಿಸಿ ದಿವ್ಯತೆಯ ಸಾಮ್ರಾಜ್ಯವನ್ನು ಪೃಥ್ವಿಯ ಮೇಲೆ ಬರಮಾಡಿಕೊಳ್ಳುವಂತಹದು. ಹೀಗೆ ಉತ್ಕ್ರಾಂತಿಯ ಪ್ರಗತಿಯ ಕ್ರಮವು ಎದ್ದು ಕಾಣುವಂತಹದೂ, ಸುಸ್ಪಷ್ಟವೂ ಆಗಿದೆ.

ಎರಡು ಅವತಾರಗಳ ನಡುವಿನ ಜನ್ಮಗಳನ್ನು ಕುರಿತು ಹೇಳುವುದಾದರೆ ಶ್ರೀ ಕೃಷ್ಣನು ತನ್ನ ಅನೇಕ ಪೂರ್ವಜನ್ಮಗಳನ್ನು ಕುರಿತು ಹೇಳಿದ್ದಾನೆಂಬುದನ್ನು ನೆನಪಿಡಬೇಕು. ಅವುಗಳಲ್ಲಿ ಕೆಲವು ಅತ್ಯುಚ್ಚವಾದವುಗಳು ಮತ್ತು ಎರಡನೆಯದಾಗಿ ತಾನು ಭಗವಂತನೆಂದು ಸಾರುತ್ತಾನೆ. ಗೀತೆಯ ಒಂದು ಶ್ಲೋಕದಲ್ಲಿ ತಾನು ವೃಷ್ಣೀನಾಮ್ ವಾಸುದೇವಃ ಎಂದು ವರ್ಣಿಸುತ್ತ ತಾನು ವಿಭೂತಿ ಎಂದೂ ಹೇಳುತ್ತಾನೆ. ಆದ್ದರಿಂದ ಅವನು ಅನೇಕ ಜನ್ಮಗಳಲ್ಲಿ ವಿಭೂತಿ–ದಿವ್ಯ ಚೈತನ್ಯವನ್ನು ಪರದೆಯ ಹಿಂದಿರಿಸಿದ ವಿಭೂತಿಯಾಗಿ ಪ್ರಕಟನಾಗಿದ್ದನೆಂದು ಭಾವಿಸ–ಬಹುದಾಗಿದೆ. ಅವತಾರದ ಉದ್ದೇಶ ವಿಕಾಸ ಇಲ್ಲವೆ ಉತ್ಕ್ರಾಂತಿಗೆ ಮಾರ್ಗ ಮಾಡಿಕೊಡುವುದೆಂದು ನಾವು ಒಪ್ಪುವುದಾದರೆ ಬೃಹತ್ತಾದ ಸಂಕ್ರಮಣಾವಸ್ಥೆ ಅಥವಾ ಪರಿವರ್ತನೆಯ ಹಂತಗಳಲ್ಲಿ ಭಗವಂತನು 'ಅವತಾರ'ವಾಗಿಯೂ, ಕೆಳದರ್ಜೆಯ ಸಂಕ್ರಮಣಾವಸ್ಥೆಗಳಲ್ಲಿ ವಿಭೂತಿಗಳ ರೂಪದಲ್ಲಿಯೂ ಪ್ರಕಟನಾಗುತ್ತಾನೆಂದು ಭಾವಿಸುವುದು ತರ್ಕಬದ್ಧವಾಗಿದೆ.

ತನ್ನಲ್ಲಿ ಭಗವಂತನ ಸಾನ್ನಿಧ್ಯ ಹಾಗೂ ಸಾಮರ್ಥ್ಯ ಹುಟ್ಟಿನಿಂದ ಅಥವಾ ಅವತರಿಸಿ ಬಂದಿರುವುದನ್ನು ಮತ್ತು ತನ್ನೊಳಗಿಂದ ತನ್ನ ಸಂಕಲ್ಪ, ಕಾರ್ಯ ಹಾಗೂ ಜೀವನವನ್ನು ನಿಯಂತ್ರಿಸುವುದೆಂಬುದನ್ನೂ ಅರಿತುಕೊಂಡವನನ್ನು, ಸ್ಥೂಲವಾಗಿ, ಅವತಾರ ಪುರುಷನೆಂದು ಹೇಳಬಹುದು. ಅವನು ಆಂತರಿಕವಾಗಿ ಈ ದೈವೀ ಸಾಮರ್ಥ್ಯ ಹಾಗೂ ಸಾನ್ನಿಧ್ಯದೊಡನೆ ಗುರುತಿಸಿಕೊಂಡಿರುವೆನೆಂದು ಭಾವಿಸುತ್ತಾನೆ.

ಭಗವಂತನ ಸಾಮರ್ಥ್ಯದ ಅಂಶವನ್ನು ದೇಹದಲ್ಲಿ ಧರಿಸಿಕೊಂಡು ಅದರಿಂದಾಗಿ ಶ್ರೇಷ್ಠ ಶಕ್ತಿಯಿಂದ ಜಗತ್ತಿನಲ್ಲಿ ಕಾರ್ಯ ಕೈಕೊಳ್ಳಲು ಸಮರ್ಥನಾದವನು ವಿಭೂತಿ. ಅದಷ್ಟೇ ಅವನು ವಿಭೂತಿಯೆನಿಸಿಕೊಳ್ಳಲು ಅವಶ್ಯವಾದುದು. ಸಾಮರ್ಥ್ಯ ಉಚ್ಚತರವಾದದ್ದಿರಬಹುದು, ಆದರೆ ಅವನ ಪ್ರಜ್ಞೆ ಅಂತರ್ಯದಲ್ಲಿ ಜನಿಸಿದ ಇಲ್ಲವೆ ಅಂತರ್ನಿವಾಸಿ ಭಗವಂತನದಲ್ಲ. ವಿಭಿನ್ನತೆಯ ಈ ಅಂಶವನ್ನು ನಾವು ಭಗವದ್ಗೀತೆಯಲ್ಲಿ ಕಂಡುಕೊಳ್ಳಬಹುದಾಗಿದೆ. ಅದು ಈ



ವಿಷಯದಲ್ಲಿ ಮುಖ್ಯ ಅಧಿಕೃತ ಗ್ರಂಥವಾಗಿದೆ. ಈ ವಿಭಿನ್ನತೆಯ ಪ್ರಕಾರ ಶ್ರೀ ರಾಮ, ಶ್ರೀ ಕೃಷ್ಣರ ಬಗ್ಗೆ ಲಭ್ಯವಿರುವ ಮಾಹಿತಿಯ ಆಧಾರದಿಂದ ಅವರು ಅವತಾರ ಪುರುಷರಾಗಿದ್ದರೆಂದು ನಿಶ್ಚಿತವಾಗಿ ಹೇಳಬಹುದು. ಬುದ್ಧನೂ ಕೂಡ ಅವತಾರ ಪುರುಷನೇ, ಆದರೂ ಅವನಲ್ಲಿಯ ಸಾಮರ್ಥ್ಯ ಅವೈಯಕ್ತಿಕ ಪ್ರಜ್ಞೆಯ ಸ್ವರೂಪದ್ದಾಗಿತ್ತು. ಶ್ರೀ ರಾಮಕೃಷ್ಣರು ತಮ್ಮೊಳಗಿರುವ ಶ್ರೀ ರಾಮ, ಶ್ರೀ ಕೃಷ್ಣರ ಪ್ರಜ್ಞೆಗೆ ತಮ್ಮ ಧ್ವನಿಗೂಡಿಸುತ್ತಿದ್ದರು. ಚೈತನ್ಯರ ವಿಚಾರ ವಿಶಿಷ್ಟ ರೀತಿಯದಾಗಿತ್ತು. ಅವರ ಬಗ್ಗೆ ತಿಳಿದಿರುವುದರ ಪ್ರಕಾರ ಅವರು ಸಾಮಾನ್ಯವಾಗಿ ತಾವು ಶ್ರೀ ಕೃಷ್ಣನ ಭಕ್ತನೆಂದು ಭಾವಿಸುತ್ತಿದ್ದರು ಮತ್ತು ಆ ರೀತಿ ಸಾರುತ್ತಿದ್ದರು, ಮತ್ತೇನೂ ಅಲ್ಲವೆಂದು ಹೇಳುತ್ತಿದ್ದರು. ಆದರೆ ಕೆಲವೊಂದು ಉಚ್ಚ ಸ್ಫೂರ್ತಿಯ ಕ್ಷಣಗಳಲ್ಲಿ ಅವರು ಶ್ರೀ ಕೃಷ್ಣನನ್ನೇ ಪ್ರಕಟಪಡಿಸುತ್ತಿದ್ದರು, ತನುಮನಗಳಲ್ಲಿ ಜಾಜ್ವಲ್ಯಮಾನರಾಗಿ ಶ್ರೀ ಕೃಷ್ಣನಾಗಿಯೆ ಕಂಗೊಳಿಸುತ್ತಿದ್ದರು ಮತ್ತು ಶ್ರೀ ಕೃಷ್ಣನಂತೆ ಮಾತು ಕೃತಿಗಳಲ್ಲಿ ವರ್ತಿಸುತ್ತಿದ್ದರು. ಚೈತನ್ಯರ ಸಮಕಾಲೀನರು ಅವರಲ್ಲಿ ಶ್ರೀ ಕೃಷ್ಣನ ಅವತಾರವನ್ನೇ ಕಾಣುತ್ತಿದ್ದರು, ದಿವ್ಯ ಪ್ರೇಮದ ಆ ಭಗವಂತನ ದರ್ಶನವನ್ನೇ ಪಡೆಯುತ್ತಿದ್ದರು.

ಶಂಕರಾಚಾರ್ಯರು ಹಾಗೂ ಸ್ವಾಮಿ ವಿವೇಕಾನಂದರು ನಿಜವಾಗಿಯೂ ವಿಭೂತಿ ಪುರುಷರಾಗಿದ್ದರು. ವಿಭೂತಿ ಪುರುಷರಾಗಿ ಅತ್ಯಂತ ಮಹಿಮಾನ್ವಿತರಾಗಿದ್ದರು.

**ಸ್ವಾಮಿ ವಿವೇಕಾನಂದರ ಅನುಭವ :** ಅವರ ಅನುಭವ ಉಪನಿಷತ್ತುಗಳಲ್ಲಿ ಬಣ್ಣಿಸಿದಂತೆ ಅತ್ಯುಚ್ಚ ಆತ್ಮಾನುಭವದ ಸಿದ್ಧಿಯೇ ಆಗಿತ್ತು. ಸಮಾಧಿ ಸ್ಥಿತಿಯಲ್ಲಿ ಪಡೆದ ಅನುಭವವು ಜಾಗ್ರತಾವಸ್ಥೆಯಲ್ಲಿ ಮುಂದುವರಿಯಲಾರದೆಂದು ಹೇಳುವುದು ವಾಸ್ತವ ಸಂಗತಿಯಲ್ಲ.

## [29]

## ಶ್ರೇಷ್ಠ ಗತಕಾಲ, ಶ್ರೇಷ್ಠತರ ಭವಿಷ್ಯತ್ಕಾಲ

ಶ್ರೀ ರಾಮಕೃಷ್ಣರು 'ಪರಿವರ್ತನೆ'ಯ ವಿಚಾರ ಕುರಿತು ಯೋಚಿಸಿರಲಿಲ್ಲ ಇಲ್ಲವೆ ಅದಕ್ಕಾಗಿ ಪ್ರಯತ್ನಿಸಿರಲಿಲ್ಲ. ಅವರಿಗೆ ಕೇವಲ ಜಗಜ್ಜನನಿಗಾಗಿ ಭಕ್ತಿ ಬೇಕಾಗಿತ್ತು, ಅದರೊಂದಿಗೆ ಅವಳು ಕೊಟ್ಟ ಜ್ಞಾನವನ್ನು ಸ್ವೀಕರಿಸಿದರು ಮತ್ತು ಅವಳ ಇಚ್ಛಾನುಸಾರ ಕಾರ್ಯಕೈಕೊಂಡರು. ಅವರು ಪ್ರಾರಂಭದಿಂದಲೇ ಅಂತರ್ಬೋಧೆಯುಳ್ಳವರು, ಚೈತ್ಯದ ಅರಿವುಳ್ಳವರು ಆಗಿದ್ದರು ಮತ್ತು ಅವರು

ಮುಂದುವರಿದಂತೆ ಅವುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಪಡೆದುಕೊಂಡರು. ನಾವು ಅರಸುತ್ತಿರುವ ಪರಿವರ್ತನೆಯ ಆವಶ್ಯಕತೆ ಅವರಿಗಿರಲಿಲ್ಲ, ಏಕೆಂದರೆ ಅವರು ಈಶ್ವರ ಕೋಟಿ ಮನುಷ್ಯನ ಬಗ್ಗೆ ಹಾಗೂ ಅವನು ಮೇಲೇರಿ ಹೋಗಿ ಕೆಳಗಿಳಿದು ಬರುವುದರ ಬಗ್ಗೆ ಮಾತನಾಡಿದ್ದರೂ ಹೊಸ ಪ್ರಜ್ಞೆಯ ಬಗ್ಗೆ, ಹೊಸ ಅತಿಮಾನವ ಕುಲದ ಬಗ್ಗೆ, ಭಗವಂತ ಪೃಥ್ವಿಯ ಸ್ವಭಾವದಲ್ಲಿ ಪ್ರಕಟವಾಗುವುದರ ಬಗ್ಗೆ ಅವರು ಅರಿವು ಹೊಂದಿರಲಿಲ್ಲ.

*

ಶ್ರೀ ರಾಮಕೃಷ್ಣರ ಯೋಗವೂ ಕೂಡ ಅಂತರ್ಯದಲ್ಲಿರುವ ಭಗವಂತನನ್ನು ಆಂತರಿಕವಾಗಿ ಸಾಕ್ಷಾತ್ಕರಿಸಿಕೊಳ್ಳುವುದಾಗಿತ್ತು – ಅದಕ್ಕಿಂತ ಕಡಿಮೆಯಾದುದೂ ಅಲ್ಲ, ಹೆಚ್ಚಿನದೂ ಅಲ್ಲ. ಭಗವಂತನಿಗಾಗಿ ಎಲ್ಲವನ್ನೂ ತೊರೆದ ಸಾಧಕ ಸಾಕ್ಷಾತ್ಕಾರ ಪಡೆಯುವ ಅವನ ಹಕ್ಕನ್ನು ಕುರಿತು ಶ್ರೀ ರಾಮಕೃಷ್ಣರು ಹೇಳಿದ ವಾಕ್ಯ ಆಂತರಿಕವಾದುದನ್ನು ದೃಢೀಕರಿಸುತ್ತಿತ್ತಲ್ಲದೆ ಬಾಹ್ಯದಲ್ಲಿ ದೇಹಧಾರಣೆ ಮಾಡಿದ ಭಗವಂತನನ್ನು ಕುರಿತಾಗಿರಲಿಲ್ಲ. ಅದು ಸಂಪೂರ್ಣ ಆಧ್ಯಾತ್ಮಿಕ ಏಕತೆಯ ಬಗೆಯದಾಗಿತ್ತು, ಭಗವದ್ಭಕ್ತ ಭಗವಂತನನ್ನು ಅರಸುವದಾಗಿತ್ತು, ಆದರೆ ಭಗವಂತನೂ ತನ್ನನ್ನು ಕೊಟ್ಟುಕೊಳ್ಳುತ್ತ ಭಕ್ತನನ್ನು ಭೇಟಿಮಾಡುವುದಾಗಿತ್ತು. ಅದಕ್ಕೆ ಯಾವ ಆಕ್ಷೇಪಣೆಯೂ ಇರುವುದು ಸಾಧ್ಯವಿಲ್ಲ. ಭಗವಂತನನ್ನು ಅರಸುವವರೆಲ್ಲರಿಗೂ ಇಂತಹ ಹಕ್ಕಿರುತ್ತದೆ, ಆದರೆ ಈ ಬಗೆಯಲ್ಲಿ ಭಗವಂತನನ್ನು ಕಾಣುವ ಕಾರ್ಯ ನಿರ್ವಹಣಾ ಪದ್ಧತಿ ಬಗ್ಗೆ ಹೇಳುವುದಾದರೆ ಅದು ನಮ್ಮನ್ನು ಬಹಳ ದೂರ ಕೊಂಡೊಯ್ಯುವುದಿಲ್ಲ. ಅದು ಹೇಗೆ ಇರಲಿ, ನಾನು ಭಗವಂತನನ್ನು ಭೌತಿಕ ಸ್ತರದಲ್ಲಿ ಕಾಣುವ ಉದ್ದೇಶವನ್ನಿಟ್ಟುಕೊಂಡಿದ್ದೇನೆ. ಮತ್ತು ಶ್ರೀ ರಾಮಕೃಷ್ಣರು ಸಾಧಿಸಿದ್ದನ್ನೇ ಪುನರಾವರ್ತನೆ ಮಾಡುವುದನ್ನು ನಾನು ಒಪ್ಪಲಾರೆ. ಅಲ್ಲದೆ ಶ್ರೀ ರಾಮಕೃಷ್ಣರು ಬಹು ಕಾಲದ ವರೆಗೆ ತಮ್ಮೊಳಗೆ ತಾವು ಲೀನರಾಗಿದ್ದರೆಂದು ನನಗೆ ನೆನಪಿದ್ದ ಹಾಗಿದೆ. ಅವರು ತಮ್ಮ ಜೀವನವನ್ನೆಲ್ಲ ಶಿಷ್ಯಂದಿರೊಂದಿಗೆ ಕಳೆದಿರಲಿಲ್ಲ. ಮೊದಲು ಅವರು ಸಿದ್ಧಿಯನ್ನು ತಮ್ಮ ನಿವೃತ್ತ ಜೀವನದಲ್ಲಿ ಪಡೆದುಕೊಂಡರು. ಮತ್ತು ಈ ನಿವೃತ್ತಿ ಸ್ಥಿತಿಯಿಂದ ಹೊರಬಂದು ಪ್ರತಿಯೊಬ್ಬರನ್ನೂ ಭೇಟಿಮಾಡುತ್ತಿರುವಂತೆ ಕೆಲ ವರ್ಷಗಳ ಕಾಲದಲ್ಲಿ ಅವರ ದೇಹವು ಜೀರ್ಣವಾಯಿತು. ಹೀಗಾಗುವುದಕ್ಕೆ ಯಾವ ಆಕ್ಷೇಪಣೆಯನ್ನೂ ಅವರು ವ್ಯಕ್ತಪಡಿಸಲಿಲ್ಲವೆಂದು ನನ್ನ ಭಾವನೆ, ಏಕೆಂದರೆ ಕೇಶವ ಚಂದ್ರನ ಅಂತ್ಯಕಾಲದ



ಸಮಯದಲ್ಲಿ ಅವರು ಆಧ್ಯಾತ್ಮಿಕ ಅನುಭವ ದೇಹವನ್ನು ಜೀರ್ಣಗೊಳಿಸುವುದೆಂಬ ಒಂದು ಸಿದ್ಧಾಂತವನ್ನೆ ಮಂಡಿಸಿದರು. ಮತ್ತು ಅದೇ ಕಾಲಕ್ಕೆ ತಮಗೆ ಗಂಟಲುಬೇನೆ ಏಕೆ ಬಂದಿತು ಎಂದು ಕೇಳಿದಾಗ ಶಿಷ್ಯಂದಿರು ತಮ್ಮ ಮೇಲೆ ಎರಚಿದ ಪಾಪಗಳನ್ನು ತಾವು ಸ್ವೀಕರಿಸಬೇಕಾಗಿ ಬಂದುದರ ಕಾರಣದಿಂದ ಹಾಗಾಯಿತೆಂದು ಅವರು ಹೇಳಿದರು. ಅವರ ಹಾಗೆ ಕೇವಲ ಆಂತರಿಕ ಮುಕ್ತಿಯಿಂದ ತೃಪ್ತಿಪಡೆಯದ ನಾನು ಈ ವಿಚಾರಗಳನ್ನಾಗಲಿ, ಪರಿಣಾಮಗಳನ್ನಾಗಲಿ ಒಪ್ಪಿಕೊಳ್ಳಲಾರೆ. ಏಕೆಂದರೆ ಅವುಗಳಿಂದ ಸಾಧಕ ಭಗವಂತನೊಡನೆ ಭೌತಿಕ ಸ್ತರದಲ್ಲಿ ಯಶಸ್ವಿಯಾಗಿ ಸಂಧಿಸಿದಂತೆ ಕಂಡುಬರುವುದಿಲ್ಲ, ಆಂತರಿಕ ಜೀವನದಲ್ಲಿ ಸಾಧಕನು ಈ ವಿಚಾರದಲ್ಲಿ ಎಷ್ಟೇ ಯಶಸ್ವಿಯಾಗಿರಬಹುದು. ಶ್ರೀ ಕೃಷ್ಣನು ಶ್ರೇಷ್ಠ ಕಾರ್ಯಗಳನ್ನು ಕೈಕೊಂಡನು. ಅವನು ಭಗವಂತನ ದಿವ್ಯ ಅಭಿವ್ಯಕ್ತಿ ಎಂಬುದು ಸುಸ್ಪಷ್ಟ. ಆದರೆ ಅವನ ಅನುಯಾಯಿಗಳು, ಭಕ್ತರು ತಮ್ಮ ನಿರಂತರ ಬೇಡಿಕೆಗಳಿಂದ, ನಿಂದನೆಗಳಿಂದ, ಅಸಂಸ್ಕೃತ ಪ್ರಾಣಿಕ ಸ್ವಭಾವವನ್ನು ಅವನ ಮೇಲೆ ಹೇರಿದುದರಿಂದ ಅವನ ಜೀವನದಲ್ಲಿ ಅಶಾಂತಿಯನ್ನುಂಟು ಮಾಡಿದ್ದರೆಂದು ಶ್ರೀ ಕೃಷ್ಣನು ಹೇಳಿದುದನ್ನು ಮಹಾಭಾರತದ ಒಂದೆಡೆಯಲ್ಲಿ ಓದಿದುದು ನನಗೆ ನೆನಪಿದೆ. ಮತ್ತು ಭಗವದ್ಗೀತೆಯಲ್ಲಿ ಅವನು ಈ ಮಾನವ ಜಗತ್ತು ಅಶಾಶ್ವತ ಹಾಗೂ ದುಃಖಪೂರ್ಣವಾದುದು ಎಂದು ಹೇಳಿದ್ದಾನೆ. ಮತ್ತು ಭಗವತ್ ಕಾರ್ಯದ ಧರ್ಮ ಸಿದ್ಧಾಂತವನ್ನು ಅವನು ಪ್ರಸ್ತಾಪಿಸಿದ್ದರೂ ಈ ಮಾನವ ಜಗತ್ತನ್ನು ಬಿಟ್ಟುಕೊಟ್ಟುಹೋಗುವುದೇ ಉತ್ತಮ ಪರಿಹಾರ ಮಾರ್ಗವೆಂದು ಅವನು ಬಹುಮಟ್ಟಿಗೆ ಒಪ್ಪುತ್ತಾನೆಂಬಂತೆ ಕಂಡುಬರುತ್ತದೆ. ಗತ ಕಾಲದ ಸಂಪ್ರದಾಯಗಳು ತಮ್ಮ ತಮ್ಮ ಕಾಲದಲ್ಲಿ, ಸ್ಥಳಗಳಲ್ಲಿ ಬಹು ದೊಡ್ಡವೆಂಬುದೇನೋ ನಿಜ. ಆದರೆ ನಾವು ಅವುಗಳನ್ನು ಈಗಲೂ ಕೇವಲ ಪುನರಾವರ್ತನೆ ಮಾಡುತ್ತ ಅನುಸರಿಸಿ ಹೋಗುವುದೇಕೆ ಎಂಬುದಕ್ಕೆ ನನಗೆ ಕಾರಣ ಕಂಡುಬರುತ್ತಿಲ್ಲ. ಪೃಥ್ವಿಯ ಮೇಲೆ ಆಗಬೇಕಾದ ಪ್ರಜ್ಞೆಯ ಆಧ್ಯಾತ್ಮಿಕ ಉತ್ಕ್ರಾಂತಿಯಲ್ಲಿ ಶ್ರೇಷ್ಠ ಗತಕಾಲ ಕಳೆದುಹೋದ ಮೇಲೆ ಭವ್ಯತರವಾದ ಭವಿಷ್ಯತ್ಕಾಲವು ಬರತಕ್ಕುದೇ ಆಗಿದೆ.

*

ಶ್ರೀ ಚೈತನ್ಯರು ಮತ್ತು ಶ್ರೀ ರಾಮಕೃಷ್ಣರು ತಮ್ಮ ಕಾರ್ಯ ಕ್ಷೇತ್ರಗಳಲ್ಲಿ ಅಸಾಧಾರಣ ಪ್ರಭಾವ ಬೀರಿದರು ಮತ್ತು ಅತ್ಯುಚ್ಚ ಕಾರ್ಯವೆಸಗಿದರು.

*

ಶ್ರೀ ರಾಮಕೃಷ್ಣರು ಸದಾ ತೀವ್ರಗತಿಯ ಹಾಗೂ ಪ್ರಕಾಶಮಯ ಆಧ್ಯಾತ್ಮಿಕ ಅಂತರ್ಬೋಧೆಯಿಂದ ಮಾತನಾಡುತ್ತಿದ್ದರು.

## [30]

## ಶ್ರೀ ರಾಮಕೃಷ್ಣರ ಶ್ರೇಷ್ಠ ಕೊಡುಗೆ

### ನಾವು ಭಗವಂತನನ್ನು ಅರಿಯಬಲ್ಲೆವು, ನಾವು ಬ್ರಹ್ಮನೇ ಆಗಬಲ್ಲೆವು.

ಈ ಭರವಸೆ ಭಾರತದಲ್ಲಿ ಕೆಲವರಿಗೆ – ದೀಕ್ಷಾಬದ್ಧರಾದವರಿಗೆ – ಮಾತ್ರ ಸೀಮಿತವಾಗಿತ್ತು. ಇದನ್ನೀಗ ಮತ್ತೊಮ್ಮೆ ಇಡೀ ಜಗತ್ತಿನ ಮುಂದೆ ಸಕಲರ ಸ್ವೀಕೃತಿಗಾಗಿ ಇರಿಸಲಾಗಿದೆ. ಈ ಸರ್ವೋಚ್ಚ ಕೊಡುಗೆ ದಕ್ಷಿಣೇಶ್ವರದ ಪರಮಹಂಸ ಶ್ರೀ ರಾಮಕೃಷ್ಣರ ಜೀವನದ ಮೂಲಕ ನಮಗೆ ದೊರೆತಿದೆ. ಈ ಪೃಥ್ವಿಯ ಪ್ರಸಿದ್ಧವಲ್ಲದ ಮೂಲೆಯೊಂದರಲ್ಲಿ ಜೀವಿಸಿದ ಜೀವನ ಶ್ರೀ ರಾಮಕೃಷ್ಣರದಾಗಿತ್ತು, ಅದು ಉಜ್ವಲ ಸಂಕೇತ ಹಾಗೂ ಅವತರಣವೇ ಆಗಿದೆಯೆಂದು ನನಗೆ ಭಾಸವಾಗುತ್ತದೆ. ಅವರು ಹಿಂದೆ ಬಿಟ್ಟುಹೋದ ಬೋಧನೆಗಳ ಸಂಗ್ರಹಕ್ಕಾಗಿ ಎಂದಲ್ಲ, ಯಾವುದೊಂದು ಕಟ್ಟುನಿಟ್ಟಿನ ಸೀಮಿತ ಮಾದರಿಯ ಜೀವಿತಕ್ಕಾಗಲಿ ಅಲ್ಲ, ಅಸ್ತಿತ್ವದ ಕೆಡಕುಗಳಿಗಾಗಿ ವಿಶಿಷ್ಟ ಪದ್ಧತಿಯ ನೈತಿಕತೆ ಅಥವಾ ಧಾರ್ಮಿಕತೆಯ ರಾಮಬಾಣ ಉಪಾಯವೆಂದಾಗಲಿ ಅಲ್ಲ, ಆದರೆ ಅವರ ಜೀವನವು ಮತ್ತೊಮ್ಮೆ ಈ ಜಗತ್ತಿನಲ್ಲಿ ಆ ಮಹತ್ತಾದ ವೇದಾಂತ ಪದ್ಧತಿಯ ಅನುಭೂತಿಯನ್ನು ಮತ್ತು ಆಂತರಿಕ ದರ್ಶನವನ್ನು ಅನ್ಯಾದೃಶ ಪೂರ್ಣತೆ ಹಾಗೂ ನಿಷ್ಪಕ್ಷಪಾತತೆಯಿಂದ ಜಗತ್ತಿನಲ್ಲಿ ತಂದು ಅದರ ಸಾಧ್ಯತೆಗಳನ್ನು ತೋರಿಸಿಕೊಟ್ಟ ಕಾರಣಕ್ಕಾಗಿ ಅವರ ಜೀವನ ಮಹತ್ವದ್ದಾಗಿದೆ. ಒಬ್ಬ ನಿರಕ್ಷರಿ, ಬಡ ಹಾಗೂ ಅಜ್ಞಾತ ರೈತ ಮನೆತನದ ವ್ಯಕ್ತಿ, ತಮ್ಮ ಜೀವನದ ಅಂತ್ಯದ ವರೆಗೂ ಗ್ರಾಮ್ಯ ಭಾಷೆಯ ಪದ ಪ್ರಯೋಗಗಳನ್ನು ಉಪಯೋಗಿಸುತ್ತಿದ್ದವರು, ಸಂಸ್ಕೃತ ಇತ್ಯಾದಿ ಬೇರೆ ಭಾಷೆಗಳ ಪರಿಚಯವಿಲ್ಲದವರು, ತತ್ವಜ್ಞಾನ, ವಿಜ್ಞಾನ, ಜಗದ ವ್ಯವಹಾರದ ಬಗೆಗಿನ ಜ್ಞಾನ ಇವಾವುದನ್ನೂ ಅರಿಯದವರು ತಮ್ಮಲ್ಲಿ ಯುಗ–ಯುಗಾಂತರಗಳ ಆಧ್ಯಾತ್ಮಿಕ ಜ್ಞಾನವನ್ನು ಸಿದ್ಧಿಸಿಕೊಂಡಿದ್ದರು. ತಾವು ಸಿದ್ಧಿಸಿಕೊಂಡ ಈ ಜ್ಞಾನವನ್ನು ಎಷ್ಟೊಂದು ಪ್ರಕಾಶ ತುಂಬಿಕೊಂಡು ಸೂತ್ರ ರೂಪ ವಾಕ್ಯಗಳಲ್ಲಿ ನಮ್ಮ ಆಂತರಿಕ ಸತ್ತೆಯ ಅತ್ಯಂತ ಕಠಿಣ ಗಹನತೆಗಳ ಮೇಲೆ, ತತ್ವಜ್ಞಾನದ ಅತ್ಯಂತ ಕ್ಲಿಷ್ಟ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಬಲ್ಲವರಾಗಿದ್ದರೆಂದರೆ ಅಂದಿನ ತೀಕ್ಷ್ಣ ವಿಚಾರಶೀಲರು,



ಮೇಧಾವಿಗಳು, ಪಂಡಿತವರೇಣ್ಯರು ಅವರ ಅಸಾಧಾರಣ ಪ್ರತಿಭೆಗೆ ತಲೆದೂಗು–ವಂತಾಗಿತ್ತು. ಇಂತಹ ಸಜೀವ ಜ್ಞಾನ ಭಾಂಡಾರವನ್ನು ಅವರು ಯಾವ ವಿಧದಿಂದ ಸಂಪಾದಿಸಿದರು? ಯಾವುದೇ ಬೌದ್ಧಿಕ ವಿಧಾನಕ್ಕಾಗಲಿ, ತರ್ಕ ಶಕ್ತಿಯ ಕ್ರಮಗಳಿಗಾಗಲಿ ಇದು ಎಂದೆಂದಿಗೂ ಎಟುಕದು.

ಬುದ್ಧಿಗೆ ಸಂಬಂಧಿಸಿದ ಎಲ್ಲ ವಿಚಾರಗಳಲ್ಲಿಯೂ, ಅತ್ಯಂತ ಪ್ರಾಥಮಿಕ ಸಂಗತಿಗಳಲ್ಲಿಯೂ ಕೂಡ ಅವರು ಮಗುವಿನಂತೆ ಸರಳ ಸ್ವಭಾವದವರಾಗಿದ್ದರು, ತಮ್ಮ ಹಳ್ಳಿಯ ಅಜ್ಞಾನೀ ರೈತನಿಗಿಂತ ಹೆಚ್ಚು ಸರಳರೂ, ಮುಗ್ಧರೂ ಆಗಿದ್ದರು. ಹುಸಿಹೋಗದ ತೀಕ್ಷ್ಣತೆಯ ದೃಷ್ಟಿಯನ್ನು ಅವರು ಜನರ ಮನೋಗತಗಳ ಹಾಗೂ ಹೃದಯಗಳ ಮೇಲೆ ಬೀರಬಲ್ಲವರಾಗಿದ್ದರು, ಆದರೆ ಆ ದೃಷ್ಟಿ ದರ್ಶನದ ದೃಷ್ಟಿಯಾಗಿತ್ತಲ್ಲದೆ ಯೋಚನೆಯದಾಗಿರಲಿಲ್ಲ. ಆಧುನಿಕ ಕಾಲದಲ್ಲಿ ಎಂದರೆ ಮಾನವರಲ್ಲಿ ಬೌದ್ಧಿಕ ಚಟುವಟಿಕೆ ಪ್ರಾರಂಭವಾದಂದಿನಿಂದ ತರ್ಕ ಹಾಗೂ ಬೌದ್ಧಿಕ ವಿಧಾನಗಳಿಂದ ಇಷ್ಟೊಂದು ನಿಷ್ಠುರವಾಗಿ ಹೊರಗುಳಿದಿದ್ದರೂ ಅವರು ಗಳಿಸಿದ ಜ್ಞಾನ ನಿಜಕ್ಕೂ ಆಶ್ಚರ್ಯಪಡಿಸುವಂತಹದಾಗಿತ್ತು. ಇಂತಹದು ಈ ಹಿಂದೆ ಎಂದೂ ಸಂಭವಿಸಿರಲಿಲ್ಲ. ಬಹಳಷ್ಟು ಜನರು ತರ್ಕಮಾಡಿ ಯೋಚನೆಯನ್ನು ಭಾವನೆಯನ್ನಾಗಿ ಪರಿವರ್ತಿಸುತ್ತಿದ್ದರೆ, ಹಾಗೆಯೇ ಭಾವಿಸಿಕೊಂಡು ಭಾವನೆಗಳನ್ನು ಯೋಚನೆಗಳನ್ನಾಗಿ ಮಾಡುತ್ತಿದ್ದರೆ ಶ್ರೀ ರಾಮಕೃಷ್ಣರು ಜೀವಿಸಿ, ನೋಡಿ ತಿಳಿದುಕೊಳ್ಳುತ್ತಿದ್ದರು, ಅದೇ ಅವರ ಯಶಸ್ಸಿನ ರಹಸ್ಯವಾಗಿತ್ತು. ಅವರು ತಮ್ಮ ಹೃದಯದಿಂದ ಇಲ್ಲವೆ ಉನ್ನತ ಧೀಶಕ್ತಿಯಿಂದ ನೋಡಿದ ದರ್ಶನವನ್ನು ಸಿದ್ಧಿಯ ಸಾಮರ್ಥ್ಯದಿಂದ ಅನುಭವವನ್ನಾಗಿರಿಸುತ್ತಿದ್ದರು, ಇಂತಹ ಸಾಮರ್ಥ್ಯವನ್ನು ಆಧುನಿಕ ಜನರು ಕಳೆದುಕೊಂಡು ಬಹಳ ಕಾಲ ಸಂದಿ ಹೋಗಿದೆ. ಹೀಗೆ ಎಲ್ಲವನ್ನು ಅದರ ಮಾನಸಿಕ ಹಾಗೂ ಭೌತಿಕ ಪೂರ್ಣ ಸ್ವಾರಸ್ಯವನ್ನು ಅರಿತುಕೊಳ್ಳುವ ವರೆಗೆ ಜೀವಿಸಿ ಅವರ ಆತ್ಮವು ಹೆಚ್ಚು ಹೆಚ್ಚಾಗಿ ಜ್ಞಾನದತ್ತ, ನೇರ ಸತ್ಯದತ್ತ, ವಿಷಯಗಳಲ್ಲಿರುವ ನೈಜತೆಯತ್ತ ತೆರೆದುಕೊಳ್ಳುತ್ತಿತ್ತು, ಅದು ಆಳಗಳಲ್ಲಿರುವ ಯಾವುದನ್ನೂ ಬಚ್ಚಿಡದೆ ಇರುವವರೆಗೆ ಹಾಗೂ ಉನ್ನತ ಶಿಖರಗಳು ಅವರ ಹೆಜ್ಜೆಗಳಿಗೆ ನಿಲುಕುವವರೆಗೆ ನಡೆಯುತ್ತಿತ್ತು. ಯೋಚಿಸು–ವುದಕ್ಕಿಂತ ಬದುಕಿಬಾಳುವುದರ ಅತ್ಯಧಿಕ ಮಹತ್ವವನ್ನು ಅವರು ಮೊಟ್ಟಮೊದಲು ಸುಸ್ಪಷ್ಟವಾಗಿ, ಸಂಪೂರ್ಣವಾಗಿ, ಯಾವುದನ್ನೂ ಮರೆಮಾಚದೆ, ಪರಿಸ್ಥಿತಿಯನ್ನು ಹಗುರುಗೊಳಿಸದೆ ನಮಗೆ ತೋರಿಸಿಕೊಟ್ಟಿದ್ದಾರೆ, ಆದರೆ ಅಸ್ತಿತ್ವದಲ್ಲಿರುವುದು

ಎಂದರೆ ಕೇವಲ ದೇಹ, ಪ್ರಾಣಗಳಲ್ಲಿರುವ ಅಂದರೆ ಸಂವೇದನಾಶೀಲ, ಭಾವನಾತ್ಮಕ ಇಲ್ಲವೆ ಕಾರ್ಯಾಸಕ್ತ ಮನುಷ್ಯನ ಹಾಗಲ್ಲ, ಆದರೆ ಆತ್ಮದಲ್ಲಿಯೂ ಕೂಡ ಇರುವುದು, ಮುಖ್ಯವಾಗಿ ಈ ಸಂಕೀರ್ಣ ಮಾನವ ಸಂಕೇತದ ಕೇಂದ್ರ ಸತ್ತೆಯಾದ ಆತ್ಮದಲ್ಲಿ ಜೀವಿಸಬೇಕು. ಆದ್ದರಿಂದ ಶತ-ಶತಮಾನಗಳಿಂದ ಹೇರುತ್ತ ಬಂದ ಹಂಗಾಮಿ ಉಪಾಯಗಳೆಂಬ ಸಂಕೋಲೆಗಳಿಂದ ಅವರು ನಮ್ಮನ್ನು ಮುಕ್ತಗೊಳಿಸಲು ಶಕ್ತರಾದರು. ಪ್ರತಿಯೊಂದು ಯೋಗ ಪದ್ಧತಿಯ ಮಿತಿಗಳನ್ನು ಭೇದಿಸಿಕೊಂಡು ಮುನ್ನುಗ್ಗಿದರು ಮತ್ತು ಅವುಗಳನ್ನು ಒಂದೊಂದಾಗಿ ಆಚರಿಸಿದರು. ಮೂರು ದಿನಗಳ ಅವಧಿಯಲ್ಲಿ ಪ್ರತಿಯೊಂದರ ಪರಾಕಾಷ್ಠೆಯನ್ನು ತಲುಪುತ್ತಿದ್ದರು. ಇಂತಹದು ಅತ್ಯಂತ ಸಮರ್ಥ ಯೋಗಿಗಳಿಗೂ ಕೂಡ ಅನೇಕ ದಶಕಗಳೇ ಹಿಡಿಯಬಹುದು ಇಲ್ಲವೆ ಅನೇಕ ಜನ್ಮಗಳು ಬೇಕಾಗಬಹುದು. ಅವರು ಧರ್ಮಗಳ ಮಿತಿಗಳನ್ನು ಭೇದಿಸಿ ಮುನ್ನುಗ್ಗಿದರು ಮತ್ತು ಕ್ರೈಸ್ತನ ಹಾಗೂ ಅಲ್ಲಾಹನ ಆರಾಧನೆಯಲ್ಲಿ ತಮ್ಮನ್ನು ಕೃತಕೃತ್ಯಗೊಳಿಸಿಕೊಂಡರು, ಆದಾಗ್ಯೂ ಅವರು ತಮ್ಮ ವೈಯಕ್ತಿಕ ಜೀವನದ ಭಾಗದಲ್ಲಿ ಶಾಕ್ತ ಪಂಥದ ಹಿಂದೂ ಆಗಿಯೇ ಉಳಿದರು. ಗುರು ಪರಂಪರೆಯ ಮಿತಿಗಳನ್ನು ಭೇದಿಸಿ ಮುನ್ನುಗ್ಗಿದರು, ಬಾಹ್ಯ ವಿಧಾನಗಳಿಗೆ ಹಾಗೂ ಸಾಧನೆಗೆ ಮಾನವ ಗುರುಗಳನ್ನು ಉಪಯೋಗಿಸಿ–ಕೊಂಡರು, ಆದಾಗ್ಯೂ ತಮ್ಮ ಮೊದಲ ಹಾಗೂ ಅತಿ ಶ್ರೇಷ್ಠ ದೀಕ್ಷೆಯನ್ನು ಸ್ವತಃ ಜಗಜ್ಜನನಿಯಿಂದ ಪಡೆದರು ಮತ್ತು ತಮ್ಮ ಜ್ಞಾನವನ್ನು ಅಂತರಂಗದೊಳಗಿರುವ ಜಗದ್ಗುರುವಿನಿಂದ ಪಡೆದರು. ತತ್ವಜ್ಞಾನದ ಪಂಥಗಳ ತಾರ್ಕಿಕ ಮಿತಿಗಳ ಗಡಿಗಳನ್ನು ಭೇದಿಸಿಕೊಂಡು ಹೋಗಿ ದ್ವೈತಾದ್ವೈತಗಳ ಕಗ್ಗಂಟುಗಳನ್ನು ತೋರಿಸುತ್ತ ಅನುಭವದ ಐಕ್ಯತೆಯಲ್ಲಿರುವ ಸಾಮರಸ್ಯವನ್ನು ಎತ್ತಿ ತೋರಿ–ಸುತ್ತಿದ್ದರು. ವೇದ, ವೇದಾಂತಗಳಲ್ಲಿಯೂ ಇದೇ ಬಗೆಯ ಸಾಮರಸ್ಯವಿರುವುದನ್ನು ನಾವು ಕಾಣಬಹುದಾಗಿದೆ. ಆ ಕಾಲದಲ್ಲಿ ನಮ್ಮ ಆಧ್ಯಾತ್ಮಿಕ ಜೀವನವನ್ನು ಆಳುತ್ತಿದ್ದುದೆಲ್ಲವನ್ನೂ ಅವರು ವಿಲಕ್ಷಣ ರೀತಿಯಲ್ಲಿ ತಮ್ಮ ಆತ್ಮದಲ್ಲಿ, ಮಾನಸಿಕ ಹಾಗೂ ದೈಹಿಕ ಅನುಭವದಲ್ಲಿ ತೆಗೆದುಕೊಳ್ಳುತ್ತಿದ್ದರು, ಅವುಗಳ ಕುಂದುಕೊರತೆ–ಗಳನ್ನು ತಮ್ಮ ವೈಯಕ್ತಿಕ ಸತ್ತೆಯ ಮಹತ್ತರ ಪಾತಾಳಕ್ಕೆ ಕಳಿಸಲು ನುಂಗಿಬಿಡುತ್ತಿದ್ದರು ಮತ್ತು ಇವುಗಳ ಮುಖವಾಡ ಹಾಗೂ ರೂಪಗಳೊಳಗಿಂದ ಆಚೆಗಿರುವ ಪರಮೋಚ್ಚವಾದ ಬೇರೊಂದನ್ನು ಹೊರತೆಗೆಯುತ್ತಿದ್ದರು. ಹೀಗೆ ಅನುಭವ ಮತ್ತು ಆಂತರಿಕ ದರ್ಶನ ಇವೆರಡನ್ನೂ ಅತ್ಯುಚ್ಚ ಜ್ಞಾನ ಪ್ರಾಪ್ತಿಯ ಶ್ರೇಷ್ಠ ಸಾಧನವನ್ನಾಗಿ ಸ್ಥಿರಪಡಿಸುತ್ತ ಅವರದು ಮಾನವತೆಯ ಜೀವನದ ಬೀಜ–



ಬದುಕುಗಳಲ್ಲಿ ಒಂದೆನಿಸುವಂತಾಯಿತು. ಮತ್ತು ಅವರ ಬದುಕಿನ ಈ ಬೀಜವು ತರ್ಕಬುದ್ಧಿಯ ಗಂಟುಗಳನ್ನು ಬಿಡಿಸುತ್ತ ಮಾನವತೆಯ ಪ್ರಯಾಣವನ್ನು ಬುದ್ಧಿಯ ಎತ್ತರದ ತಪ್ಪಲು ಭೂಮಿಯಲ್ಲಿಯ ಸುಧೀರ್ಘ ಬಳಸುದಾರಿಗಳಿಂದ ಹೊರಳಿಸಿ ಆತ್ಮದ ಗಿರಿಶಿಖರಗಳತ್ತ ಸಾಗುವ ಕಾಲುದಾರಿಗೆ ಮರಳಿ ತರುವುದಾಗಿತ್ತು.

## [31]

## ಸೂರ್ಯ ಪ್ರಕಾಶಿತ ಪಥ – ಅತಿ ಶೀಘ್ರವಾದ ಮಾರ್ಗ

ಪ್ರಾಚೀನ ಕಾಲದ ಯೋಗಿಗಳು ಹಾಗೂ ಅನ್ವೇಷಕರು ಬೇಡಿಕೊಳ್ಳುತ್ತಿದ್ದ ಪ್ರಥಮ ವಿಷಯವೆಂದರೆ ಶಾಂತಿ. ಅಚಂಚಲತೆ ಹಾಗೂ ನಿಶ್ಚಲನೀರವತೆಗಳು – ಅವು ಶಾಂತಿಯನ್ನು ಯಾವಾಗಲೂ ತಂದುಕೊಡುತ್ತವೆ – ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳಲು ಅತ್ಯಂತ ಶ್ರೇಷ್ಠ ಸ್ಥಿತಿಗಳೆಂದು ಅವರು ಸಾರಿದರು. ಹರ್ಷಚಿತ್ತ ಮತ್ತು ಬೆಳಕು ತುಂಬಿದ ಹೃದಯ ಆನಂದಕ್ಕೆ ಯೋಗ್ಯ ಪಾತ್ರೆ. ಆನಂದ ಹಾಗೂ ಅದನ್ನು ತಂದುಕೊಡುವ ಸಾಧನ ಭಗವಂತನೊಡನೆ ಏಕತೆ ಪಡೆಯುವುದಕ್ಕೆ ಬಾಧಕವೆಂದು ಯಾರು ಹೇಳಬಲ್ಲರು? ವಿಷಣ್ಣ ಭಾವವು ಸಾಧನೆಯ ಮಾರ್ಗದಲ್ಲಿ ಬಹು ಭೀಕರ ಹಾಗೂ ಭಾರವಾದ ಹೊರೆಯಾಗಿ ಪರಿಣಮಿಸುತ್ತದೆ. ಕೆಲವೊಂದು ಸಂದರ್ಭಗಳಲ್ಲಿ 'ಪಿಲಿಗ್ರಿಮ್ ಪ್ರೊಗ್ರೆಸ್' ಕಾದಂಬರಿಯಲ್ಲಿಯ ಕ್ರಿಶ್ಚಿಯನ್‌ನಂತೆ ವಿಷಣ್ಣತೆಯ ಕೆಸರಿನಲ್ಲಿ ಹಾಯ್ದು ಹೋಗಬೇಕಾಗುತ್ತದೆ, ವಿಷಣ್ಣತೆ ಪುನಃ ಪುನಃ ಬರುವುದಾದರೆ ಸಾಧನೆಗೆ ಅದೊಂದು ಬಾಧಕವೇ ಸರಿ. "ಅನಿರ್ವಿಣ್ಣ ಚೇತಸಾ" ಎಂದರೆ ಎಷ್ಟೂ ವಿಷಾದದಿಂದ ಕೂಡಿದ ಭಾವವಿಲ್ಲದೆ ಯೋಗ ಸಾಧನೆ ಮಾಡು ಎಂದು ಭಗವದ್ಗೀತೆ ಹೇಳುತ್ತದೆ. ನೋವು, ವೇದನೆ, ಹೋರಾಟ ಮತ್ತು ನಿರಾಶೆಯ ದ್ವಾರಗಳು – ಇವು ಅನಿವಾರ್ಯ ಎಂದಿಲ್ಲದಿದ್ದರೂ – ಸಾಧನೆಯ ದಾರಿಯಲ್ಲಿ ಸ್ವಾಭಾವಿಕ ಅಡ್ಡಿ ಆತಂಕಗಳೆಂದು ನನಗೆ ಸಂಪೂರ್ಣ ಮನವರಿಕೆಯಾಗಿದೆ, ಅವು ಸಹಕಾರಿಗಳೆಂದೇನಲ್ಲ, ಆದರೆ ಅವು ಮಾನವ ಪ್ರಕೃತಿಯ ಅಂಧಕಾರದಿಂದಾಗಿ ನಮ್ಮ ಮೇಲೆ ಎರಗುತ್ತವೆ, ಪ್ರಕೃತಿಯ ಈ ಅಂಧಕಾರದೊಳಗಿಂದ ಪಾರಾಗಿ ಬೆಳಕನ್ನು ಕಾಣಲು ನಾವು ಹೋರಾಡಬೇಕಾಗುತ್ತದೆ. ಶ್ರೀ ರಾಮಕೃಷ್ಣರಾಗಲಿ, ಸ್ವಾಮಿ ವಿವೇಕಾನಂದರಾಗಲಿ ನೀವು ಉಲ್ಲೇಖಿಸಿದಂತಹ ಘಟನೆಗಳು ಸಾಧಕರು ಹಾಯ್ದು ಹೋಗಬೇಕಾದ ಮಾದರಿಗಳೆಂದು ಶಿಫಾರಸು ಮಾಡಬಹುದಿತ್ತೆಂದು ನನಗನಿಸುವುದಿಲ್ಲ. ಶ್ರದ್ಧೆ, ಧೈರ್ಯ, ಸತತ ಸಾಧನೆ ಇವು ಉತ್ತಮ ಮಾರ್ಗ ಎಂದು

ಅವರು ಖಚಿತವಾಗಿ ಹೇಳುತ್ತಿದ್ದರು. ಇಂತಹ ಕೆಟ್ಟ ಕ್ಷಣಗಳು ಬಂದೊದಗಿದಾಗಲೂ ಅವರು ಆ ಮಾರ್ಗಕ್ಕೇ ಅಂಟಿಕೊಂಡಿದ್ದರು. ಇದರ ನೀತಿಯನ್ನೊಪ್ಪಿಕೊಂಡು ಶ್ರೀ ರಾಮಕೃಷ್ಣರು ನಾರದ, ಸನ್ಯಾಸಿ ಯೋಗಿ ಹಾಗೂ ವೈಷ್ಣವ ಭಕ್ತ ಇವರ ಕತೆಯನ್ನು ಹೇಳುತ್ತಿದ್ದರು. ಈ ಕತೆಯ ಸಾರವನ್ನುಳಿಸಿಕೊಂಡು ಅದನ್ನು ನನ್ನ ಭಾಷೆಯಲ್ಲಿ ಹೇಳುತ್ತೇನೆ. ವೈಕುಂಠಕ್ಕೆ ಹೋಗುವ ಮಾರ್ಗದಲ್ಲಿ ನಾರದರು ಒಬ್ಬ ಯೋಗಿಯನ್ನು ಕಂಡರು. ಅವನು ಬೆಟ್ಟದ ಮೇಲಿದ್ದುಕೊಂಡು ಘೋರ ತಪಸ್ಸನ್ನಾಚರಿಸುತ್ತಿದ್ದ. ನಾರದರನ್ನು ಕಂಡ ಆ ಯೋಗಿ "ಓ ನಾರದರೇ, ಈಗ ನೀವು ವೈಕುಂಠಕ್ಕೆ ಹೋಗಿ ಅಲ್ಲಿ ವಿಷ್ಣುವನ್ನು ಕಾಣುವಿರಷ್ಟೇ? ನಾನು ಜೀವನದುದ್ದಕ್ಕೂ ಕಠಿಣ ತಪಸ್ಸನ್ನಾಚರಿಸುತ್ತ ಬಂದಿದ್ದರೂ ನನಗಿನ್ನೂ ಆ ವಿಷ್ಣುವಿನ ಸಾಕ್ಷಾತ್ಕಾರವಾಗಿಲ್ಲ, ಅವನನ್ನು ನಾನೆಂದು ಕಾಣುವೆ, ದಯವಿಟ್ಟು ನನ್ನ ಪರವಾಗಿ ಆತನನ್ನು ಕೇಳಿ ತಿಳಿಸುವಿರಾ?" ಎಂದು ಬಿನ್ನವಿಸಿಕೊಂಡ. ಅನಂತರ ನಾರದರು ಒಬ್ಬ ವೈಷ್ಣವ ಭಕ್ತನನ್ನು ಕಂಡರು. ಅವನು ಶ್ರೀಹರಿಯ ಭಜನೆ ಮಾಡುತ್ತ, ತನ್ನ ಹಾಡಿನ ಲಯಕ್ಕೆ ಅನುಗುಣವಾಗಿ ಕುಣಿಯುತ್ತಿದ್ದ. ಅವನೂ ನಾರದರನ್ನು ಕಂಡಾಗ "ಓ ನಾರದರೇ, ನೀವು ವೈಕುಂಠದಲ್ಲಿ ನನ್ನ ಪ್ರಭು ಶ್ರೀಹರಿಯನ್ನು ಕಂಡಾಗ ನಾನೆಂದು ಅವನ ದರ್ಶನ ಪಡೆಯುವೆ ಎಂಬುದನ್ನು ಅವನಿಂದ ಕೇಳಿ ತಿಳಿಸುವಿರಾ?" ಎಂದು ಬೇಡಿಕೊಂಡ. ವೈಕುಂಠದಿಂದ ಮರಳಿ ಬಂದಾಗ ನಾರದರು ಮೊದಲು ಆ ಸನ್ಯಾಸಿ ಯೋಗಿಯ ಬಳಿಗೆ ಹೋಗಿ "ಯೋಗಿಯೇ ನಾನು ನಿನ್ನ ಬಿನ್ನಹವನ್ನು ಕುರಿತು ವಿಷ್ಣುವನ್ನು ವಿಚಾರಿಸಿದೆ, ನೀನು ಅವನ ಸಾಕ್ಷಾತ್ಕಾರ ಪಡೆಯಲು ಇನ್ನೂ ಆರು ಜನ್ಮಗಳನ್ನು ಕಳೆಯಬೇಕು" ಎಂದು ತಿಳಿಸಿದರು. ಆಗ ಆ ಯೋಗಿ "ಅಯ್ಯೋ, ಅಯ್ಯೋ" ಎಂದು ಗೋಳಿಡುತ್ತ "ಏನು, ಇನ್ನೂ ಆರು ಜನ್ಮಗಳ ಕಾಲ ಇಂತಹ ಘೋರ ತಪಸ್ಸನ್ನಾಚರಿಸಬೇಕೆ? ಇಂತಹ ದೈತ್ಯ ಸಾಹಸಗಳನ್ನೆಸಗಬೇಕೆ? ನನ್ನ ಬಗ್ಗೆ ವಿಷ್ಣು ಅದೆಷ್ಟು ಕಠೋರನಾಗಿದ್ದಾನೆ" ಎಂದು ಹಲುಬತೊಡಗಿದ. ಅನಂತರ ನಾರದರು ಆ ವೈಷ್ಣವ ಭಕ್ತನನ್ನು ಭೆಟ್ಟಿಯಾಗಿ ಅವನಿಗೆ ಹೀಗೆ ಹೇಳಿದರು : "ಭಕ್ತನೇ ನಿನಗೆ ಒಳ್ಳೆಯ ಸಮಾಚಾರ ತಂದಿಲ್ಲ, ನೀನಿನ್ನೂ ಲಕ್ಷ ಜನ್ಮ ಕಳೆದ ಮೇಲೆ ಪ್ರಭುವನ್ನು ನೀನು ಕಾಣುವೆ!" ಎಂದು. ಆದರೆ ಇಷ್ಟನ್ನು ಹೇಳಿದೊಡನೆಯೆ ಆ ಭಕ್ತ ಹರ್ಷಾತಿರೇಕದಿಂದ ನೆಗೆದೆದ್ದು "ಅಬ್ಬಾ! ನಾನು ನನ್ನ ಪ್ರಭು ಶ್ರೀಹರಿಯನ್ನು ಕಂಡೇ ಕಾಣುವೆ! ಒಂದು ಲಕ್ಷ ಜನ್ಮಗಳನ್ನು ಕಳೆದ ನಂತರವಾದರೂ ನಾನು ಶ್ರೀಹರಿಯನ್ನು ಕಂಡೇ ಕಾಣುವೆ, ನನ್ನ ಮೇಲೆ ನನ್ನ ಪ್ರಭುವಿನ ದಯೆ ಅದೆಷ್ಟು ಘನವಾದುದು!" ಹೀಗೆನ್ನುತ್ತ ಇಮ್ಮಡಿ,



ಮುಮ್ಮಡಿ ಹರ್ಷಾತಿರೇಕದಿಂದ ಹಾಡುತ್ತ ಕುಣಿಯತೊಡಗಿದ. ಆಗ ನಾರದರು ಅವನಿಗೆ ಹೇಳಿದರು: "ಭಕ್ತನೆ, ನೀನು ಸಿದ್ಧಿಯನ್ನು ಪಡೆದೆ, ಇಂದೇ ನೀನು ಆ ಪ್ರಭುವನ್ನು ಕಾಣುವೆ" ಎಂದು. ಸರಿ, ನೀವು ಈ ಕತೆಯನ್ನು ಕೇಳಿ "ಇದೆಂತಹ ಅಸಂಬದ್ಧ ಕತೆ, ಮಿತಿಮೀರಿದ ಅತಿರೇಕದ ಕತೆ, ಮಾನವ ಸ್ವಭಾವಕ್ಕೆ ತೀರ ವಿರುದ್ಧವಾದುದು" ಎನ್ನಬಹುದು. ಆದರೆ ಇದು ಅಂತಹ ವಿಪರೀತ ಕತೆಯೇನಲ್ಲ. ಹರಿಶ್ಚಂದ್ರ – ಶಿಬಿ ಚಕ್ರವರ್ತಿಗಳ ಕತೆಗಳಷ್ಟು ಇದು ಅತಿರೇಕದ್ದಾಗಿಲ್ಲ, ಆದರೂ ಆ ವೈಷ್ಣವ ಭಕ್ತನನ್ನು ಒಂದು ಉದಾತ್ತ ಮಾದರಿಯೆಂದು ನಾನು ಪರಿಗಣಿಸುವುದಿಲ್ಲ, ಏಕೆಂದರೆ ಇದೇ ಜನ್ಮದಲ್ಲಿ ಸಾಕ್ಷಾತ್ಕಾರವಾಗಬೇಕೆಂದು ನಾನು ಒತ್ತಿ ಹೇಳುತ್ತೇನೆ. ಆರು ಜನ್ಮಗಳಾಗಲಿ, ಒಂದು ಲಕ್ಷ ಜನ್ಮಗಳಾಗಲಿ ಬೇಕಿಲ್ಲ. ಆದರೆ ಈ ಕತೆಗಳ ಮುಖ್ಯ ಅಂಶವಿರುವುದು ಅವು ಧ್ವನಿಸುವ ನೀತಿ ಪಾಠದಲ್ಲಿ. ಮತ್ತು ಶ್ರೀ ರಾಮಕೃಷ್ಣರು ಈ ಕತೆಯನ್ನು ಹೇಳಿದಾಗ, ಯೋಗದಲ್ಲಿ ಸೂರ್ಯ ಪ್ರಕಾಶಿತ ಮಾರ್ಗವೊಂದಿದೆ ಎಂಬುದು ಅವರಿಗೆ ತಿಳಿಯದೆ ಇರಲಿಲ್ಲ. ಆ ಮಾರ್ಗವು ಒಳ್ಳೆಯದಷ್ಟೇ ಅಲ್ಲ ಅತಿ ಶೀಘ್ರ ಮಾರ್ಗವೆಂದೂ ಅವರು ಹೇಳುತ್ತಿರುವಂತೆ ಕಾಣುತ್ತದೆ.

## [32]

## ಶ್ರೀ ರಾಮಕೃಷ್ಣರು ಹೇಳಿದ ವಕಾಲಂ ಎಂದರೆ ಅಧಿಕಾರ ವಹಿಸಿಕೊಡುವುದು

ಕೆಲವರಿರುತ್ತಾರೆ, ಅವರು ಆದೇಶ ಬರಲಿ ಎಂದು ಕಾದು ಕುಳಿತಿರುತ್ತಾರೆ, ಅದು ಬರುವವರೆಗೆ ಕಾರ್ಯ ಕೈಕೊಳ್ಳುವುದಿಲ್ಲವೆಂದು ನಿರ್ಧರಿಸಿರುತ್ತಾರೆ. ಆದರೆ ಇಂತಹರಿಗೆ ಆದೇಶವನ್ನು ಯಾವಾಗಲೂ ನಿರಾಕರಿಸಲಾಗುತ್ತದೆ. ಕಾರ್ಯ ಕೈಕೊಳ್ಳುವವರೇ ತಮ್ಮ ಅಂತರಂಗದಲ್ಲಿ ಏಕಾಂತ ಸೃಷ್ಟಿಯಾದುದನ್ನು ನಿಶ್ಚಿತವಾಗಿ ಕಂಡುಕೊಳ್ಳುತ್ತಾರೆ, ಆ ಏಕಾಂತದಲ್ಲಿ ಅವರು ಭಗವಂತನೊಡನಿರುತ್ತಾರೆ ಮತ್ತು ನೈಜತೆಯನ್ನು ಮುಖಾಮುಖಿಯಾಗಿ ಕಾಣುತ್ತಾರೆ. ಭೌತಿಕವಾಗಿ ಏಕಾಂತ–ದಲ್ಲಿರಬೇಕಾದ ಕ್ಷಣಗಳು, ಧ್ಯಾನ–ನಿವೃತ್ತಿಯ ಗಳಿಗೆಗಳು ಅವಶ್ಯವಾಗಿರುತ್ತವೆ, ಆದರೆ ಅವು ಗೌಣವಾದವುಗಳು, ಸಹಾಯಕವಾದವುಗಳು. ಸಾಧನೆಯೆಂದು ಕೈಕೊಂಡ ಕಾರ್ಯ, ಭಗವಂತನಿಗೆ ಯಜ್ಞ ರೂಪದ್ದೆಂದು ಕೈಕೊಂಡುದುದು. ಅಂತಹದನ್ನು ಮೊದಲು ಪರಿಣಾಮಗಳ ಬಗ್ಗೆ ಯಾವ ಆಸಕ್ತಿಯನ್ನಿಟ್ಟುಕೊಳ್ಳದೆ ಮಾಡಿದಂತಹದು. ಇದು ಅನಿವಾರ್ಯವಾದ ನಿಬಂಧನೆ. ಇದು

ಕಾರ್ಯವೆಂತಹದೇ ಇದ್ದರೂ ಶ್ರದ್ಧೆಯಿಂದ ಕೈಕೊಳ್ಳಬೇಕಾದಂತಹದು. ಈ ಕಾರ್ಯ ದೇವರಿಗಾಗಿ ಎಂದಷ್ಟೇ ಅಲ್ಲ, ಅದು ದೇವರಿಂದ ಬಂದಂತಹದು. ತಪ್ಪುಗಳಾಗಬಹುದು, ಮುಗ್ಗರಿಸುವಿಕೆಗಳಿರಬಹುದು, ಆದರೆ ಇದು ವೀರೋಚಿತ ಮಾರ್ಗ ಮತ್ತು ಅದರಲ್ಲಿ ಮನುಷ್ಯ ಯಾವುದಕ್ಕೂ ಹೆದರಿಕೊಳ್ಳಬಾರದು, ತಪ್ಪು–ಮುಗ್ಗರಿಸುವಿಕೆಗಳಿಂದ ಹೆದರಿಕೊಳ್ಳುವುದು ಇನ್ನೂ ಕಡಿಮೆಯಾಗಿರಬೇಕು. ನಾವು ನಮ್ಮ ಶಕ್ತಿಯನ್ನಷ್ಟೇ ಅವಲಂಬಿಸಿ ಹೊರಟಾಗ ಕಾರ್ಯ ಸಾಧನೆಯ ಮಾರ್ಗದಲ್ಲಿ ಕೊನೆಯವರೆಗೂ ನಾವು ಮುಗ್ಗರಿಸುತ್ತಲೇ ಸಾಗುತ್ತಿರುತ್ತೇವೆ. ದೇವರೇ ನಮ್ಮ ಕೈಹಿಡಿದು ಕರೆದೊಯ್ಯುತ್ತಾನೆ, ನಮ್ಮ ಸಾಧನೆಯ ಭಾರವನ್ನು ತನ್ನ ಮೇಲೆ ಹೊತ್ತುಕೊಂಡಿದ್ದಾನೆ ಎಂಬ ಶ್ರದ್ಧೆ ಇರಬೇಕು. ಮತ್ತು ಪ್ರತಿಯೊಂದು ತಪ್ಪು, ಮುಗ್ಗರಿಸುವಿಕೆ ಅವನಿಂದಲೇ ಬಂದದ್ದಾಗಿದ್ದು ನಮ್ಮನ್ನು ಧೈರ್ಯಗೆಡದ, ತಿಳಿಹೇಳಲಿಕ್ಕಿರುವ ಸಾಧನೆಯ ತಯಾರಿಗೆಂದೇ ಇರುವುದು. ಇದು ಶ್ರೀ ರಾಮಕೃಷ್ಣರು ಯಾವಾಗಲೂ ಹೇಳುತ್ತಿದ್ದ 'ವಕಾಲಂ'. ನಮ್ಮ ರಾಷ್ಟ್ರವು ಕೂಡ ಮುಗ್ಗರಿಸುತ್ತ, ಏಳುತ್ತ, ಬೀಳುತ್ತ ಸಾಗಿದೆ, ಆದರೆ ಇದರ ಜೊತೆಗೆ ಪ್ರಗತಿಯನ್ನೂ ಸಾಧಿಸುತ್ತಿದೆ. ತನ್ನ ಕರ್ಮ ಸಾಧನೆಯ ಆರಂಭದಿಂದ ತನ್ನ ದೋಷಗಳನ್ನು, ಪಾಪಗಳನ್ನು, ಸೋಲು–ಸಂಕಟಗಳ ಸಾಧ್ಯತೆಗಳನ್ನು ಕಳೆದು ಹಾಕಿ, ತನ್ನ ಪಾಪ–ಕರ್ಮಗಳ ಅಳಿದುಳಿದುದೆಲ್ಲವನ್ನೂ ಶೀಘ್ರವಾಗಿ, ತೀಕ್ಷ್ಣವಾಗಿ ಎತ್ತಿಕೊಂಡು ಸಾಗುತ್ತಲಿದೆ. ಪ್ರಾರಂಭದಿಂದ ಭಗವಂತನ ನಾಮ ಸ್ಮರಣೆಯಲ್ಲಿ ತೊಡಗಿದ್ದರಿಂದ ನಿತ್ಯಳೂ, ಶಾಶ್ವತಳೂ ಆದ ಜಗಜ್ಜನನಿ ಈ ರಾಷ್ಟ್ರವನ್ನು ಎಂದಿಗೂ ಬಿಟ್ಟುಕೊಡುವುದಿಲ್ಲ. ಏಕೆಂದರೆ ಭಗವಂತನ ನಾಮ ಸ್ಮರಣೆ ಯಾವ ಉದ್ದೇಶವಿಲ್ಲದೆ, ವ್ಯರ್ಥವಾಗಿ, ಅಕಸ್ಮಾತ್ ಎಂಬಂತೆ ನಡೆದಿದ್ದರೂ ಅದು ರಾಷ್ಟ್ರವನ್ನು ಉಳಿಸುವುದು ಮತ್ತು ಬಾಳಿಸುವುದು. ಹೃದಯದಿಂದ, ಆತ್ಮದಿಂದ ಈ ನಾಮ ಸ್ಮರಣೆ ನಡೆದರೆ ಮತ್ತು ಅದು ಸಾಧನೆಯ ತಳಹದಿಯಾಗುವಂತೆ ನಡೆದರೆ ಆದಿಮಾತೆ ಇನ್ನೂ ಹೆಚ್ಚಾಗಿ ಈ ರಾಷ್ಟ್ರವನ್ನು ಎತ್ತಿ ಹಿಡಿದು ಮುನ್ನಡೆಸುವಳು.

## [33]

## ಬೆಕ್ಕಿನ ಮರಿಯ ವಿಧಾನ

ಮನುಷ್ಯನಲ್ಲಿ ಭಗವಂತನನ್ನು ಪಡೆದುಕೊಳ್ಳುವ ಇಚ್ಛೆಯಿದ್ದರೆ ಭಗವಂತನೇ ಹೃದಯ ಶುದ್ಧಿಯ ಹಾಗೂ ಸಾಧನೆಯನ್ನು ಅಭಿವೃದ್ಧಿಗೊಳಿಸುವ ಕಾರ್ಯವನ್ನು



ಕೈಕೊಂಡು ಅವುಗಳಿಗೆ ಅಗತ್ಯವಾಗಿರುವ ಅನುಭವಗಳನ್ನು ಒದಗಿಸುತ್ತಾನೆ. ಭಗವಂತನಲ್ಲಿ ವಿಶ್ವಾಸ ಹಾಗೂ ಭರವಸೆಗಳನ್ನಿಟ್ಟುಕೊಂಡು ಪೂರ್ಣ ಸಮರ್ಪಣೆಯ ಸಂಕಲ್ಪವನ್ನು ಕೈಕೊಂಡುದುದೇ ಆದರೆ ಹಾಗೆ ಆಗಬಹುದು, ಆಗಿಯೇ ತೀರುತ್ತದೆ. ಇಂತಹದನ್ನು ಕೈಗೆತ್ತಿಕೊಳ್ಳುವುದೆಂದರೆ ಮನುಷ್ಯ ತನ್ನ ಯತ್ನಗಳ ಮೇಲಷ್ಟೇ ಅವಲಂಬಿಸಿರದೆ ತನ್ನನ್ನೇ ಭಗವಂತನ ಕೈಗಳಿಗೆ ಒಪ್ಪಿಸಿಕೊಳ್ಳುವುದಾಗಿರುತ್ತದೆ. ಇದರರ್ಥ ಭಗವಂತನಲ್ಲಿ ತನ್ನೆಲ್ಲ ವಿಶ್ವಾಸ, ಭರವಸೆಗಳನ್ನಿರಿಸಿಕೊಂಡು ಆತ್ಮ ಸಮರ್ಪಣೆ ಮಾಡುವುದರಲ್ಲಿ ಪ್ರಗತಿ ಸಾಧಿಸುತ್ತ ಹೋಗುವುದಾಗಿದೆ. ಇದೇ ಸಾಧನೆಯ ನಿಜವಾದ ತತ್ವ, ನಾನು ಸ್ವತಃ ಇದನ್ನೇ ಅನುಸರಿಸಿಕೊಂಡು ಬಂದಿದ್ದೇನೆ. ಮತ್ತು ನನ್ನ ಅಭಿಪ್ರಾಯದಲ್ಲಿ ಯೋಗದ ಕೇಂದ್ರ ಪ್ರಕ್ರಿಯೆ ಇದೇ ಆಗಿದೆ. ಶ್ರೀ ರಾಮಕೃಷ್ಣರು ಬೆಕ್ಕಿನ ಮರಿಯ ವಿಧಾನವೆಂದು ವಿವರಿಸುತ್ತಿದ್ದ ದೃಷ್ಟಾಂತದ ಕತೆಯ ಇಂಗಿತವೂ ಇದೇ ಆಗಿದೆ ಎಂದು ನನ್ನ ಭಾವನೆ. ಆದರೆ ಎಲ್ಲರಿಗೂ ಈ ಬಗೆಯ ಸಾಧನೆಯ ವಿಧಾನವನ್ನು ಅನುಸರಿಸುವುದು ಒಮ್ಮೆಲೆ ಸಾಧ್ಯವಾಗದು, ಸಾಧನೆಯ ಈ ಅವಸ್ಥೆಯನ್ನು ತಲುಪಲು ಬಹಳ ಕಾಲ ಹಿಡಿಯುವುದು, ಮನಸ್ಸು, ಪ್ರಾಣಗಳು ಅಚಂಚಲವಾಗಿದ್ದಾಗ ಈ ಬಗೆಯ ವಿಧಾನದಲ್ಲಿ ಹೆಚ್ಚಿನ ಪ್ರಗತಿ ಕಂಡುಬರುವುದು.

## [34]

## ಅದು ಅಹಂಕಾರವಲ್ಲ

(24/1388–89) ಪ್ರಜ್ಞೆಯ ಶ್ರೇಷ್ಠ ದಿಗಂತಗಳು ತೆರೆದುಕೊಳ್ಳತೊಡಗಿದಾಗ, ಮನುಷ್ಯನಲ್ಲಿ, ಅದಾಗಲೇ ಸಾಧುತ್ವದ ಮತ್ತು ವಿನಮ್ರ ಸಂತಸದ ಮನೋಭಾವ ಇಲ್ಲದೆ ಹೋದರೆ ಅವನು ಮೇಲ್ಮೆಯ ಅರಿವನ್ನು ಇಟ್ಟುಕೊಳ್ಳುವುದನ್ನು ತಪ್ಪಿಸಲು ಕಠಿಣವಾಗುವುದು. ಶ್ರೀ ರಾಮಕೃಷ್ಣರ ಶಿಷ್ಯ ವರ್ಗದಲ್ಲಿ ಒಬ್ಬರಾಗಿದ್ದ ನಾಗ ಮಹಾಶಯರಂತಹರು ಇದ್ದಾರೆ, ಅವರಲ್ಲಿ ಆಧ್ಯಾತ್ಮಿಕ ಅನುಭವ ಬೆಳೆದಂತೆ ಹೆಚ್ಚಿನ ನಮ್ರಭಾವವೂ ಕಾಣಿಸಿಕೊಳ್ಳುತ್ತಿತ್ತು. ಹಾಗೆಯೆ ಸ್ವಾಮಿ ವಿವೇಕಾನಂದರೂ ಇದ್ದಾರೆ, ಅವರಲ್ಲಿ ಆಧ್ಯಾತ್ಮಿಕ ಅನುಭವ ಬೆಳೆದಂತೆ ಅದು ಸಾಮರ್ಥ್ಯದ ಮನೋಭಾವ ಹಾಗೂ ಮೇಲ್ಮೆಯ ಅರಿವನ್ನು ಹುಟ್ಟಿಸುತ್ತದೆ. ಇದಕ್ಕಾಗಿ ಯುರೋಪಿಯನ್ನರು ಸ್ವಾಮಿ ವಿವೇಕಾನಂದರನ್ನು ಉಗ್ರ ಟೀಕೆಗೆ ಗುರಿಯನ್ನಾಗಿರಿಸಿದ್ದಾರೆ. ಇನ್ನಿತರರಲ್ಲಿ ಅವರ ಆಧ್ಯಾತ್ಮಿಕ ಸಿದ್ಧಿಗಳ ಅನುಭವವು ಮನುಷ್ಯರ ಮಧ್ಯದಲ್ಲಿ ಮೇಲ್ಮೆಯ

ಭಾವವನ್ನು, ಭಗವಂತನನ್ನು ಕುರಿತು ನಮ್ರಭಾವವನ್ನು ಹುಟ್ಟಿಸುತ್ತದೆ. ಪ್ರತಿಯೊಂದು ನಿಲುವಿಗೆ ಅದರದೇ ಮೌಲ್ಯವಿದೆ. ಮದ್ರಾಸದ ಪಂಡಿತರೊಬ್ಬರು ಸ್ವಾಮಿ ವಿವೇಕಾನಂದರ ಕೆಲವು ದೃಢ ನಿರ್ಧಾರಿತ ಅಭಿಪ್ರಾಯಗಳಲ್ಲಿ ಒಂದನ್ನು ವಿರೋಧಿಸುತ್ತ – 'ಆದರೆ ಶಂಕರಾಚಾರ್ಯರು ಹೀಗೆ ಹೇಳಿಲ್ಲ' ಎಂದಾಗ "ಇರಬಹುದು, ಶಂಕರರು ಹೇಳಿರಲಿಕ್ಕಿಲ್ಲ, ಆದರೆ ನಾನು – ವಿವೇಕಾನಂದ ಹೀಗೆ ಹೇಳುತ್ತೇನೆ" ಎಂದು ಅವರು ಉತ್ತರಿಸಿದಾಗ ಆ ಪಂಡಿತನು ಮೌನ ಧರಿಸಬೇಕಾಯಿತು. ಆ 'ನಾನು ವಿವೇಕಾನಂದ' ಎಂಬುದು ಸಾಮಾನ್ಯರ ದೃಷ್ಟಿಗೆ ಹಿಮಾಲಯ ಸದೃಶ ಆತ್ಮವಿಶ್ವಾಸದ ಅಹಂಭಾವವೆಂದು ಕಾಣಬಹುದು. ಆದರೆ ಸ್ವಾಮಿ ವಿವೇಕಾನಂದರ ಆಧ್ಯಾತ್ಮಿಕ ಅನುಭವದಲ್ಲಿ ಮಿಥ್ಯೆಯಾದುದಾಗಲಿ, ಅಭದ್ರವಾದುದಾಗಲಿ ಇರಲಿಲ್ಲ, ಏಕೆಂದರೆ ಅದು ಕೇವಲ ಅಹಂಕಾರದ ಪ್ರದರ್ಶನವಾಗಿರದೆ ತಾವು ಪ್ರತಿನಿಧಿಸುತ್ತಿದ್ದುದರ ಭಾವ ಹಾಗೂ ಮಹತ್ತರವಾದುದನ್ನು ಕೈಗೆತ್ತಿಕೊಂಡ ಯೋಧನ ಮನೋಭಾವವಾಗಿತ್ತು. ಅವರು ತಮ್ಮನ್ನು ಹೀನಾಯಗೊಳಿಸಿಕೊಳ್ಳುವುದಕ್ಕಾಗಲಿ, ಸೋಲನ್ನೊಪ್ಪಿಕೊಳ್ಳುವಂತೆ ಮಾಡುವುದಕ್ಕಾಗಲಿ ಅವಕಾಶ ಮಾಡಿಕೊಡುವುದು ಸಾಧ್ಯವಿರಲಿಲ್ಲ. ಹೀಗೆ ಹೇಳುವುದರಿಂದ ನಿರಹಂಕಾರದ ಹಾಗೂ ಆಧ್ಯಾತ್ಮಿಕ ವಿನಯವಂತಿಕೆಯ ಮಹತ್ವವನ್ನು ಅಲ್ಲಗಳೆದಂತಲ್ಲ. ಆದರೆ ಆ ಪ್ರಶ್ನೆ ಕಣ್ಣಿಗೆ ಕಂಡುಬರುವಷ್ಟು ಸುಲಭವಾದದ್ದಲ್ಲ. ಏಕೆಂದರೆ ನಾನು ನನ್ನ ಆಧ್ಯಾತ್ಮಿಕ ಅನುಭವಗಳನ್ನು ಅಭಿವ್ಯಕ್ತಪಡಿಸಬೇಕಾದರೆ ಅದನ್ನು ಸತ್ಯಕ್ಕೆ ವ್ಯತಿರಿಕ್ತವಾಗದಂತೆ ಮಾಡಬೇಕು. ನನ್ನ ಅನುಭವಗಳನ್ನನುಸರಿಸುವ ಭಾವ, ಯೋಚನೆ, ಭಾವನೆ, ಪ್ರಜ್ಞೆಯ ವಿಸ್ತಾರ ಇವೆಲ್ಲವನ್ನು ದಾಖಲಿಸಬೇಕು. ಇಡೀ ಜಗತ್ತೇ ತನ್ನಲ್ಲಿದೆ ಎಂಬ ಅನುಭವವಾದಾಗ ಇಲ್ಲವೆ ದೈವೀ ಶಕ್ತಿ ತನ್ನ ಸತ್ತೆ ಹಾಗೂ ಸ್ವಭಾವಗಳೊಳಗೆ ಹರಿದು ಬರುತ್ತದೆ ಎನಿಸಿದಾಗ, ಎಲ್ಲ ಸಂದೇಹಗಳು ಹಾಗೂ ಸಂದೇಹವಾದಿಗಳ ವಿರುದ್ಧ ನಂಬಿಕೆಯ ಖಂಡಿತ ಭಾವನೆ ಉಂಟಾದಾಗ, ಭಗವಂತನೊಡನೆ ಇಲ್ಲವೆ ಉನ್ನತ ಜ್ಞಾನ ಹಾಗೂ ಅಸ್ತಿತ್ವಗಳಿಗೆ ಹೋಲಿಸಿದಾಗ ಚಿಕ್ಕದೆನಿಸುವ ಮಾನವ ವಿಚಾರದೊಂದಿಗೆ ಏಕತೆ ಪಡೆದಾಗ, ಇಂತಹ ಎಲ್ಲ ಅನುಭವಗಳು ನನಗೊದಗಿಬಂದಾಗ ನಾನೇನು ಮಾಡಬೇಕು? 'ನಾನು' ಎಂಬ ಪದವನ್ನು ಉಪಯೋಗಿಸಬೇಕಾಗುತ್ತದೆ. 'ಈ ದೇಹ', 'ಈ ತೋರಿಕೆ' ಎಂದು ಹೇಳುವುದರಿಂದ ಈ ಸಮಸ್ಯೆ ಬಗೆಹರಿಯ–ಲಾರದು, ಏಕೆಂದರೆ ನಾನು ಮಾಯಾವಾದಿಯಲ್ಲ. 'ಕ್ಷ'ನು ಇದು ತುಂಬ ದರ್ಪದ ರೀತಿ, ಅಹಂಕಾರದ ವರ್ತನೆ ಎಂದು ತಲೆ ಅಲ್ಲಾಡಿಸುವ ಹಾಗೆ ನನ್ನ



ಅಭಿಪ್ರಾಯಗಳ, ಮಾತಿನ ರೀತಿ ಆಗಬಹುದಲ್ಲವೆ? ಇದನ್ನು ತಪ್ಪಿಸುವುದು ತುಂಬ ಕಷ್ಟಕರವೆಂದೇ ನನ್ನ ಭಾವನೆ.

## [35]
## ಯೋಗ ಮತ್ತು ಉತ್ಕ್ರಾಂತಿ

(20/2) ಜೀವನ ಹಾಗೂ ಯೋಗ ಇವೆರಡನ್ನೂ ಸರಿಯಾದ ದೃಷ್ಟಿಯಿಂದ ಅವಲೋಕಿಸಿದಾಗ ಎಲ್ಲ ಜೀವನ, ಅದನ್ನು ಪ್ರಜ್ಞಾಪೂರ್ವಕವಾಗಿ ಇಲ್ಲವೆ ಪ್ರಜ್ಞಾರಹಿತವಾಗಿ ಜೀವಿಸಿದಾಗಲೂ ಕೂಡ ಯೋಗವೇ ಆಗಿರುತ್ತದೆ. ಏಕೆಂದರೆ ಯೋಗ ಶಬ್ದವನ್ನು ನಾವು ಸ್ವ–ಪರಿಪೂರ್ಣತೆಯತ್ತ ವಿಧಾನಾತ್ಮಕ ಪ್ರಯತ್ನ ಎಂಬ ಅರ್ಥದಲ್ಲಿ ಉಪಯೋಗಿಸುತ್ತೇವೆ. ನಮ್ಮ ಸತ್ತೆಯೊಳಗೆ ಹುದುಗಿಕೊಂಡಿರುವ ಶಕ್ತಿ – ಸಾಮರ್ಥ್ಯಗಳನ್ನು ಅಭಿವ್ಯಕ್ತಗೊಳಿಸುವುದರ ಮೂಲಕ ಮತ್ತು ಮಾನವ ವ್ಯಕ್ತಿಯನ್ನು ವಿಶ್ವಾತ್ಮಕ ಹಾಗೂ ವಿಶ್ವಾತೀತ ದೈವೀ ಅಸ್ತಿತ್ವದೊಂದಿಗೆ ಒಂದುಗೂಡಿಸುವುದರ ಮೂಲಕ ಈ ಸ್ವ–ಪರಿಪೂರ್ಣತೆಯನ್ನು ಸಾಧಿಸಲು ಶಕ್ಯವಾಗುತ್ತದೆ. ವಿಶ್ವಾತ್ಮಕ ಹಾಗೂ ವಿಶ್ವಾತೀತ ದೈವೀ ಅಸ್ತಿತ್ವವು ಮಾನವನಲ್ಲಿ ಹಾಗೂ ಈ ವಿಶ್ವದಲ್ಲಿ ಭಾಗಶಃ ಅಭಿವ್ಯಕ್ತಗೊಂಡಿರುವುದನ್ನು ನಾವು ಕಾಣುತ್ತೇವೆ. ಆದರೆ ತೋರಿಕೆಗಳ ರೂಪಗಳ ಹಿಂದೆ ನಾವು ನೋಡಿದಾಗ ಎಲ್ಲ ಜೀವನ ಪ್ರಕೃತಿಯ ಬೃಹದಾಕಾರದ ಯೋಗವಾಗಿರುವುದು ಕಂಡುಬರುತ್ತದೆ. ಪ್ರಕೃತಿ ತನ್ನ ಶಕ್ತಿ–ಸಾಮರ್ಥ್ಯಗಳನ್ನು ಸತತ ಹೆಚ್ಚು, ಹೆಚ್ಚಾಗಿ ಅಭಿವ್ಯಕ್ತಗೊಳಿಸುವುದರ ಮೂಲಕ ತನ್ನ ಪರಿಪೂರ್ಣತೆಯನ್ನು ಸಾಧಿಸಿಕೊಳ್ಳುವುದಕ್ಕೆ ಮತ್ತು ತನ್ನದೇ ದಿವ್ಯ ನೈಜತೆಯೊಂದಿಗೆ ಏಕತೆ ಪಡೆಯುವುದಕ್ಕೆ ಯತ್ನಿಸುತ್ತಿರುತ್ತಾಳೆ. ತನ್ನ ಚಿಂತನಶೀಲ ಮಾನವ ವ್ಯಕ್ತಿಯಲ್ಲಿ ಈ ಪೃಥ್ವಿಯ ಮೇಲೆ ಪ್ರಪ್ರಥಮವಾಗಿ ಆಕೆ ಸ್ವ–ಪ್ರಜ್ಞೆಯ ಸಾಧನ ಮತ್ತು ಸಂಕಲ್ಪಕ್ಕನುಗುಣವಾದ ಕಾರ್ಯ ವ್ಯವಸ್ಥೆಗಳನ್ನು ಸಂಯೋಜಿಸಿದ್ದಾಳೆ. ಇದರಿಂದ ಪ್ರಕೃತಿ ಮಾತೆಯ ಯೋಗದ ಭವ್ಯವಾದ ಉದ್ದೇಶವು ಶೀಘ್ರಗತಿಯಲ್ಲಿ, ಬಲವತ್ತರವಾಗಿ ಕೊನೆಗಾಣಬಹುದು. ಸ್ವಾಮಿ ವಿವೇಕಾನಂದರು ಹೇಳಿರುವಂತೆ, ಯೋಗವು ಮಾನವ ಉತ್ಕ್ರಾಂತಿಯನ್ನು ದೈಹಿಕ ಅಸ್ತಿತ್ವದ ಒಂದೇ ಜೀವನದಲ್ಲಿ, ಇಲ್ಲವೆ ಕೆಲವೇ ವರ್ಷಗಳಲ್ಲಿ, ಇಲ್ಲವೆ ಕೆಲವೇ ತಿಂಗಳುಗಳಲ್ಲಿ ಸಂಕ್ಷೇಪಿಸುವಂತೆ ಮಾಡುವ ದಿವ್ಯ ಸಾಧನವಾಗಿದೆ.

– ಶ್ರೀ ಅರವಿಂದರು

**ಅನುಬಂಧ :**

## ಒಂದು ನೂರಾಇಪ್ಪತ್ತು ವರ್ಷಗಳ ಹಿಂದೆ

(ಅಮೇರಿಕೆಯ ಚಿಕ್ಯಾಗೋ ನಗರದಲ್ಲಿ 1893 ರ ಸಪ್ಟಂಬರ್ ತಿಂಗಳು 11, 15, 19, 20, 26 ಮತ್ತು 27 ದಿನಾಂಕಗಳಂದು ಜರುಗಿದ ವಿಶ್ವದ ಸರ್ವಧರ್ಮ ಸಂಸತ್ತಿನಲ್ಲಿ ಸ್ವಾಮಿ ವಿವೇಕಾನಂದರು ಉಪನ್ಯಾಸ ನೀಡಿದರು.)

**ಪ್ರಾರಂಭದ ಅಧಿವೇಶನದಲ್ಲಿ ಅವರು ನೀಡಿದ ಉಪನ್ಯಾಸದ ಅಂಶಗಳು :**

ಅಮೆರಿಕೆಯ ಬಂಧು ಭಗಿನಿಯರೇ,

ನೀವು ನಮಗೆ ನೀಡಿದ ಹಾರ್ದಿಕ ಸ್ವಾಗತದಿಂದಾಗಿ ಅನಿರ್ವಚನೀಯ ಆನಂದವನ್ನು ನನ್ನ ಹೃದಯದಲ್ಲಿ ತುಂಬಿಕೊಂಡು ಮಾತನಾಡಲು ಎದ್ದು ನಿಂತಿದ್ದೇನೆ. ಜಗತ್ತಿನಲ್ಲಿಯ ಅತ್ಯಂತ ಪ್ರಾಚೀನ ಸನ್ಯಾಸಿ ವರ್ಗದ ಹೆಸರಿನಲ್ಲಿ ನಿಮಗೆ ಧನ್ಯವಾದಗಳು. ಎಲ್ಲ ಜಾತಿ, ಮತ, ಪಂಥಗಳಿಂದ ಕೂಡಿದ ಕೋಟ್ಯಾನುಕೋಟಿ ಹಿಂದೂ ಜನತೆಯ ಹೆಸರಿನಲ್ಲಿ ನಿಮಗೆ ಧನ್ಯವಾದಗಳು.

ಪೌರ್ವಾತ್ಯ ದೇಶಗಳಿಂದ ಆಗಮಿಸಿದ ಪ್ರತಿನಿಧಿಗಳನ್ನು ಕುರಿತು ಈ ವೇದಿಕೆಯ ಮೇಲೆ ಮಾತನಾಡಿದ ಕೆಲವು ಉಪನ್ಯಾಸಕರಿಗೂ ನನ್ನ ಹಾರ್ದಿಕ ಧನ್ಯವಾದಗಳು. ಬಹಳ ದೂರದಿಂದ ಆಗಮಿಸಿರುವ ಈ ಪೌರ್ವಾತ್ಯರು ಬೇರೆ ಬೇರೆ ದೇಶಗಳಿಗೆ ಧರ್ಮ ಸಹಿಷ್ಣುತೆಯ ಸಂದೇಶ ಬೀರಿದ ದೇಶಗಳಿಗೆ ಸೇರಿದವರೆಂದು ಅಭಿಮಾನಪಟ್ಟುಕೊಳ್ಳಬಹುದೆಂದು ಈ ಉಪನ್ಯಾಸಕರು ಹೇಳಿದರು. ಜಗತ್ತಿಗೆ ಧರ್ಮ ಸಹಿಷ್ಣುತೆ ಮತ್ತು ವಿಶ್ವದ ಧರ್ಮಗಳನ್ನು ಒಪ್ಪಿಕೊಳ್ಳುವುದನ್ನು ಕಲಿಸಿಕೊಟ್ಟ ಧರ್ಮಕ್ಕೆ ಸೇರಿದವನೆಂದು ನನಗೆ ಅಭಿಮಾನವೆನಿಸುತ್ತದೆ. ನಾವು ಕೇವಲ ವಿಶ್ವವ್ಯಾಪಿ ಧರ್ಮ ಸಹಿಷ್ಣುತೆಯಲ್ಲಿ ನಂಬಿಕೆಯನ್ನಿರಿಸಿದ್ದೇವಷ್ಟೇ ಅಲ್ಲ, ಎಲ್ಲ ಧರ್ಮಗಳು ನಿಜವಾದವುಗಳು ಎಂದು ಒಪ್ಪುತ್ತೇವೆ. ಈ ಪೃಥ್ವಿಯ ಎಲ್ಲ ದೇಶಗಳಿಂದ ಧಾರ್ಮಿಕ ಹಿಂಸೆಗೊಳಪಟ್ಟು ಶರಣಾಗತರಾಗಿ ಬಂದವರಿಗೆಲ್ಲ ಆಶ್ರಯ ನೀಡಿದ ದೇಶ ನಮ್ಮದು ಎಂಬ ಹೆಮ್ಮೆ ನನಗಿದೆ. ನಮ್ಮ ದೇಶದ ಆಶ್ರಯ ಬಯಸಿಬಂದ, ಅಳಿದುಳಿದ, ಅತ್ಯಂತ ಶುದ್ಧ ಇಸ್ರೇಲೀಯ ಜನಾಂಗದವರನ್ನು ನಾವು ಎದೆಗವಚಿಕೊಂಡು ಬರಮಾಡಿ–ಕೊಂಡಿದ್ದೇವೆಂದು ತಿಳಿಸಲು ನನಗೆ ಹೆಮ್ಮೆಯೆನಿಸುತ್ತದೆ. ರೋಮನ್ನರ ಕ್ರೂರ ದಬ್ಬಾಳಿಕೆಗೆ ಒಳಪಟ್ಟು, ಅವರ ಪವಿತ್ರ ದೇವ ಮಂದಿರ ನೆಲಸಮವಾದ ವರ್ಷವೇ



ಅವರು ದಕ್ಷಿಣ ಭಾರತಕ್ಕೆ ಬಂದು ನಮ್ಮ ಆಶ್ರಯ ಪಡೆದರು. ಭವ್ಯ ಝೊರಾಸ್ಟ್ರಿಯನ್ ರಾಷ್ಟ್ರದ ಅಳಿದುಳಿದ ಜನಾಂಗಕ್ಕೆ ಆಶ್ರಯವಿತ್ತು ಇಂದಿಗೂ ಅದರ ಪೋಷಣೆಯಲ್ಲಿ ಆಸಕ್ತವಾಗಿರುವ ಉದಾತ್ತ ಧರ್ಮಕ್ಕೆ ಸೇರಿದವನೆಂಬ ಹೆಮ್ಮೆ ನನಗಿದೆ. ಬಂಧು ಭಗಿನಿಯರೇ ಕೋಟಿಗಟ್ಟಲೆ ಜನರು ದಿನ ನಿತ್ಯ ಪಠಣ ಮಾಡುವ ಒಂದು ಶ್ಲೋಕದ ಅರ್ಥವನ್ನು ಇಲ್ಲಿ ಹೇಳಬಯಸುವೆ. ನನ್ನ ಬಾಲ್ಯದಿಂದ ಪಠಿಸುತ್ತ ಬಂದ ಶ್ಲೋಕವದು : "ಬೇರೆ, ಬೇರೆ ಉಗಮ ಸ್ಥಾನಗಳುಳ್ಳ, ಬೇರೆ ಬೇರೆ ನದಿಗಳೆಲ್ಲ ತಮ್ಮ ನೀರನ್ನು ಸಮುದ್ರದಲ್ಲಿ ಬೆರೆಸುವಂತೆ ಓ ಭಗವಂತ, ಬೇರೆ ಬೇರೆ ಪ್ರವೃತ್ತಿಗಳಿಗನುಗುಣವಾಗಿ ಅವರು ಬೇರೆ ಬೇರೆ ಮಾರ್ಗಗಳಲ್ಲಿ ಹೊರಟಿದ್ದರೂ, ಆ ಮಾರ್ಗಗಳಲ್ಲಿ ಕೆಲವು ಅಂಕು–ಡೊಂಕಾಗಿ ಇಲ್ಲವೆ ನೇರವಾಗಿ ಇರುವ ವೈವಿಧ್ಯ ಕಂಡುಬಂದರೂ ಅವೆಲ್ಲವೂ ನಿನ್ನ ಕಡೆಗೇ ಕರೆದೊಯ್ಯುತ್ತವೆ."

ಪ್ರಸ್ತುತ ಅಧಿವೇಶನವು ಈವರೆಗೆ ಜರುಗಿದ ಘನ ಗಂಭೀರ ಸಮ್ಮೇಲನಗಳಲ್ಲಿ ಒಂದಾಗಿದ್ದು ಭಗವದ್ಗೀತೆಯಲ್ಲಿ ಬೋಧಿಸಲಾದ ತತ್ವವೊಂದನ್ನು ಎತ್ತಿಹಿಡಿದು ಜಗತ್ತಿಗೇ ಸಾರುವಂತಿದೆ : "ಯಾವುದೇ ರೂಪದಲ್ಲಿ ಯಾರೇ ನನ್ನ ಬಳಿ ಬರಲಿ, ಅವನನ್ನು ನಾನು ಸ್ವೀಕರಿಸುವೆ, ಎಲ್ಲ ಜನರೂ ಪ್ರಯಾಸ ಪಡುತ್ತ ನಡೆಯುತ್ತಿರುವ ದಾರಿಗಳೆಲ್ಲವೂ ಕೊನೆಗೆ ಅವರನ್ನು ನನ್ನ ಬಳಿಗೇ ಕರೆತರುತ್ತವೆ." ಮತಾಭಿಮಾನ, ಪರಮತ ವೈರ ಮತ್ತು ಅವುಗಳ ಪೀಳಿಗೆಯಾದ ಉನ್ಮತ್ತ ಧರ್ಮಭ್ರಾಂತಿ ಇವು ಬಹುಕಾಲದಿಂದ ಪೃಥ್ವಿಯನ್ನಾಳುತ್ತ ಬಂದಿವೆ. ಅವು ಈ ಭೂಮಿಯನ್ನು ಕೊಲೆ–ಸುಲಿಗೆಗಳಿಂದ ತುಂಬಿಬಿಟ್ಟಿವೆ, ಆಗಾಗ್ಗೆ ಅದನ್ನು ರಕ್ತದಿಂದ ತೋಯಿಸಿಬಿಟ್ಟಿವೆ, ನಾಗರಿಕತೆಗಳನ್ನು ನಾಶಪಡಿಸಿವೆ, ಇಡೀ ದೇಶಗಳನ್ನು ನಿರಾಶೆಯತ್ತ ತಳ್ಳಿಬಿಟ್ಟಿವೆ. ಈ ಭಯಂಕರ ರಾಕ್ಷಸರ ಹಾವಳಿಯಿಲ್ಲದೆ ಹೋಗಿದ್ದರೆ ಮಾನವ ಸಮಾಜವು ಇಂದಿನ ಮಟ್ಟಕ್ಕಿಂತ ಹೆಚ್ಚು ಮುಂದುವರಿಯಬಹುದಿತ್ತು. ಆದರೆ ಅವುಗಳ ಕೊನೆಗಾಲ ಈಗ ಸಮೀಪಿಸಿದೆ. ಇಂದು ಬೆಳಿಗ್ಗೆ ಈ ಅಧಿವೇಶನದ ಗೌರವಾರ್ಥ ಸೂಚಕವಾದ ಘಂಟಾನಾದವು ಎಲ್ಲ ಉನ್ಮತ್ತ ಧರ್ಮಭ್ರಾಂತಿಯ, ಶಸ್ತ್ರಾಸ್ತ್ರ ಇಲ್ಲವೆ ಲೇಖನಿಯಿಂದ ಒದಗುವ ಎಲ್ಲ ಕ್ರೂರ ಹಿಂಸೆಯ ಹಾಗೂ ಒಂದೇ ಗುರಿಯತ್ತ ಸಾಗಿರುವ ವ್ಯಕ್ತಿ–ವ್ಯಕ್ತಿಗಳಲ್ಲಿಯ ಎಲ್ಲ ವಿರಸ ಭಾವಗಳ ಮರಣ ಸೂಚಕ ಘಂಟಾನಾದವಾಗಲೆಂದು ಉತ್ಕಟ ಭಾವದಿಂದ ಹಾರೈಸುತ್ತೇನೆ.

**ಸಮಾರೋಪ ಉಪನ್ಯಾಸದ ಅಂಶಗಳು :**

... ನೆಲದಲ್ಲಿ ಬೀಜವನ್ನು ಬಿತ್ತಿದ್ದಾಗಿದೆ, ಮಣ್ಣು, ಹವೆ ಮತ್ತು ನೀರನ್ನು ಅದರ

ಸುತ್ತಲೂ ಒದಗಿಸಲಾಗಿದೆ. ಈ ಬೀಜವು ಮಣ್ಣಾಗುವುದೆ? ಹವೆಯಾಗುವುದೆ? ಇಲ್ಲವೆ ನೀರಾಗುವುದೆ? ಇಲ್ಲ, ಅದು ಒಂದು ಸಸಿಯಾಗುವುದು, ತನ್ನ ಬೆಳವಣಿಗೆಯ ತತ್ವನ್ನನುಸರಿಸಿ ಬೆಳೆಯುವುದು; ಹವೆ, ಮಣ್ಣು ಮತ್ತು ನೀರನ್ನು ಹೀರಿಕೊಂಡು ಆ ಬೀಜ ಅವುಗಳನ್ನು ಸಸಿಯ ದ್ರವ್ಯವನ್ನಾಗಿ ರೂಪಾಂತರ–ಗೊಳಿಸುವುದು ಮತ್ತು ಸಸಿಯಾಗಿ ಬೆಳೆಯುವುದು.

ಧರ್ಮದ ಬೆಳವಣಿಗೆಯೂ ಹೀಗೆಯೆ. ಕ್ರೈಸ್ತ ಮತೀಯನು ಹಿಂದೂ ಇಲ್ಲವೆ ಬೌದ್ಧನಾಗತಕ್ಕದ್ದಲ್ಲ, ಹಾಗೆಯೆ ಹಿಂದೂ ಮತೀಯನು ಇಲ್ಲವೆ ಬೌದ್ಧ ಮತೀಯನು ಕ್ರೈಸ್ತನಾಗತಕ್ಕದ್ದಲ್ಲ. ಆದರೆ ಪ್ರತಿಯೊಬ್ಬನೂ ಇತರ ಧರ್ಮೀಯರ ಸಾರಸತ್ಯ–ವಾಗಿರುವ ಚೈತನ್ಯವನ್ನು ಹೀರಿಕೊಳ್ಳಬೇಕು ಮತ್ತು ತನ್ನ ವೈಯಕ್ತಿಕತೆಯನ್ನು ಉಳಿಸಿಕೊಂಡು ತನ್ನ ಬೆಳವಣಿಗೆಯ ನಿಯಮಕ್ಕನುಸಾರವಾಗಿ ಬೆಳೆಯಬೇಕು.

ಸರ್ವ ಧರ್ಮಗಳ ಈ ಸಂಸತ್ತು ಜಗತ್ತಿಗೆ ಏನನ್ನಾದರೂ ತೋರಿಸಿದ್ದರೆ ಅದು ಇಂತಿದೆ : ಪಾವಿತ್ರ್ಯ, ಪರಿಶುದ್ಧತೆ, ಔದಾರ್ಯ ಇವು ಜಗತ್ತಿನ ಯಾವುದೇ ಚರ್ಚು ಇಲ್ಲವೆ ಧರ್ಮಪೀಠಕ್ಕೆ ಸೇರಿದ ಸ್ವತ್ತಲ್ಲ ಮತ್ತು ಪ್ರತಿಯೊಂದು ಧರ್ಮ ಪದ್ಧತಿಯೂ ಅತ್ಯುನ್ನತ ಚಾರಿತ್ರ್ಯವುಳ್ಳ ಸ್ತ್ರೀ–ಪುರುಷರಿಗೆ ಜನ್ಮ ನೀಡಿದೆ. ಈ ಪ್ರತ್ಯಕ್ಷ ಪ್ರಮಾಣವಿರುವಾಗ ಯಾರಾದರೂ ತಮ್ಮ ಧರ್ಮವೊಂದೇ ಕೊನೆಯವರೆಗೆ ಬಾಳಬಹುದೆಂದೂ ಉಳಿದೆಲ್ಲ ಧರ್ಮಗಳು ನಾಶಹೊಂದುವವೆಂದೂ ಕನಸು ಕಾಣುತ್ತಿದ್ದರೆ ಅವರಿಗಾಗಿ ನನ್ನ ಹೃದಯಾಂತರಾಳದಿಂದ ಮರುಕ ಪಡುತ್ತೇನೆ ಮತ್ತು ಅವರಿಗೆ, ಸ್ವಲ್ಪೇ ದಿನಗಳಲ್ಲಿ, ಯಾವುದೇ ಪ್ರತಿರೋಧ ಬಂದೊದಗಿದಾಗಲೂ ಕೂಡ, ಪ್ರತಿಯೊಂದು ಧರ್ಮದ ಧ್ವಜದ ಮೇಲೆ "ಸಹಾಯ ನೀಡಿರಿ, ಹೊಡೆದಾಡಬೇಡಿರಿ", "ಜೀರ್ಣಿಸಿಕೊಳ್ಳಬೇಕಲ್ಲದೆ ನಾಶಮಾಡತಕ್ಕದ್ದಲ್ಲ", "ಸಾಮರಸ್ಯ, ಶಾಂತಿಗಳಿರಬೇಕಲ್ಲದೆ ವೈಮನಸ್ಸಲ್ಲ" ಎಂದು ಬರೆಯಲಾಗುವುದು ಎಂಬುದನ್ನು ಒತ್ತಿಹೇಳುತ್ತೇನೆ.

ಸ್ವಾಮಿ ವಿವೇಕಾನಂದರು ಕೊಟ್ಟ ಕರೆ, ಅದನ್ನು ಕೇಳಿದ ಎಲ್ಲ ಜನರ ಹೃದಯವನ್ನು ನೇರವಾಗಿ ತಟ್ಟಿತು, ಜನರನ್ನು ಅವರ ಆಳಗಳಲ್ಲಿ ಬಡಿದೆಬ್ಬಿಸಿತು, ಸಾರ್ವತ್ರಿಕ ಪ್ರಶಂಸೆ ಮೂಡಿಬಂದಿತು ಮತ್ತು ನೂರಾರು ಜನ ಹೆಚ್ಚಿನ ಜ್ಞಾನ ಹಾಗೂ ಪ್ರಕಾಶಕ್ಕಾಗಿ ಅವರನ್ನು ಸುತ್ತುವರಿದರು.

ಅವರ ಸಂದೇಶ ದೇಶ–ದೇಶಾಂತರಗಳಲ್ಲಿ ಹರಡಿತು, ಸುತ್ತುವರಿದ ಅಂಧಕಾರದಲ್ಲಿ ಅದು ಆಶಾದಾಯಕ ಸಂದೇಶವಾಗಿತ್ತು. ದ್ವೇಷ, ಅಸಹಿಷ್ಣುತೆ, ಸಂಕುಚಿತತೆಗಳನ್ನು ಹೊಡೆದಟ್ಟಲು ಪಣತೊಟ್ಟ ಪ್ರೀತಿ–ಅನುಕಂಪಗಳ ಸಂದೇಶವಾಗಿತ್ತು, ಶಾಶ್ವತ ಜೀವನದ ಮುದ್ರೆಯನ್ನದು ಹೊತ್ತುಕೊಂಡಿತ್ತು.



**ಒಪ್ಪೋಲೆ :**
**ಅಖಿಲ ಭಾರತ ಪತ್ರಿಕೆ, ಮಾರ್ಚ್, 2013**

| ಪುಟ ಮತ್ತು ಸಾಲು | ತಪ್ಪು | ಒಪ್ಪು |
|---|---|---|
| 8, ಸಾಲು 3 | ಆವರಲ್ಲಿ | ಅವರಲ್ಲಿ |
| 26, ಸಾಲು 8 | ಸ್ವ–ಆಭಿವೃದ್ಧಿ | ಸ್ವ–ಅಭಿವೃದ್ಧಿ |
| 34, ಕೆಳಗಿನಿಂದ ಸಾಲು 19 | ಸಶರೀರದಾಗಿ | ಸಶರೀರರಾಗಿ |

## ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 21ನೇ ಏಪ್ರಿಲ್ 2013 ರ ಭಾನುವಾರದಂದು ಡಾ. ಎಲ್ಲಪ್ಪ ರೆಡ್ಡಿ, ನಿವೃತ್ತ ಕಾರ್ಯದರ್ಶಿ, ಪರಿಸರ ಇಲಾಖೆ, ಕರ್ನಾಟಕ ಸರ್ಕಾರ ಇವರಿಂದ "The Sacred Tress" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಅನೇಕ ಗುರುಬಂಧುಗಳು ಹಾಗೂ ಇತರರು ಹಾಜರಿದ್ದರು.

ದಿನಾಂಕ 24ನೇ ಏಪ್ರಿಲ್ 2013 ರ ಬುಧವಾರದಂದು "ಶ್ರೀಮಾತೆಯವರು ಪಾಂಡಿಚೇರಿಗೆ ಆಗಮಿಸಿದ ದಿನವನ್ನಾಗಿ ಆಚರಿಸಲಾಯಿತು. ಬೆಳಿಗ್ಗೆ 7.00 ರಿಂದ 7.30 ರವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ಅದೇ ದಿನ ಸಾಯಂಕಾಲ 5.00 ಗಂಟೆಯಿಂದ 6.30 ಗಂಟೆಯವರೆಗೆ "A Word on Consciousness & Existence" ಎಂಬ ವಿಷಯದ ಬಗ್ಗೆ ಶ್ರೀಯುತ ಭಾಸ್ಕರ ರೆಡ್ಡಿಯವರು ಉಪನ್ಯಾಸ ನೀಡಿದರು. ತತ್ಸಂಬಂಧ 24ನೇ ಏಪ್ರಿಲ್ ನಿಂದ 31ನೇ ಮೇ 2013 ರ ವರೆಗೂ "The Significance of Numbers and Dates" by Sri Aurobindo and The Mother ಎಂಬ ವಿಷಯದ ಬಗ್ಗೆ ವಸ್ತು ಪ್ರದರ್ಶನವನ್ನು ಆಯೋಜಿಸಲಾಗಿದೆ.



*"Let Thy Light be in me like a Fire that makes all alive,*
*Let Thy Divine Love penetrate me."*

- The Mother

**RNI No. 22511/1971**
No. of Pages **52 + 4 (Cov. Page)**
KAR Reg No : CPMG/KA/BGS/368/2012-2014
Permitted to Post 10th of Every Month. Reg. Valid till : 31-12-2014
Licensed to Post at MBC, Bangalore GPO, Bangalore - 560 001

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು - 560 078
ದೂರವಾಣಿ : 080-22449882, 22459268

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bangalore - 560 078. Phone : 080 - 2244 9882.